ಲ್ಲಿಯುವವರು ಈ ಧೀರ ರಮಣಿಯರು?
ಲ್ಲಿಗೆ ಹೊರಟಿಹರು?
ಈ ಮಹಿಳೆಯರು ಪ.ಬಂಗಾಳದ ಆ ಪ್ರಸಿದ್ಧ ಪಂಚಾಯತಿ ರಾಜ್ಯದಲ್ಲಿ
ಮ್ಮಸ್ಥಾನ ಸ್ಥಾಪನೆಗಾಗಿ ಹೋರಾಟ ನಡೆಸಿಹರು



ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 15 | 20 ಜೂನ್ 1993
ಸಂಚಿಕೆ 24 | ರೂ. 2.00

ರಾಮ ದೇವಸ್ಥಾನ ಕಟ್ಟುವುದು ಯಾರು?

ಬಿ.ಜೆ.ಪಿ.ಯೊಂದಿಗೆ ಕಾಂಗ್ರೈ ಸ್ಪರ್ಧೆ

-- ಪಾಲಿಟ್‌ಬ್ಯೂರೊ

ದೇಶದ ಮುಂದೆ ಈಗ ನಾಲ್ಕು ಪ್ರಮುಖ ಸಮಸ್ಯೆಗಳಿವೆ, ಕೋಮುವಾದದ ಅಪಾಯ, ಸರಕಾರದ ಜನ-ವಿರೋಧಿ ಆರ್ಥಿಕ ನೀತಿಗಳು, ವಿಚ್ಛಿದ್ರಕಾರಿ ಪ್ರತ್ಯೇಕತಾವಾದಿ ಶಕ್ತಿಗಳಿಂದ ಈಗಲೂ ಮುಂದುವರಿಯುತ್ತಿರುವ ಬೆದರಿಕೆ ಹಾಗೂ ಭ್ರಷ್ಟಾಚಾರದ ಹಗರಣಗಳು. ಇವುಗಳ ವಿರುದ್ಧ ವ್ಯಾಪಕ ಹೋರಾಟ ನಡೆಯಬೇಕಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಅವರು ಎರಡುದಿನಗಳ (ಜೂನ್ 9,10) ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಭೆ ಚರ್ಚಿಸಿದ ವಿಷಯಗಳ ಬಗ್ಗೆ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಿದ್ದರು.

ನರಸಿಂಹರಾವ್ ಸರಕಾರ ಭ್ರಷ್ಟಾಚಾರಕ್ಕೆ ರಕ್ಷಣೆ ನೀಡುತ್ತಿದೆ. ಇದು ನ್ಯಾಯಮೂರ್ತಿ ರಾಮಸ್ವಾಮಿ ಪ್ರಕರಣದಲ್ಲಿ ಹಾಗೂ ಶೇರು ಹಗರಣದ ತನಿಖೆಯಲ್ಲಿ ಕಂಡು ಬರುತ್ತಿದೆ ಎಂದ ಸುರ್ಜಿತ್ ಸಿಬಿಐ ಹರ್ಷದ್ ಮೆಹ್ತಾರಿಂದ ಲಂಚ ಪಡೆಯುತ್ತಿದ್ದವರು ಯಾರು ಎಂದು ಬಹಿರಂಗವಡಿಸಬೇಕೆಂದು ಒತ್ತಾಯಿಸಿದರು. ಜಂಟಿ ಸಂಸದೀಯ ಸಮಿತಿ ಈ ಹಗರಣದ ಬುಡಕ್ಕೆ ಹೋಗಿ ನಿರ್ಭಯದಿಂದ ಎಲ್ಲಾ ಅಂಶಗಳನ್ನು ಪ್ರಕಟಿಸಬೇಕು. ಇಲ್ಲವಾದರೆ ಇಂತಹ ತನಿಖೆಗಳ ಬಗ್ಗೆ ಜನರಲ್ಲಿರುವ ಅವಿಶ್ವಾಸವನ್ನು ನಿವಾರಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಟ್ಟರು.

ರಾವ್ ಸರಕಾರ ಕೋಮುವಾದೀ ಶಕ್ತಿಗಳ ವಿರುದ್ಧವೂ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತಿಲ್ಲ. ಬಕ್ರಿ ಟ್ರಿಬ್ಯೂನಲ್ ಆರ್.ಎಸ್.ಎಸ್.- ಭಜರಂಗದಳದ ಮೇಲಿನ ನಿರ್ಬಂಧವನ್ನು ರದ್ದು ಮಾಡಿದ ಇತ್ತೀಚಿನ ಪ್ರಕರಣದ ಉದಾಹರಣೆ ನೀಡುತ್ತಾ "ಇಂತಹ ವಿಫಲತೆ ಆಡಳಿತದ ಅಸಾಮರ್ಥ್ಯದಿಂದ ಉಂಟಾದದ್ದಲ್ಲ. ಕೋಮುವಾದೀ ಅಪಾಯವನ್ನು ಎದುರಿಸುವ ರಾಜಕೀಯ ಇಚ್ಛಾಶಕ್ತಿ, ದೃಢತೆ ನರಸಿಂಹರಾವ್ ಸರಕಾರದಲ್ಲಿ ಇಲ್ಲ ಎಂಬುದರ ಸಂಕೇತ" ಎಂದರು. 'ಸೋಮಯಜ್ಞ' ಸಂಘಟಿಸಿದವರು ಬಾಬ್ರಿ ಮಸೀದಿ ಧ್ವಂಸಮಾಡಿದಲ್ಲೇ ದೇವಸ್ಥಾನ ಕಟ್ಟಲು ಕರೆ ನೀಡಿದ್ದರ ಬಗ್ಗೆ ಹೇಳುತ್ತಾ "ಅಯೋಧ್ಯಾ ಸಮಸ್ಯೆಯ ಪರಿಹಾರ ಕ್ರಮಗಳನ್ನು ತಿಳಿಯಪಡಿಸುತ್ತಾ, ಅದನ್ನು 143 ನೇ ಕಲಮಿನ ಪ್ರಕಾರ ಸುಪ್ರಿಂ ಕೋರ್ಟ್‌ಗೆ ಒಪ್ಪಿಸಿದಂದಿನಿಂದಲೂ ಪ್ರಧಾನಮಂತ್ರಿಗಳು ಸಲಹೆಗೆ ಬಿಜೆಪಿ ಮಾಡಬೇಕೆಂದಿರುವುದನ್ನು ತಾನೇ ಮಾಡುವ ಅಪಾಯಕಾರಿ ಮಾರ್ಗ ಹಿಡಿದಿದ್ದಾರೆ. ಸರಕಾರೀ ಟ್ರಸ್ಟ್‌ನ ಮೂಲಕ ವಿವಾದಿತ ಸ್ಥಳದಲ್ಲೇ ದೇವಸ್ಥಾನ ಕಟ್ಟುವ ತಂತ್ರ ಹಿಡಿದಿದ್ದಾರೆ. ಇಂತಹ ತಂತ್ರಗಳು ಕೋಮುವಾದೀ ಶಕ್ತಿಗಳನ್ನು ಇನ್ನಷ್ಟು ಬಲಗೊಳಿಸಿ ಅವರ ವಿಚ್ಛಿದ್ರಕಾರಿ ಕಾರ್ಯಗಳನ್ನು ನ್ಯಾಯಬದ್ಧಗೊಳಿಸುತ್ತವೆ" ಎಂದರು.

ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವ ಬಗ್ಗೆ ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವ ಕಾಂಗ್ರೆಸ್(ಐ) ವಿಚಾರ ಒಂದು ಸ್ವಾಗತಾರ್ಹ ಕ್ರಮ ಎಂದ ಸುರ್ಜಿತ್ "ಆದರೆ ಹಿಂದಿನ ಅನುಭವಗಳಿಂದ ಹೇಳುವುದಾದರೆ ಕಾಂಗ್ರೆಸ್ ಸರಕಾರ ಧರ್ಮವನ್ನು ರಾಜಕೀಯದಿಂದ ದೂರವಿಡುವ ಉದ್ದೇಶಕ್ಕೆ ನೆರವಾಗುವ ಈಗಿರುವ ಕಾನೂನುಗಳನ್ನೇ ಬಳಸಿಲ್ಲ" ಎಂದರು. ಮಸೂದೆಯ ಕರಡನ್ನು ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳೊಂದಿಗೆ ಚರ್ಚಿಸಿ ನಂತರ ಅಂತಿಮಗೊಳಿಸಬೇಕು. ಈ ಅಂತಿಮ ಕರಡನ್ನು ನೋಡಿದ ಮೇಲೆಯೇ ಇದು ನಿಜವಾಗಿಯೂ ಉದ್ದೇಶ ಈಡೇರಿಸಬಲ್ಲದೇ ಎಂಬ ಬಗ್ಗೆ ಸಿಪಿಐ(ಎಂ) ಅಭಿಪ್ರಾಯ ಕೊಡುತ್ತದೆ. ಏಕೆಂದರೆ ಕಾಂಗ್ರೆಸ್ (ಐ)ನದ್ದು ಕೋಮುವಾದಿ ಶಕ್ತಿಗಳೊಂದಿಗೆ ರಾಜಿಮಾಡಿಕೊಳ್ಳುವ ಜಾಯಮಾನ ಎಂದು ಅವರು ಹೇಳಿದರು. ಕಾಂಗ್ರೆಸ್(ಐ)ನ್ನು ಜಾತ್ಯತೀತ ಪಕ್ಷವೆನ್ನಬಹುದೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಇನ್ನೂ ಕೂಡಾ ನಾಯಕತ್ವದ ರಾಜಿ ಧೋರಣೆಯ ಬಗ್ಗೆ ತೀವ್ರ ಆತಂಕಗೊಂಡಿರುವ ಕಾಂಗ್ರೆಸ್ಸಿಗರು ಆ ಪಕ್ಷದಲ್ಲಿರುವುದರಿಂದ ಅದನ್ನು ಜಾತ್ಯತೀತ ಪಕ್ಷವೆನ್ನಬಹುದು ಎಂದರು.

ಮುಂಬರುವ ಚುನಾವಣೆಗಳಲ್ಲಿ ಎಡ ಜಾತ್ಯಾತೀತ ಪಕ್ಷಗಳ ಮೈತ್ರಿಯ ಬಗ್ಗೆ, ಜನ

ಪುಟ 2ನೋಡಿ

ಕಾಂಗ್ರೈ - ಬಿ.ಜೆ.ಪಿ. ಅನೈತಿಕ ಸಂಬಂಧದ ಮೊದಲಗರ್ಭಪಾತ

ವಿಫಲಗೊಂಡ ಬಂಗಾಳ ಬಂದ್

ಗ್ರಾಮೀಣ ಬಂಗಾಳ ಹಾಗೂ ಪಶ್ಚಿಮ ...ಗಾಳದ ಕೈಗಾರಿಕಾ ಪ್ರದೇಶಗಳು ಕಾಂಗ್ರೈ ...ಜೆಪಿ ಯ ಜೂನ್ 7ರ ಬಂದ್ ಕರೆ...ನ್ನು ತಿರಸ್ಕರಿಸಿವೆ. ಕಲ್ಕತ್ತೆ ನಗರ ಮತ್ತು ...ರ ಕೆಲವು ವರ್ಗಗಳಲ್ಲಿ ಮಾತ್ರ ಅದು ಜನ...ವನ್ನು ಭಾಗಶಃ ತಟ್ಟಿತು. ಕಾಂಗ್ರೆಸ್(ಐ) ...ರ್ಯಕರ್ತರು ಸಾರಿಗೆ ಕಾರ್ಮಿಕರು, ...ರಿಕಾ ಕಾರ್ಮಿಕರು, ರಾಜ್ಯ ಸರ್ಕಾರಿ ...ರರು ಹಾಗೂ ಇತರ ಕಚೇರಿ ನೌಕರನ್ನು ...ರಿಸಿ ಭಯೋತ್ಪಾದನೆ ಮಾಡಿ ಬಂದ್ ...ಸಲು ಯತ್ನಿಸಿದರೂ ರಾಜ್ಯದ ಎಲ್ಲಾ ...ರಿಕಾ ಪ್ರದೇಶಗಳಲ್ಲಿ ಕಾರ್ಖಾನೆಗಳು, ...ೆಗಳು ತೆರೆದಿದ್ದವು. ಕಚೇರಿಗಳಲ್ಲಿ ...ತ್ರ ಹಾಜರಾತಿ ಕಮ್ಮಿಯಿತ್ತು ಎಂದು ...ಎಸ್. ವರದಿಮಾಡಿದೆ. ಬಸ್ಸು ...ಮೇಲೆ, ಕಾರ್ಖಾನೆಗಳ ಬಳಿ ಬಾಂಬ್ ...ಟಿಸಿ ಬೆದರಿಸುವ ಪ್ರಯತ್ನ ಹಲವಡೆ ...ಯಿತು.

ಕಾಂಗ್ರೆಸ್(ಐ)-ಬಿಜೆಪಿ ಮುಖಂಡರು ...ದ ಕುಮ್ಮಕ್ಕು ನೀಡಿದರೂ ಶಾಂತಿ ...ಕಲು ಸಾಧ್ಯವಾಗಿದೆ ಎಂದು ಎಡರಂಗ ...ಕ್ಷ ಶೈಲೇನ್ ದಾಸ್ ಗುಪ್ತಾ ತಿಳಿಸಿದ್ದಾರೆ. ಉತ್ಪಾದನೆ ನಿಲ್ಲದಂತೆ ಮಾಡುವುದು ಎಡರಂಗ ಆಡಳಿತದ ಮುಖ್ಯ ಕರ್ತವ್ಯವಾಗಿತ್ತು. ಅದನ್ನು ನೆರವೇರಿಸಲಾಗಿದೆ ಎಂದರು. ಕೇಂದ್ರ ಸರ್ಕಾರ ಹಾಗೂ ಎಐಸಿಸಿ (ಐ) ಮುಖಂಡರ ನಿರ್ದೇಶನದಿಂದ ರೈಲ್ವೇ ಅಧಿಕಾರಿಗಳು ರೈಲು ಸಂಚಾರ ತಡೆಹಿಡಿದರು ಎಂದು ಶೈಲೇನ್ ದಾಸ್ ಗುಪ್ತಾ ಆಪಾದಿಸಿದರು. ಜನಗಳನ್ನು ಅಣಿನೆರೆಸಿದ್ದರಿಂದ ಶಾಂತಿ ಭಂಜಕರನ್ನು ತಡೆಹಿಡಿಯಲು ಸಾಧ್ಯವಾಯಿತು. ಇದು ರಾಜಕೀಯ ಪ್ರಕ್ಷೋಭೆಯನ್ನು ಅಂತ್ಯಗೊಳಿಸಬೇಕು ಎಂದು ಅವರು ಆಶಿಸಿದ್ದಾರೆ.

ಬಂದ್ ಹಿಂದಿನ ದಿನ ಎಐಸಿಸಿ(ಐ) ವಕ್ತಾರ ವಿ.ಎನ್. ಗಾಡ್ಗೀಳ್ ಕಾಂಗ್ರೈನ ರಾಜ್ಯ ಘಟಕದ ಕರೆಯನ್ನು ಸಮರ್ಥಿಸಿ ಕೊಳ್ಳುತ್ತಾ ಬಿಜೆಪಿಯೂ ಅದೇ ದಿನ ಬಂದ್ ಕರೆಕೊಟ್ಟಿರುವುದು ಕೇವಲ 'ಕಾಕತಾಳೀಯ' ಎಂದರು. ಆದರೆ ಪಂಚಾಯತ್ ಚುನಾವಣೆಗಳಲ್ಲಿ ಬಹಿರಂಗ ಶಾಮೀಲಿನ ನಂತರ ನಡೆದಿರುವ ಈ ಬಂದ್ ಎಡರಂಗದ ವಿರುದ್ಧ ಆ ಎರಡು

ಪುಟ 7ನೋಡಿ

ಅಗಸ್ಟ್ 9 - 14 "ರಾಷ್ಟ್ರೀಯ ಐಕ್ಯತೆ-ಸ್ವಾತಂತ್ರ್ಯ ರಕ್ಷಿಸಿ" ವಾರಚರಣೆ

ರಾಷ್ಟ್ರೀಯ ಏಕತಾ ಆಂದೋಲನದ ಕರೆ

...ಜೂನ್ 2 ರಂದು ನವದೆಹಲಿಯಲ್ಲಿ ನಡೆದ ...ಯ ಏಕತಾ ಆಂದೋಲನ'ದ ಪೂರ್ಣ ಪ್ರಮಾ...ಭೆ ಅಗಸ್ಟ್ 9 ರಿಂದ 14 ರವರೆಗೆ ರಾಷ್ಟ್ರೀಯ ...ಮತ್ತು ಸ್ವಾತಂತ್ರ್ಯದ ರಕ್ಷಣೆಯ ವಾರಾಚರಣೆ ನಡೆ...ರೆ ನೀಡಿದೆ.

...ಜನತಾದಳದ ಮುಖಂಡ ಹಾಗೂ ಮಾಜಿ ಲೋಕ...ಕ್ಷ ರಬಿರಾಯ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ... 1993 ರಲ್ಲಿ ಆರಂಭವಾಗಿ ಏಪ್ರಿಲ್ 14ರ ...ಂದಿಗೆ ಮುಕ್ತಾಯಗೊಂಡ ಮೊದಲ ಹಂತದ ಕೋಮುವಾದ ವಿರೋಧಿ ಪ್ರಚಾರ-ಪ್ರಕ್ಷೋಭೆಯ ನಂತರದ ಘಟ್ಟದ ಬಗ್ಗೆ ಚರ್ಚಿಸಲು ಈ ಸಭೆ ಸೇರಿತ್ತು.

ಸ್ವಾತಂತ್ರ್ಯ ದಿನದ ವೇಳೆಗೆ ಮುಕ್ತಾಯವಾಗುವಂತೆ ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವ ಬಗ್ಗೆ ಒಂದು ವಾರದ ಪ್ರಚಾರ-ಪ್ರಕ್ಷೋಭೆ ನಡೆಸಬೇಕೆಂಬ ಪ್ರಸ್ತಾಪವನ್ನು ಆಂದೋಳನದ ಕಾರ್ಯದರ್ಶಿ ಮಂಡಳಿ ಪರವಾಗಿ ಪ್ರಕಾಶ್ ಕಾರಟ್ ಮಂಡಿಸಿದರು. ರಾವ್ ಸರಕಾರದ ಹೊಸ ಆರ್ಥಿಕ ನೀತಿಗಳ ವಿರುದ್ಧ ಆಂದೋಲನ ಆರಂಭಿಸುವ ಸಾಮೂಹಿಕ ಸಂಘಟನೆಗಳ ಏಪ್ರಿಲ್ 15 ರ ಸಮಾವೇಶದ ಕರೆಯನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ರಮ ರೂಪಿಸಲಾಗಿದೆ. ಎಲ್ಲಾ ಸಾಮೂಹಿಕ ಸಂಘಟನೆಗಳು ಈ ಆಂದೋಲನಕ್ಕೆ ಹಾಗೂ ಸಪ್ಟೆಂಬರ್ 9 'ಭಾರತ್ ಬಂದ್'ಗೆ ಸಿದ್ಧತೆ ನಡೆಸುತ್ತಿರುವಾಗ ಅವುಗಳ ಭಾಗವಾಗಿ ಈ ಕಾರ್ಯಕ್ರಮಗಳನ್ನು ನಡೆಸಬಹುದು ಎಂದು 'ರಾಷ್ಟ್ರೀಯ ಏಕತಾ ಆಂದೋಲನ' ವಿಚಾರ ಮಾಡಿ ಈ ಪ್ರಸ್ತಾಪ ಮಂಡಿಸಿತು.

ಚರ್ಚೆಗಳ ನಂತರ ಏಪ್ರಿಲ್ 9 ರಿಂದ 14 ರವರೆಗೆ ಕೋಮುವಾದಿಗಳ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳಿಂದ ಅಪಾಯಕ್ಕೊಳಗಾಗಿರುವ ಸ್ವಾತಂತ್ರ್ಯ ಹಾಗೂ ಐಕ್ಯತೆಯ ರಕ್ಷಣೆಯ ವಾರಾಚರಣೆ ನಡೆಸಲು, ಈ ಒಂದು ವಾರದಲ್ಲಿ ವಿಭಿನ್ನ ಸಾಮೂಹಿಕ ಸಂಘಟನೆಗಳು ಒಂದು ನಿರ್ದಿಷ್ಟ ದಿನವನ್ನು ಅಖಿಲ ಭಾರತ ಮಟ್ಟದಲ್ಲಿ ಆಚರಿಸಬೇಕೆಂದು ನಿರ್ಧರಿಸಲಾಯಿತು. ಅವುಗಳ ವಿವರ ಹೀಗಿದೆ.

ಆಗಸ್ಟ್ 9 - ವಿದ್ಯಾರ್ಥಿ ಯುವಜನ ಸಂಘನೆಗಳು
ಆಗಸ್ಟ್ 10 - ಮಹಿಳಾ ಸಂಘಟನೆಗಳು
ಆಗಸ್ಟ್ 11 - ಕಾರ್ಮಿಕ ಸಂಘಗಳು
ಆಗಸ್ಟ್ 12 - ರೈತ - ಕೃಷಿಕೂಲಿಕಾರರ ಸಂಘಟನೆಗಳು
ಆಗಸ್ಟ್ 13 - ಸಾಂಸ್ಕೃತಿಕ ಮತ್ತು ಬೌದ್ಧಿಕ ಸಂಘಟನೆಗಳು
ಆಗಸ್ಟ್ 14 - ರಾಜಕೀಯ ಪಕ್ಷಗಳು

ಈ ಸಂದರ್ಭಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯದ ಮಹತ್ವವನ್ನು ವಿವರಿಸುವ ಒಂದು ಫೋಲ್ಡರನ್ನು ಪ್ರಕಟಿಸಲು ಕೂಡಾ ನಿರ್ಧರಿಸಲಾಯಿತು.

ಈ ಸಭೆಯಲ್ಲಿ ಹರ್ಕಿಶನ್ ಸಿಂಗ್ ಸುರ್ಜಿತ್, ಶರದ್ ಯಾದವ್, ಇಂದ್ರಜಿತ್ ಗುಪ್ತ, ಚಿತ್ತ ಬಸು, ಕುಲದೀಪ್ ನಯ್ಯಾರ್, ರಾಮ್‌ಜೀ ರಾಯ್, ಪ್ರಮಿಳಾ ದಂಡವತೆ, ಬೃಂದಾ ಕಾರಟ್, ಕುಮುದಿನಿ ಪತಿ, ಎಂ.ಕೆ. ಫಂಧೆ, ಹಾಗೂ ಎ.ಬಿ. ಬರ್ದನ್ ಮತ್ತಿತರರು ಮಾತನಾಡಿದರು.

ವಾರದನುಡಿ

...ಶ್ಚಿಮಬಂಗಾಳದಲ್ಲಿ ಬಿಜೆಪಿ ಕಾಂಗ್ರೆಸ್(ಐ) ...ದುರೆಯೇರಿದೆ. ಕಾಂಗ್ರೆಸ್(ಐ) ...ಂಗಾಳದ ಗ್ರಾಮಾಂತರ ಕೊರಕಲುಗ...ಗೆ ಬಿಜೆಪಿ ಮೊಸಳೆಯನ್ನು ಆಹ್ವಾನಿಸಿದೆ.

ಕಾಂ. ಬಿಮಾನ್ ಬಸು
ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು

ಒಳಪುಟಗಳಲ್ಲಿ

ಉತ್ತರ ಕನ್ನಡ ಶಿಕ್ಷಣರಂಗ ಮಕ್ಕಳನ್ನು

ಕಬಳಿಸುತ್ತಿರುವ ಮನೆಪಾಠದ ಮಾರಿ

--- ಟಿ.ಎಸ್

ಕಡಲತೀರದ ಜಿಲ್ಲೆಯಾದ ಉತ್ತರ ಕನ್ನಡದಲ್ಲಿ ಶಿಕ್ಷಣ ಅಕ್ಷರಶಃ ವ್ಯಾಪಾರಕ್ಕೊಳಗಾಗಿ ಅಮಾಯಕ ಮಕ್ಕಳ ಭವಿಷ್ಯ ಕತ್ತಲೆಯತ್ತ ಸಾಗುತ್ತಿದೆ. ಶಿಕ್ಷಣ ಕೇವಲ ಉಳ್ಳವರ ಮಕ್ಕಳಿಗೆ ಮೀಸಲಾಗುತ್ತ, ಜಾತಿ ರಾಜಕಾರಣ, ಗೂಂಡಾ ಪಡೆ, ಖಾಸಗೀ ಟ್ಯೂಶನ್, ಬೋಗಸ್ ಕೋರ್ಸ್‌ಗಳ ವಾರಸುದಾರರ ಅಪವಿತ್ರ ಮೈತ್ರಿಯಿಂದ ಪತನದತ್ತ ಧಾವಿಸುತ್ತಿದೆ.

ಮನೆ ಪಾಠದ ಮಾರಿ

ಹಣವಂತರ ಮಕ್ಕಳಿಗೆ ಪರೀಕ್ಷೆಯಲ್ಲಿ ಪಾಸಾಗಲು, ಮೇಲಿನ ದರ್ಜೆಪಡೆಯಲು, ಉನ್ನತ ಶಿಕ್ಷಣಕ್ಕೆ ಸೀಟು ಗಿಟ್ಟಿಸಲು ಲಂಚವಾಗಿ ಮನೆಪಾಠಗಳು ಬೆಳೆಯುತ್ತಿವೆ. ಪ್ರೈಮರಿ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ವ್ಯಾಪಿಸಿರುವ ಈ ರೋಗ ಮುಂದೊಂದು ದಿನ ಈ ಖದೀಮರಿಂದ ಮಾರ್ಕ್ಸ್‌ಕಾರ್ಡ್‌ಗಳನ್ನು ಪ್ರಕಟಿಸಿ ಮಾರಾಟಕ್ಕಿಡುವ ಸ್ಥಿತಿ ತಲುಪಿಸಲಿವೆ.

ಯಾವುದೇ ತತ್ವಾದರ್ಶವಾಗಲೀ, ನೀತಿ ಸಂಹಿತೆಗಳಾಗಲಿ, ಬೆಳೆಸಿಕೊಳ್ಳದ ಶಿಕ್ಷಕರೆಂಬ ರಕ್ಕಸರಿಂದ ಪರೀಕ್ಷೆಗಳಲ್ಲಿ ಪಾಸಾಗಲು ಶ್ರೀಮಂತ ವಿದ್ಯಾರ್ಥಿ ಸಮುದಾಯಕ್ಕೆ ಸುಲಭದಾರಿಯಾಗಿ ಬಿಟ್ಟಿದೆ. ಈ ಟ್ಯೂಷನ್‌ಗಳು. ಮುಂಜಾನೆಯಿಂದ ರಾತ್ರಿಯವರೆಗೆ ನಡೆಯುವ ಈ ಗೃಹಪಾಠಗಳು ಸ್ವಂತ ಬಾಡಿಗೆಯ ಮತ್ತು ಸಂಘ ಸಂಸ್ಥೆಗಳ ಕಟ್ಟಡದಲ್ಲಿ ನಿರಾತಂಕವಾಗಿ ನಡೆಯುತ್ತಿವೆ. ತಲೆ ಹಿಡುಕರಂತೆ ಕ್ಲಾಸಿನಲ್ಲಿ "ತಿಳಿಯದಿದ್ದರೆ ಮನೆಗೆ ಬನ್ನಿ ..." ಎಂಬ ಬಹಿರಂಗ, ನಾಚಿಕೆಗೇಡಿನ ಆಹ್ವಾನ ನೀಡಿ ಒಂದು ತಾಸಿನ ಕ್ಲಾಸಿನಲ್ಲಿ 15 ನಿಮಿಷ ಕಲಿಸಿ ಪಲಾಯನ ಗೈಯುತ್ತಿದ್ದಾರೆ. ಇವರಿಗೆ ಗೂಂಡಾಗಳು, ಉನ್ನತ ಅಧಿಕಾರಿಗಳು, ಕಳ್ಳ ಹಣದ ಖದೀಮ ಪಾಲಕರ ಮುಕ್ತ ಬೆಂಬಲವಿದೆ.

ದಾಂಡೇಲಿಎಂಬ ಮಾಯಾನಗರಿ

ಉತ್ತರ ಭಾರತದ ವಲಸೆಗಾರ ಮಾವಾಡಿಗಳ ಖದೀಮ ಬಂಡವಾಳಶಾಹಿಗಳ ತವರಾಗಿರುವ ದಾಂಡೇಲಿ, ಈ ಮೇಲಿನ ಕೃತ್ಯದಲ್ಲಿ ಮುಂಚೂಣಿಯಲ್ಲಿದೆ. ಸ್ಥಳೀಯ ಬಂಗೂರ ನಗರ ಕಾಲೇಜಿನ ನಾಲ್ವರಾದ ವಿ.ಪಿಸಿಂಗ್, ಎನ್.ಟಿ. ನಾಯ್ಕ ಎಸ್.ಟಿ. ಭಟ್, ಎಚ್. ಎಸ್. ಹುರೇಕುಂಡಿ ಮತ್ತು ಸಮಾಜವಾದಿ ಧುರೀಣ ದಿವಂಗತ ದಿನಕರ ದೇಸಾಯಿಯವರ ಸಂಸ್ಥೆಯಲ್ಲಿ ಜನತಾ ವಿದ್ಯಾಲಯದ ಇನ್ನಿತರ ನಾಲ್ವರು ಈ ಎಲ್ಲಾ ಅಕೃತ್ಯದಲ್ಲಿ ತೊಡಗಿದ್ದಾರೆ.

ಪ್ರಥಮ ಪಿ.ಯು.ಸಿ.ಯಲ್ಲಿ ಪಾಸ್ ಆಗಲು ಹಲವರಿಗೆ ಪಾಠಗಳು ಅನಿವಾರ್ಯವಾಗಿವೆ. ಇದರಿಂದ ಹಲವು ಬಡ ವಿದ್ಯಾರ್ಥಿಗಳು ತಮ್ಮ ಉತ್ತಮ ಭವಿಷ್ಯಕ್ಕಾಗಿ ಹಣಬೇಡಿ ತಂದು ಇವರಿಗೆ ನೀಡಬೇಕಾಗಿದೆ. ಇನ್ನೂ ಪಿ.ಯು.ಸಿ. ದ್ವಿತಿಯ ವರ್ಷದ ವಿಜ್ಞಾನದ ವಿದ್ಯಾರ್ಥಿಗಳಿಗೆ ಡೆಂಟಲ್, ಇಂಜಿನಿಯರಿಂಗ್, ಮೆಡಿಕಲ್ ಸೀಟಿನ ಅಮಿಷ ತೋರಿಸಲಾಗುತ್ತದೆ.

ಇದೇ ರೀತಿ ಬಿಜೆಪಿ., ಕಾಂಗ್ರೆಸ್(ಐ) ಇತ್ಯಾದಿ ರಾಜಕೀಯ ಪಕ್ಷಗಳ ನಾಯಕರ ಅಧ್ಯಕ್ಷತೆಯಲ್ಲಿ ಮಾಲಿಕತ್ವದಲ್ಲಿರುವ ಜಿಲ್ಲೆಯ ಇತರ ತಾಲೂಕುಗಳಲ್ಲಿರುವ ಶಾಲೆ, ಕಾಲೇಜುಗಳಲ್ಲಿ ಈ ಪದ್ಧತಿ ಭರದಿಂದ ಹಬ್ಬತೊಡಗಿದೆ.

> **ಇದಕ್ಕೇನ್ನುತ್ತೀರಿ ಸಾರ್?**
>
> - ದಾಂಡೇಲಿಯ ಟ್ಯೂಶನ್ ಪಿಡುಗಿನ ಬಗ್ಗೆ ಸ್ಥಳೀಯ ಶಾಸಕ, ಹಾಲಿ, ವಿರೋಧ ಪಕ್ಷದ ನಾಯಕ ಆರ್. ವಿ. ದೇಶಪಾಂಡೆ ಸಾಹೇಬರಿಗೆ ಹಲವು ಬಾರಿ ತಿಳಿಸಲಾಗಿದೆ. ಇದಕ್ಕೆ ಅವರೇನೆನ್ನುತ್ತಾರೆ?
> - ಹಿಂದಿನ ಶಿಕ್ಷಣ ಸಚಿವರುಗಳಾದ ವೀರಪ್ಪಮೊಯ್ಲಿ, ರಂಗನಾಥ್, ಹಾಲಿ ಶಿಕ್ಷಣ ಸಚಿವರಿಗೂ ಇದನ್ನು ತಿಳಿಸಲಾಗಿದೆ. ಇದಕ್ಕವರು ಏನು ಕ್ರಮ ಕೈಗೊಂಡಿದ್ದಾರೆ?
> - ವಿಶ್ವವಿದ್ಯಾಲಯದ ಪರವಾನಗಿಲ್ಲದೆ ನಡೆಸಲ್ಪಡುವ ಕೋರ್ಸ್‌ಗಳ ಬಗ್ಗೆ ವೈಸ್ ಚಾನ್ಸಲರ್ ಏನೆನ್ನುತ್ತಾರೆ?

ಫಲಿತಾಂಶ ಹೆಚ್ಚಿಸುವ ಸುಲಭ ತಂತ್ರ

ಜಿಲ್ಲೆಯ ಹಲವೆಡೆ ಹೈಸ್ಕೂಲು ಮತ್ತು ಕಾಲೇಜು, ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಪಕವಾಗಿ ಶ್ರೀಮಂತ ಗಿರಾಕಿಗಳನ್ನು ಸೆಳೆಯಲು ಮತ್ತು ತಮ್ಮ ಶಿಕ್ಷಣದ ಗುಣಮಟ್ಟದ ಬಗ್ಗೆ ನಂಬಿಕೆ ಹುಟ್ಟಿಸಲು ಶಿಕ್ಷಕರು -ಆಡಳಿತ ಮಂಡಳಿ ಸೇರಿ ನಡೆಸಿರುವ ಸುಲಭಮಾರ್ಗವೆಂದರೆ ಸಾಮೂಹಿಕ ಕಾಪಿಯ ಏರ್ಪಾಡು. ಕೆಲವಡೆ ತಮ್ಮ ಕೆಲಸಕ್ಕೆ ಬರದ, ಅನಪೇಕ್ಷಿತ ಕೆಲಸದಲ್ಲಿ ತೊಡಗಿರುವ ಹೆಗ್ಗಣಗಳಂಥ ಕಂದಮ್ಮಗಳನ್ನು 'ಶಿಕ್ಷಿತ'ರನ್ನಾಗಿ ಮಾಡಲು ಶ್ರೀಮಂತ ಪಾಲಕರು ಶಿಕ್ಷಕರಿಗೆ ಲಂಚ ನೀಡಿ ಈ ಕೆಲಸ ಮಾಡಿಸುತ್ತಿದ್ದಾರೆ.

ಇದಕ್ಕೆ ಇತ್ತೀಚಿಗೆ ದಾಂಡೇಲಿಯಲ್ಲಿ ನಡೆದ ಉದಾಹರಣೆಗಳನ್ನು ನೋಡಬಹುದು. ಹಿಂದಿನ ಡಿ.ವೈ.ಎಸ್.ಪಿ. ಕೆ. ನಿರಂಜನ್‌ನೆಂಬ ಖಾಕಿಧಾರಿಯ ಪುತ್ರಿ ಕಾಪಿ ಹೊಡೆಯಲು ಅವಕಾಶ ಕೊಡಲಾಯಿತು. ಮೊನ್ನೆ ನಡೆದ ಪರೀಕ್ಷೆಯಲ್ಲಿ ಮಾನ್ಯ ಪ್ರಾಚಾರ್ಯರ ರೂಮ್ ನಲ್ಲಿ ತಮಗೆ ಬೇಕಿದ್ದ ವಿದ್ಯಾರ್ಥಿಯೊಬ್ಬನಿಗೆ ಕಾಪಿ ಕೊಟ್ಟು ಬರೆಸಲಾಯಿತಂತೆ.

ಜಿಲ್ಲೆಯಲ್ಲಿ ಹಲವು ಹೈಸ್ಕೂಲುಗಳಲ್ಲಿ ಸ್ವತಃ ಶಾಲಾಶಿಕ್ಷಕರೇ ಸುಪರ್‌ವೈಜರ್ ಆಗಿ ಬಂದು ವಿದ್ಯಾರ್ಥಿಗಳಿಗೆ "ಸಹಾಯಹಸ್ತ" ಚಾಚುತ್ತಿದ್ದಾರೆ.

ಬೋಗಸ್ ಕೋರ್ಸ್‌ಗಳು

ಉದ್ಯೋಗ ದೊರಕಿಸುವ ಶಿಕ್ಷಣ ಎಂಬ ಹೆಸರಿನಲ್ಲಿ ಹಲವು ಕೋರ್ಸ್‌ಗಳು ಜಿಲ್ಲೆಯಾದ್ಯಂತ ತಲೆ ಎತ್ತಿ ಪಾಲಕರುಗಳಿಂದ ಸಹಸ್ರಾರು ರೂಪಾಯಿ ಫೀ ಪಡೆದು, ಕೆಲವರು ಬೋಗಸ್ ಪರೀಕ್ಷೆ ನಡೆಸಿ ಇನ್ನು ಕೆಲವರು ಪರೀಕ್ಷೆ ನಡೆಸದೆ ದಿನ ಬೆಳಗಾಗುವದರೊಳಗೆ ಕಣ್ಮರೆಯಾಗಿದ್ದಾರೆ.

ಸಲಕರಣೆಗಳಿಲ್ಲದೇ ನಡೆಸಲ್ಪಡುವ "ಎಕ್ಸರೇ ಟೆಕ್ನಿಷಿಯನ್" ಎಂಬ ಸಂಸ್ಥೆಯೊಂದು ಜಿಲ್ಲೆಯಲ್ಲಿದೆ. ಅಂತೆ ಹಿಂದೆ ಸರಿಯಾಗಿ 22 ಪಾಠಗಳ ಪ್ರಾಕ್ಟಿಕಲ್ ಸರಿಯಾಗಿ ನಡೆಸದೇ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆಯದೇ ಕೊನೆಯಲ್ಲಿ ವಿದ್ಯಾರ್ಥಿಗಳನ್ನು ತೊಂದರೆಗೆ ಸಿಲುಕಿಸಿದ ಬಿಎಡ್ ಕಾಲೇಜಿನ ದೊಡ್ಡ ಕಥೆ ಇದೆ.

ಬಂಗೂರ್ ನಗರ ಕಾಲೇಜಿನಲ್ಲಿ ಬೋಗಸ್ ಕಂಪ್ಯೂಟರ್ ಕೋರ್ಸ್ ಇನ್ನೂ ನಡೆಯುತ್ತಲೇ ಇದೆ. ಇದಕ್ಕೆ ವಿ.ವಿಯಿಂದ ಯಾವಾಗ ಮಾನ್ಯತೆ ದೊರೆತಿದೆ ಎನ್ನುವುದು ಯಕ್ಷ ಪ್ರಶ್ನೆಯಾಗಿಬಿಟ್ಟಿದೆ.


ಡೊನೇಶನ್ ಹಾವಳಿ

ಇಲ್ಲಿಯವರೆಗೆ ಕೇವಲ ತಾಂತ್ರಿಕ ಶಿಕ್ಷಣಕ್ಕೆ ಮಾತ್ರ ಮೀಸಲಾಗಿದ್ದ ಈ ಕಳ್ಳ ವ್ಯಾಪಾರ ಇಂದು ಡಿಗ್ರಿ ಕಾಲೇಜು ಮತ್ತು ಹೈಸ್ಕೂಲು ಮಟ್ಟಕ್ಕೂ ಬರುತ್ತಿದೆ. ಕಾಲೇಜು ಅಭಿವೃದ್ಧಿ ನಿಧಿ, ಕಟ್ಟಡ ನಿಧಿ, ಪಾಲಕರಿಂದ ದೇಣಿಗೆ ಮುಂತಾದ ಹೆಸರುಗಳಲ್ಲಿ ಹಬ್ಬುತ್ತಿದೆ.

ಇಂಥಹ ಕ್ರೂರ ಚಟುವಟಿಕೆಯನ್ನು ನಿಲ್ಲಿಸದಿದ್ದರೆ ಜಿಲ್ಲೆಯ ಬಡವಿದ್ಯಾರ್ಥಿಗಳು ಸಂಪೂರ್ಣ ಶಿಕ್ಷಣದಿಂದ ವಂಚಿತರಾಗುವ ದಿನಗಳು ಬರಲಿವೆ.

ಶಾಂತ ಕರಾವಳಿಯಲ್ಲಿ ಮೊಸಳೆಗಳು

- ಬೆಳ್ಳಗಿನ ಗಡ್ಡದ ಜಾಫ್ರಿ ಎನ್ನುವ ಸಂಶಯಾಸ್ಪದ ವ್ಯಕ್ತಿಯೊಬ್ಬ ಭಟ್ಕಳದಲ್ಲಿ "ನವಿನಿಹಾಲ್ ಸೆಂಟ್ರಲ್ ಸ್ಕೂಲ್" ಎಂಬ ಮಾನ್ಯತೆ ಪಡೆಯದ ಶಾಲೆ ನಡೆಸುತ್ತಿದ್ದು, ಕಳ್ಳಹಣದ ಖದೀಮರಿಂದ ಭಾರೀ ಮೊತ್ತದ ಡೊನೇಶನ್ ಪಡೆಯುವ ವ್ಯವಹಾರದಲ್ಲಿದ್ದಾನೆ. ಈತನ ಮೇಲ್ವಿಚಾರಣೆಯಲ್ಲಿ ಕೊಲೆಕೋ ಎನ್ನುವ ಹಾಸ್ಪಿಟಲ್ ಒಂದು ನಷ್ಟದಲ್ಲಿ ನಡೆಯುತ್ತಿದೆ. ಆದರೂ ತನ್ನ ಕಳ್ಳ ವ್ಯವಹಾರಗಳಿಗಾಗಿ ಈ ಆಸ್ಪತ್ರೆಯನ್ನು ನಡೆಸುತ್ತಾ, ಅದರ ಅಂಬುಲೆನ್ಸ್ ಬಳಸುತ್ತಿದ್ದಾನೆ.
- ಹಾಲಿ ರಾಜ್ಯ ಬಿಜೆಪಿ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿರುವ ಡಾ. ಎಂ.ಪಿ. ಕರ್ಕಿ ಎನ್ನುವವರ ಅಧ್ಯಕ್ಷತೆಯಲ್ಲಿ ನಡೆಯುವ ಹೊನ್ನಾವರ ಕಾಲೇಜು ಕಳೆದ ಐದು ವರ್ಷಗಳಿಂದ ಅಭಿವೃದ್ಧಿ ನಿಧಿ ಎಂದು ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸುತ್ತಿದೆ. ಇದರ ಹಿಂದಿನ ಮೆದುಳೆಂದು ಹಿಂದಿನ ಪ್ರಿನ್ಸಿಪಾಲ ಎಸ್. ಆರ್. ನಾಯಕ್‌ರತ್ತ ನೊಂದ ಪಾಲಕರು ಬೆರಳು ತೋರುತ್ತಾರೆ. ಸದ್ರಿ ಕಾಲೇಜಿನ ವಿಜ್ಞಾನ ವಿಭಾಗದ ಪಿ.ಎಂ. ಹೊನ್ನಾವರ, ಪಿ.ಎಸ್. ಹೆಬ್ಬಾರ್, ಎ.ವಿ. ಕುಲ್ಲೂಭಾಗ್ ಮತ್ತಿತರರು ಟ್ಯೂಶನ್ ಕೊಡುವ ದಂಧೆ ನಡೆಸುತ್ತಿದ್ದಾರೆ.
- ಅಂಕೋಲಾದಲ್ಲಿ ಭಾವಿಕೇರಿ ಹೈಸ್ಕೂಲಿನಲ್ಲಿ ವಿದ್ಯಾನಾರ್ವೇಕರ್ ಹಾಗೂ ಹಾಲಿ ಎಂ.ಎಲ್.ಎ. ಉಮಾ ಮಹೇಶ್ವರ್ ಭಟ್ ಎನ್ನುವವರ ರಾಜಕೀಯದಿಂದ, ಶಿಕ್ಷಕರ ನಡುವೆ ಸಶಸ್ತ್ರ ಕಾಳಗವೇ ನಡೆದಿದೆ. ಎಂ. ಎಲ್.ಎ. ಗಾಂಜಾ ಹೆರಾಯಿನ್ ಸ್ಮಗ್ಲರ್ ಎಂದು ರಾಷ್ಟ್ರಪತಿಗಳಿಗೆ ಪತ್ರಬರೆದ ಎಸ್.ವಿ. ನಾಯ್ಕ ಎನ್ನುವವರ ಬಂಧನ ಕೂಡಾ ನಡೆಸಲಾಗಿದೆ.



ಪುಸ್ತಕ ವಿಮರ್ಶೆ

ಚಾರಿತ್ರಿಕ ಹಿನ್ನೋಟ-ಮುನ್ನೋಟಗಳು ಮೇಳವಿಸಿದ ಕಾವ್ಯ

ಸೋನೆ ಮಳೆಯ ಸಂಜೆ

ಎಡ ಪಂಥೀಯ ಬದ್ಧತೆ ಎನ್ನುವುದು ಒಬ್ಬ ಕವಿಗೆ ತನ್ನಿಂದ ತಾನೇ ಒಂದು ವಿಶೇಷವಲ್ಲ. ಅದು ಕಾವ್ಯದ ಅಂತರಾಳದಲ್ಲಿ ಕುಂತು ದೃಷ್ಟಿ ದರ್ಶನವನ್ನು ಮಾತ್ರ ಚೂಪುಗೊಳಿಸಿ ಕಾವ್ಯದಲ್ಲಿ ಒಂದಾಗಿ ಹೋಗಬೇಕು. ಅಂದಾಗಲೇ ಬದ್ಧತೆಗೂ, ಕಾವ್ಯಕ್ಕೂ ಕೂಡಿಯೇ ಹಿರಿಮೆ ಪ್ರಾಪ್ತವಾಗುತ್ತದೆ. ಜಿ.ಎನ್. ಮೋಹನರ ಕಾವ್ಯ ಅಂಥ ರೀತಿಯದಾದ್ದರಿಂದಲೇ ಅವರಿಗೆ ಟೆನಿಸ್‌ದಂಥ ಕ್ರೀಡಾವಸ್ತು ಕ್ರೀಡೆಯ ವರ್ಣನೆ ಅಥವಾ ವೈಭವ ಆಗದೆ ಜೀವನದ ಹುಡುಕಾಟದ ದೃಷ್ಟಿಯನ್ನೊದಗಿಸಲು ಸಾಧ್ಯವಾಗಿರುವುದು 'ಟೆನಿಸ್ ಎರಡು ನೋಟ' ಹಾಗೆ ಸಾಮಾನ್ಯತೆಯಿಂದ ಮೇಲೇರಿ ಸಾರ್ಥಕವಾಗುವುದು ಅಂಥ ದೃಷ್ಟಿ ಮತ್ತು ದರ್ಶನದಿಂದ.

ಮೋಹನ್ ಹೇಳಿಕೆಯ ಕವಿಯಲ್ಲ. ಜೀವನಾನುಭವ ಕಾವ್ಯಾನುಭವವಾಗಿ ತಕ್ಕ ಪ್ರತಿಮೆಗಳನ್ನೊಳಗೊಂಡು ಭಾಷೆಯಲ್ಲಿ ಹದಗೊಂಡು ಹೊಸದಾಗಿ ಹುಟ್ಟಿಬರುವಂತಹದು. ಉದಾಹರಣೆಗಾಗಿ ಅವರ 'ಕೇರಳ 91'ನ್ನೇ ನೋಡಬಹುದು.

ಅಕ್ಷರ ಕಲಿಕೆಯಂಥ ಪ್ರಚಾರಾತ್ಮಕ ಘೋಷಣೆ ಅಥವಾ ಹಾಡಾಗಬಹುದಾದಂಥ ವಿಷಯ ಜೀವನ ಸರ್ವಸ್ವ ಎನ್ನುವಂತೆ, ಕಾವ್ಯದ ಹಿರಿಮೆಯ ಗರಿತೊಟ್ಟು ಮೂಡಿಬಂದಿರುವುದು ಒಟ್ಟಾರೆಯಾಗಿ ಆಶಯ-ವಿನ್ಯಾಸಗಳ ಅನ್ಯೋನ್ಯತೆಯ ಸಂಕಲ್ಪ ಸಿದ್ಧಿ ಎನ್ನಬಹುದು.

ಮೋಹನ್ ಸಶಕ್ತನಾದ ಕವಿ. ಅಂಥ ಕಾವ್ಯಕ್ಕೆ ಚಾರಿತ್ರಿಕ ಮುನ್ನೋಟ ಹಿನ್ನೋಟ ಮೇಳವಿಸಿದಾಗ, ದೃಷ್ಟಿ ಧೋರಣೆ ಚೂಪುಗೊಳಿಸುವಾಗ ಇಡೀ ಕನ್ನಡ ಚರಿತ್ರೆಯನ್ನೇ ಸಮಕಾಲೀನಗೊಳಿಸುವ, ಪರಂಪರೆಗೆ ಹೊಸ ಪರಿವೇಶವನ್ನು ತೊಡಿಸುವ ಸಾಧ್ಯತೆಯು ಸಾಕ್ಷಾತ್ಕಾರವಾಗುತ್ತದೆ. ಪಂಪನ ತೊಳಲಾಟ ಇಂಥಾದ್ದು. "ಬೆಳ್ಳಕ್ಕಿ ಎಲ್ಲಿ, ಹಾಲಕ್ಕಿ ಎಲ್ಲಿ, ಆ ಹಾಡೊ ಕಂಠವೆಲ್ಲಿ, ಗೀಜಗವು ಎಲ್ಲಿ ಚಿತ್ತಾರವೆಲ್ಲಿ, ಕನಸ ಕುಡುಕೆ-ಎಲ್ಲಿ," ಎಂದು ಕವಿಗೆ ತಕ್ಕ ಕಾವ್ಯಾವೇಶದಲ್ಲಿ ಹಾರೈಸಿದರೆ ವರ್ತಮಾನ ವ್ಯಂಗ್ಯ 'ಎದೆಯಲ್ಲಿ ಕಾವ್ಯ ಕೈಯಲ್ಲಿ ಖಡ್ಗ' ಎಂಬುದು. ಕನಸು-ಕಂತುಗಳ ತುರ್ತು ಪಂಪನಿಗೆ ಹೇಗೋ ಇಂದಿನ ಕವಿಗೂ ಹಾಗೇ.

ಕವಿಗೆ ಯಾವ ವ್ಯಕ್ತಿಂತೂ ವ್ಯಕ್ತಿಯೇ ಆದರ್ಶವಲ್ಲ. ವ್ಯಕ್ತಿ ಚರಿತ್ರೆಯ ಶಕ್ತಿ ಚಾಲಕನಾದಾಗ ಕಾವ್ಯಾರ್ಹನಾಗುತ್ತಾನೆ. ಅಂಥ ಶಕ್ತಿ ಚೆ' (ಚೆಗೆವಾರ).

'ಗೆರಿಲ್ಲಾ'ಗಳ ಹೋರಾಟಕ್ಕೆ ಹಿಂಸೆಯ ಅರ್ಥ ಹಚ್ಚುವುದು ಸುಲಭವಲ್ಲ. ಅಥವಾ ಸುಲಭವೇ ಆದರೆ ಅದು ಅನುಭವನಿಷ್ಠವಾಗುವುದಿಲ್ಲ. ಅನುಭವ ಎಷ್ಟು ಕ್ಲಿಷ್ಟವೂ ಅಮಾನವೀಯವೂ ಆಗಿದ್ದನ್ನು ಕವಿ ಸಶಕ್ತವಾದ ಪ್ರತಿಮೆಯ ಮೂಲಕ ಮೂರ್ತಗೊಳಿಸುತ್ತಾನೆ. "ಬಾಂಬುಗಳ ಅಡಿಯಲ್ಲಿ ಹಲವಾರು ಹಸುಳೆಗಳು ಪಾರಿವಾಳದ ದನಿಗೆ ನೂರು ಗುಂಡು"

ಕೆಲವೊಂದು (ಬೇರೆಯವರ) ಕವನಗಳು ತನ್ನ ಕೆಲವು ಸಾಲುಗಳನ್ನೇ 'ಎತ್ತಿಕೆ'ಗಾಗಿ ಒತ್ತಾಯಿಸುತ್ತವೆ. ಆದರೆ ಮೋಹನರ ಕವನ ಹಾಗೆ ಮೂಡುವುದಿಲ್ಲ. ಅದು ಕವಿತೆಯ ಸಾಂಗತ್ಯದಲ್ಲಿ ಹದವಾಗಿ ವಿನ್ಯಾಸ ಪಡೆದಿರುತ್ತದೆ. ಇದೊಂದು ವಿಶೇಷವೆ. ಈ ಸಮಾನತೆ ಸಮಾಜವಾದಿ ಕಾವ್ಯದ ಒಳ ವಿನ್ಯಾಸ ಕೂಡ ಆಗಿರಬಹುದೆ?

ಪ್ರೀತಿಯಂಥ ಸುಕುಮಾರ ಭಾವ ಯಾವ ಕವಿಯನ್ನು ಬಿಡಲಾರದು. ಪ್ರೀತಿಯ ಕುರಿತು ಹಾಡದಿದ್ದರೆ ಅವನೆಂಥ ಕವಿ. ಮೋಹನ ಪ್ರೀತಿಯ ಕುರಿತು ಅನೇಕ- ಕವಿತೆಯನ್ನು ಅಷ್ಟೇ ಮಾರ್ದವತೆಯೊಂದಿಗೆ, ಹೃದ್ಯತೆಯೊಂದಿಗೆ, ಹಾಡಿದ್ದಾರೆ. ಆದರೆ ಇಂದಿನ ಸಾಮಾಜಿಕ ಭಿತ್ತಿಯಲ್ಲಿ ಪ್ರೀತಿಯ ಚಿತ್ರ ಕೂಡ ಸುರಳೀತವಲ್ಲ, ಅಸಮಾನತೆ, ಅಸಹ್ಯತೆಗಳೇ ತುಂಬಿರುವ ಇಂದಿನ ಸಂದರ್ಭ ಪ್ರೀತಿಯಲ್ಲೂ ಸುಖಿಸಲಾರದ ವಿಷಾದ. ಅಂತೆಯೇ ಪ್ರೀತಿಯಲ್ಲಿ ವಿರಹ, ವಿಷಾದವೇ ಮಡುಗಟ್ಟುತ್ತದೆ.

ಎಲ್ಲ ಕವನಗಳಲ್ಲಿ ವಿಷಾದವೇ ಸ್ಥಾಯಿಯಾಗಿದೆ. ಮತ್ತು ಅದು ಕನಸುಗಳ ತಾಯಿ ಕೂಡ. ಭಂಗಗೊಂಡ ನೆನಸು, ಮಡುಗೊಂಡ ಕನಸು ಇಲ್ಲಿಯ ಕಾವ್ಯವನ್ನು ತೂಗಿವೆ.

ತನ್ನ ಆಲೋಚನೆಗಳು ಪ್ರತಿಮೆ, ಪ್ರತೀಕ, ಸಂಕೇತಗಳ ಮೂಲಕ ಅಭಿವ್ಯಕ್ತಿ ಪಡೆಯಬೇಕೆಂಬ ಛಲ ಒಬ್ಬ ಕವಿಗೆ ಒಳ್ಳೆಯದೆ. ಆದರೆ ಅದು ಇಷ್ಟೊಂದು ನಿರ್ಬಂತವಾಗಬೇಕೆ. ಚೆನ್ನಕ್ಕಂತೂ ಬೆಲೆ ಇದ್ದೇ ಇದೆ. ಆದರೆ ಕೊರಳ ತುಂಬ ಅದೇ ಆಗಬಾರದಲ್ಲ? ಎಂಬ ಅನ್ನಿಸಿಕೆ ನನ್ನದು.

ಅದೇನೇ ಇದ್ದರೂ 'ಸೋನೆ ಮಳೆಯ ಸಂಜೆ' ಯ ಕವಿ ಒಬ್ಬ ಸಶಕ್ತ ಕವಿ ಎಂಬುದು ನಿಚ್ಚಳವಾಗಿದೆ.

-- ಆರ್. ವಿ. ಭಂಡಾರಿ

> ಸೋನೆ ಮಳೆಯ ಸಂಜೆ:
> ಕವನ ಸಂಗ್ರಹ
> ಜಿ.ಎನ್. ಮೋಹನ್
> ಅಕ್ಷರ ಪ್ರಕಾಶನ, ಸಾಗರ

ರಾಮ ದೇವಸ್ಥಾನ ಕಟ್ಟುವುದು ಯಾರು? ಬಿ.ಜೆ.ಪಿ.ಯೊಂದಿಗೆ ಕಾಂಗ್ರೆ ಸ್ಪರ್ಧೆ (ಪಾಲಿಟ್‌ಬ್ಯೂರೊ)

ಪುಟ 1ರಿಂದ

ತಾದಳದ ವಿವಿಧ ಗುಂಪುಗಳ ನಡುವೆ ಐಕ್ಯತೆಗಾಗಿ ನಡೆಯುತ್ತಿರುವ ಪ್ರಯತ್ನಗಳ ಬಗ್ಗೆಯೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಚರ್ಚಿಸಿದೆ ಎಂದ ಸುರ್ಜಿತ್ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ್, ಹಿಮಾಚಲ ಪ್ರದೇಶದಲ್ಲಿನ ಮುಂಬರುವ ಚುನಾವಣೆಗಳು ದೇಶದ ರಾಜಕೀಯ ಭವಿಷ್ಯದ ದೃಷ್ಟಿಯಿರುವ ನಿರ್ಣಾಯಕ ಎಂದು ಅಭಿಪ್ರಾಯಪಟ್ಟರು. ಜನಾತದಳದ ವಿವಿಧ ಗುಂಪುಗಳ ವಿಲೀನ ಸಾಧ್ಯವಾಗಲಿಕ್ಕಿಲ್ಲ, ಬರಲು ಒಂದು ಚುನಾವಣಾ ಮೈತ್ರಿ ಮೂಡಿಬರುತ್ತದೆಂದು ಅವರು ಆಶಿಸಿದರು. ಉತ್ತರಪ್ರದೇಶ, ರಾಜಸ್ತಾನಗಳಲ್ಲಿ ಇಂತಹ ಮೈತ್ರಿ ನಿರ್ಣಾಯಕ ಅಂಶವಾಗುತ್ತದೆ ಎಂದರು.

ರಾವ್ ಸರಕಾರದ ವಿನಾಶಕಾರಿ ಆರ್ಥಿಕನೀತಿಗಳ ವಿರುದ್ಧ ಸಿಪಿಐ(ಎಂ)ನ ಹೋರಾಟ ಮುಂದುವರೆಯುತ್ತದೆ ಎಂದ ಸುರ್ಜಿತ್ ಎಡಪಕ್ಷಗಳ ನೇತೃತ್ವದ ಹಾಗೂ ಇತರ ಸಾಮೂಹಿಕ ಸಂಘಟನೆಗಳು ಸಮಾವೇಶಗಳು ಪಾದಯಾತ್ರೆಗಳು, ರ್‍ಯಾಲಿಗಳು ಹಾಗೂ ಅಂತಿಮವಾಗಿ ಸೆಪ್ಟೆಂಬರ್ 9 ರಂದು ಸಾರ್ವತ್ರಿಕ ಮುಷ್ಕರ ಹಾಗೂ ಭಾರತ್ ಬಂದ್‌ನ ಒಂದು ಸಾಮೂಹಿಕ ಕಾರ್ಯಾಚರಣೆ ಯೋಚನೆಯನ್ನು ರೂಪಿಸಿವೆ. ಇವುಗಳ ಮೂಲಕ ಈ ನೀತಿಗಳ ಅಪಾಯದ ಬಗ್ಗೆ ಜನಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಚುನಾವಣಾ ಆಯೋಗದ ವರ್ತನೆಗಳ ಬಗ್ಗೆ ಬೇಸರ ವ್ಯಕ್ತಪಡಿಸಿದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈಗಿನ ಏಕ ಸದಸ್ಯ ಚುನಾವಣಾ ಆಯೋಗವನ್ನು ಮೂವರು ಸದಸ್ಯರಿರುವ ಒಂದು ಆಯೋಗವನ್ನಾಗಿ ಪರಿವರ್ತಿಸಬೇಕು, ಇದಕ್ಕೆ ಸಂವಿಧಾನದಲ್ಲಿ ಅವಕಾಶವಿದೆ ಎಂದಿದೆ. ಈ ಬಗ್ಗೆ ಒಂದು ಪ್ರಚಾರ-ಪ್ರಕ್ಷೋಭೆ ನಡೆಸಲಾಗುವುದು ಎಂದು ಸುರ್ಜಿತ್ ತಿಳಿಸಿದರು.

ಅಯೋಧ್ಯಾ ಕಾಂಡ



ಆರ್‌ಎಸ್‌ಎಸ್.ನ ಯಾವ ನಿಲುವನ್ನು ನ್ಯಾಯಮಂಡಳಿ ಎತ್ತಿ ಹಿಡಿದಿದೆ, ಶೇಷಾದ್ರಿಯವರೇ?

ನ್ಯಾಯಮೂರ್ತಿ ಬಹ್ರಿ ಆಯೋಗ ಆರ್.ಎಸ್.ಎಸ್‌ನ ಮೇಲಿನ ನಿರ್ಬಂಧವನ್ನು ರದ್ದುಪಡಿಸಿದ್ದು ಹಿಂದುತ್ವ ಶಕ್ತಿಗಳನ್ನು ಎತ್ತಿ ಹಿಡಿದಂತಾಗಿದೆ, ಆರ್.ಎಸ್.ಎಸ್ ದೇಶಪ್ರೇಮಿ, ನ್ಯಾಯಬದ್ಧ ನಿಲುವು ತಳೆದಿದೆ ಎಂಬುದನ್ನು ಸಾಬೀತು ಪಡಿಸಿದಂತಾಗಿದೆ ಎಂದು ಆರ್.ಎಸ್.ಎಸ್ ಪ್ರಧಾನ ಕಾರ್ಯದರ್ಶಿ ಹೊ.ವೆ. ಶೇಷಾದ್ರಿಯವರು ಆನಂದ ತುಂದಿಲರಾಗಿ ಹೇಳಿದರು ಎಂದು ಪ್ರಕಟಿಸಿದ ಪತ್ರಿಕೆಯ ಇನ್ನೊಂದು ಪುಟದಲ್ಲಿ ಮತ್ತೊಂದು ಸುದ್ದಿಯೂ ಪ್ರಕಟವಾಗಿದೆ. ಗಮನಿಸಿದ್ದೀರಾ?

ಮುಂಬೈಯ ಅಬ್ದುಲ್ ರಶೀದ್ ಖಾನ್ ನಿವೃತ್ತ ನಾವಿಕ ಸೈನ್ಯಾಧಿಕಾರಿ ರಕ್ಷಾ ಸೇವಾ ಪದಕ ಪಡೆದ ನಾವಿಕ. ಆದರೆ ಆ ಪದಕ ಕೂಡ ಆತನನ್ನು ಕಳೆದ ಡಿಸೆಂಬರ್ ಗಲಭೆಗಳ ಸಮಯದಲ್ಲಿ ಮುಂಬೈ ಪೋಲೀಸರಿಂದ ರಕ್ಷಿಸಲಿಲ್ಲ.

ಮೇ 10 ರಂದು ಮಧ್ಯಾಹ್ನ 12.30 ಖಾನರವರ ಫ್ಲಾಟ್‌ಗೆ ಮುಂಬೈಯ ವರ್ಲಿ ಪೋಲೀಸ್ ಸ್ಟೇಶನ್ನಿನ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ಬಂದು ಖಾನ್‌ರವರನ್ನು ಬಂಧಿಸಿ ಒಯ್ದ. ಆದರೆ ಕಾನೂನಿನಂತೆ 24 ಗಂಟೆಗಳೊಳಗೆ ಆತನನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಿಲ್ಲ. ಅಥವಾ ಇತರ ಯಾವುದೇ ವಿಚಾರಣೆಗೆ ಅಗತ್ಯವಿಲ್ಲದ ಕಾನೂನಿನ ಪ್ರಕಾರ ಆತನನ್ನು ಬಂಧಿಸಿದ ಬಗ್ಗೆ ಪುರಾವೆ ನೀಡಲಿಲ್ಲ. ಸಾಲದಕ್ಕೆ ಈ ಬಗ್ಗೆ ಏನಾದರೂ ಕಾನೂನು ಕ್ರಮ ಕೈಗೊಂಡರೆ ಗತಿನೆಟ್ಟಗಾಗಲಿಕ್ಕಿಲ್ಲ ಎಂಬ ಬೆದರಿಕೆ ಹಿರಿಯ ಪೋಲೀಸ್ ಅಧಿಕಾರಿಯಿಂದ. ನಿವೃತ್ತರಾಗಿರುವ ಖಾನ್‌ರವರು ಮೂತ್ರಪಿಂಡದ ರೋಗದಿಂದ ಬಳಲುತ್ತಿದ್ದಾರೆ ಎಂದರೂ ಅವರಿಗೆ ಚಿತ್ರ ಹಿಂಸೆ ತಪ್ಪಲಿಲ್ಲ. ಚಿತ್ರಹಿಂಸೆಯ ನಂತರ ವೈದ್ಯಕೀಯ ನೆರವೂ ಇಲ್ಲ. ಈಗ ಆತನ ಹೆಂಡತಿ ನಜ್ಮಾ ಮುಂಬೈ ಪೋಲೀಸ್, ಮಹಾರಾಷ್ಟ್ರ ಸರಕಾರದ ವಿರುದ್ಧ ಮುಂಬೈ ಹೈಕೋರ್ಟಿನಲ್ಲಿ ಕೇಸ್ ಹಾಕಿದ್ದಾಳೆ. ಈ ಹಿಂದೆಯೂ ಒಮ್ಮೆ ನಾಲ್ಕು ದಿನಗಳ ಕಾಲ, ಮತ್ತೊಮ್ಮೆ ಹನ್ನೆರೆಡು, ಮೂರನೇಬಾರಿ ಮೂರು ದಿನ ರಶೀದ್‌ಖಾನ್‌ರನ್ನು ಬಂಧಿಸಲಾಗಿತ್ತು ಎಂದು ಆಕೆ ಹೇಳಿದ್ದಾಳೆ.

ಇಲ್ಲಿ ಕೇಳಿ ಸಫಿಯಾಳ ಕಥೆ. ಈಕೆಯ ಗಂಡ ಅಬ್ದುಲ್ ಅಖ್ತರ್ ಖಾನ್ ಮುಂಬೈಯಲ್ಲಿ ಕಸಬರಿಕೆ ತಯಾರಿಸಿ ಮಾರುತ್ತಿದ್ದಾನೆ. ಏಪ್ರಿಲ್ 18 ರಂದು ಆತ ಮನೆಯಲ್ಲಿರಲಿಲ್ಲ. ಆತನ ಪತ್ನಿ ಸಫಿಯಾ ಮತ್ತು ಒಂದು ವರ್ಷದ ಮಗುವನ್ನೂ ಪೋಲೀಸರು ಕೊಂಡೊಯ್ದರು. ಯಾವ ವಾರೆಂಟು ಇರಲಿಲ್ಲ. ಯಥಾಪ್ರಕಾರ ಪೋಲೀಸ್ ಥಡಿಏಟು ಒಂದು ವರ್ಷದ ಮಗುವನ್ನೂ ಬಿಡಲಿಲ್ಲ. ಅವರನ್ನು ನೋಡಲು ಅಬ್ದುಲ್ ಏಪ್ರಿಲ್ 20ರಂದು ಬಂದಾಗ ಅವನಿಗೆ ದೊಣ್ಣೆ, ದೆಲ್ಟುಗಳ ಏಟು ಎಲೆಕ್ಟ್ರಿಕ್ ಶಾಖ್, ಆಕೆಯೂ ಈಗ ಮುಂಬೈ ಪೋಲೀಸ್ ಕಮಿಶನ್‌ರ್ ಮಹರಾಷ್ಟ್ರ ಸರಕಾರದ ವಿರುದ್ಧ ಕೇಸು ಹಾಕಿದ್ದಾಳೆ.

ಆರ್.ಎಸ್.ಎಸ್.ನ "ನ್ಯಾಯಬದ್ಧ ನಿಲುವಿಗೂ ಈ ಅನ್ಯಾಯಕ್ಕೂ ಏನೂ ಸಂಬಂಧವಿಲ್ಲವೇ?"

ಮಹಾರಾಷ್ಟ್ರ ಸರಕಾರ ಹಾಗೂ ಮುಂಬೈಯ ಪೋಲೀಸ್ ಮುಖ್ಯಸ್ಥರ ವಿರುದ್ಧ ಡಿಸೆಂಬರ್, ಜನವರಿ ಹತ್ತಾರು ಕೇಸುಗಳು ದಾಖಲಾಗುತ್ತಿವೆಯಂತೆ. ಇದಕ್ಕೂ ಆರ್.ಎಸ್.ಎಸ್.ನ 'ಹಿಂದೂರಾಷ್ಟ್ರ' ಸ್ಥಾಪನೆಯ ಪ್ರಯತ್ನಕ್ಕೂ ಏನೇನೂ ಸಂಬಂಧವಿಲ್ಲ ಎಂದು ನಿಜವಾಗಿಯೂ ನ್ಯಾಯಮೂರ್ತಿ ಬಹ್ರಿ ನ್ಯಾಯಮಂಡಳಿಯ ತೀರ್ಪು ಸಾರಿದೆಯೇ?

ಅಯೋಧ್ಯೆಯಲ್ಲಿ ಈಗ ದೊಡ್ಡ ಗೋಡೆಯ ಮೇಲೆ ದೊಡ್ಡದೊಂದು ನೋಟೀಸ್ ನೇತಾಡುತ್ತಿದೆ. "ಮನೆ ಮಾರಾಟಕ್ಕಿದೆ". ಇದು ಬಾಬ್ರಿ ಮಸೀದಿ ಬಗ್ಗೆ ಇನ್ನೂ ನ್ಯಾಯಾಲಯದಲ್ಲಿ ಕೇಸಿನಲ್ಲಿ ಮುಸ್ಲಿಮರ ಪರವಾಗಿ ಪ್ರಮುಖ ಪ್ರತಿವಾದಿಯಗಿರುವಾತನ ತಮ್ಮ ಮಹಮ್ಮದ್ ಖಾಸಿಂ ಅನ್ಸಾರಿಯವರ ಮನೆ. ಆತ ಮನೆ ಮಾರಿ ಫೈಜಾಬಾದ್‌ನಲ್ಲಿ ನೆಲೆಸುವ ಯೋಚನೆಯಲ್ಲಿದ್ದಾರಂತೆ. ಡಿಸೆಂಬರ್ 6ರ ನಂತರದ ಘಟನೆಗಳಾದ ಆರು ತಿಂಗಳಲ್ಲೂ, ಸೋಮಯಜ್ಞದಿಂದಲೂ ಇನ್ನೂ ಪರಿಸ್ಥಿತಿ ಸುಧಾರಿಸಿಲ್ಲವಾದ್ದರಿಂದ ಅಯೋಧ್ಯೆ ತ್ಯಜಿಸಲು ಯೋಚಿಸುತ್ತಿರುವ ಹಲವಾರು ಮುಸ್ಲಿಂ ಕುಟುಂಬಗಳಲ್ಲಿ ಇದೊಂದು. ಬಾಬ್ರಿ ಮಸೀದಿ ಧ್ವಂಸಗೊಳ್ಳುತ್ತಿದ್ದಾಗಲೇ ದೆಂಕಿಗಾಹುತಿಯಾದ ಅಯೋಧ್ಯೆಯ 265 ಮುಸ್ಲಿಂ ಮನೆಗಳಲ್ಲಿ ಇದೊಂದು.


ಇವಕ್ಕೂ ಆರ್.ಎಸ್.ಎಸ್.ನ 'ದೇಶಪ್ರೇಮಿ' 'ನ್ಯಾಯಬದ್ಧ' ನಿಲುವಿಗೂ ಏನೇನೂ ಸಂಬಂಧವಿಲ್ಲ ಎಂದು ನ್ಯಾಯಮಂಡಲಿ ತೀರ್ಪಿತ್ತಿದೆಯೇ?

ಆರ್.ಎಸ್.ಎಸ್.ಮಂದಿ ಹಾಗೆಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ನಿಜ ಸಂಗತಿಯೇನು?

ಆರ್.ಎಸ್.ಎಸ್-ಭಜರಂಗದಳದ ಮೇಲಿನ ನಿರ್ಬಂಧವನ್ನು ರದ್ದು ಮಾಡಿದರೂ ವಿ. ಹೆಚ್‌ಪಿ.ಯ ಮೇಲಿನ ನಿರ್ಬಂಧವನ್ನು ಎತ್ತಿ ಹಿಡಿದ ಬಹ್ರಿ ನ್ಯಾಯಮಂಡಲಿ ಭಾರತ ಸರಕಾರ ಹಾಗೂ ಕಾಂಗ್ರೆಸ್(ಐ) ಮುಸ್ಲಿಮರ ತುಷ್ಟೀಕರಣದ ನೀತಿ ಅನುಸರಿಸುತ್ತಿದೆ ಎಂಬ ವಿ.ಹೆಚ್.ಪಿ. ವಾದವನ್ನು ಅಸಮರ್ಥನೀಯ ಎಂದು ಸಾರಿದೆ. ಈ ರೀತಿ ತುಷ್ಟೀಕರಣ ನಡೆಯುತ್ತಿದೆ ಎಂದು ವಿ.ಹೆಚ್.ಪಿ. ವೇದಿಕೆಗಳ ಮೇಲಿಂದ ಮಾಡುವ ಭಾಷಣಗಳಲ್ಲಿ ಮುಸ್ಲಿಮರಿಗೆ ಸಾರಾಸಗಟು ಮಸಿ ಬಳಿಯುವದು, ಅವರು ದೇಶಪ್ರೇಮಿ ನಾಗರಿಕರಲ್ಲ ಎಂಬ ಭಾವನೆ ಮೂಡಿಸುವದು ಸರಿಯಲ್ಲ ಎಂದು ನ್ಯಾಯಮಂಡಳಿ ಹೇಳಿದೆ. ಕೋಮುದಂಗೆಗಳಲ್ಲಿ ಆಕ್ರಮಣ ನಡೆಸಿದ ಮುಸ್ಲಿಮರಿಗೆ ಸರಕಾರ ತನ್ನ ತುಷ್ಟೀಕರಣ ನೀತಿಯ ಅಂಗವಾಗಿ ಪರಿಹಾರ ನೀಡಿದೆ, ಸಂವಿಧಾನದ 370 ನೇ ವಿಧಿ ಕೂಡಾ ಮುಸ್ಲಿಮರ ತುಷ್ಟೀಕರಣಕ್ಕಾಗಿ ಎಂಬ ವಾದ ಕೂಡಾ ಸರಿಯಲ್ಲ ಎಂದು ನ್ಯಾಯಮಂಡಳಿ ಹೇಳಿದೆ. ಇಲ್ಲೆಲ್ಲಾ ಆರ್.ಎಸ್.ಎಸ್.ನ ಯಾವ ನಿಲುವನ್ನು ಎತ್ತಿಹಿಡಿದಂತಾಗಿದೆ ಶ್ರೀಯುತ ಹೊ.ವೆ ಶೇಷಾದ್ರಿಯವರೇ?

"ಯಾವುದೇ ಸಂಘ, ಸಂಘಟನೆ, ಅಥವಾ ರಾಜಕೀಯ ಪಕ್ಷ ಉದ್ರೇಕಕಾರಿ ನಿಂದನೆಗಳಿಂದ ಕೂಡಿದ, ತುಚ್ಛೀಕಾರಕ ಮಾತುಗಳು ತುಂಬಿದ ಭಾಷೆಯನ್ನು ಬಳಸಿ ಭಾಷಣಗಳನ್ನು ಮಾಡಿ ಪ್ರಚಾರ ನಡೆಸಿ ಕೋಮುಗಳ ನಡುವಿನ ಸಾಮರಸ್ಯ ಕೆಟ್ಟು ಹೋಗುವಂತಾದರೆ ಕಾನೂನು ಕಾಠಿಣ್ಯವನ್ನು ಬಳಸಬೇಕಾಗುತ್ತದೆ" ಎಂದು ನ್ಯಾಯಮಂಡಲಿಯ 340 ಪುಟಗಳ ವರದಿ ಹೇಳಿದೆ. ***ಈ ವರ್ಣನೆ ಆರ್.-ಎಸ್. ಎಸ್‌ಗೆ ಬಿಜೆಪಿಗೆ, ಭಜರಂಗದಳಕ್ಕೆ ಅನ್ವಯಿಸುವುದಿಲ್ಲ ಎಂದು ಅವರು ಎದೆತಟ್ಟಿ ಹೇಳಬಲ್ಲರೇ?*** ಅಥವಾ ಇವನ್ನೆಲ್ಲಾ ಮಾಡಿದ್ದು ವಿ.ಹೆಚ್.ಪಿ. ಮಾತ್ರ, ತಾವು ಅದನ್ನೆಲ್ಲಾ ಮಾಡಿಲ್ಲ ಎಂದು ಹೇಳುತ್ತಾರೆಯೇ? ಅಥವಾ ಕಾನೂನಿನ ಕಾಠಿಣ್ಯವನ್ನು ಬಳಸಬೇಕಾದ ಕೆಲಸಗಳನ್ನು ಮಾಡಿದರೂ ನ್ಯಾಯಮಂಡಲಿಯೆದುರು ಪರಿಶೀಲನೆಗೆ ಬರದಂತೆ ನೆರವಾದ ನರಸಿಂಹರಾವ್ ಸರಕಾರಕ್ಕೆ ಒಳಗೊಳಗೇ ಕೃತಜ್ಞತೆ ಸಲ್ಲಿಸುತ್ತಾರೆಯೇ?

●



ಕೃಪೆ: ಇಕಾನಾಮಿಕ್ ಟೈಮ್ಸ್.

ಲಕೋಟೆಗಳಲ್ಲಿ ಸೀಲಾಗಿದೆ ಭವಿಷ್ಯ!

ಆರ್.ಎಸ್.ಎಸ್.ನ ಮುಂದಿನ ಸರಸಂಘ ಚಾಲಕರು ಅಂದರೆ ಮುಖ್ಯಸ್ಥರು ಯಾರು? ಈ ಪ್ರಶ್ನೆ ಈಗ ಪರಿಹಾರವಾಗಿದೆಯಂತೆ. ಎಂದಿನ ಆರ್.ಎಸ್.ಎಸ್. ಸರ್ವಾಧಿಕಾರಿ ಶೈಲಿಯಲ್ಲಿ ಚುನಾವಣೆಯೆಂಬುದು ಹಿಂದೂಗಳ ಪರಂಪರೆಯ ಏಕಮಾತ್ರ ರಕ್ಷಕ ಎಂದು ಹೇಳಿಕೊಳ್ಳುವ ಈ ಸಂಘಟನೆಯ ಜಾಯಮಾನದಲ್ಲೇ ಇಲ್ಲದ ಒಂದು ವಿಷಯ. ಈಗ ಅದು ಆರ್.ಎಸ್.ಎಸ್‌ನ ಮುಖ್ಯಾಲಯ ನಾಗಪುರದಲ್ಲಿ ಮೂವರಿಗೆ ಮಾತ್ರ ಗೊತ್ತಿರುವ ಗುಟ್ಟು. ಉತ್ತರಾಧಿಕಾರಿಯ ಹೆಸರನ್ನು ಒಡೆದು ಸೀಲ್ ಮಾಡಿದ ಲಕೋಟೆಗಳು ಈಗ ಆಮೂದ ಬಳಿಯಿವೆ. ಈಗಿನ ಸರಸಂಘಚಾಲಕ ಬಾಳಾಸಾಹೇಬ್ ದೇವರಸ್ ಇತ್ತೀಚೆಗೆ ತೀವ್ರ ಕಾಯಿಲೆ ಬಿದ್ದಾಗ ಅವರ ಉತ್ತರಾಧಿಕಾರಿಯ ಪ್ರಶ್ನೆಯೆದ್ದು ಈಗ ಅದು ಇತ್ಯಾರ್ಥವಾಗಿದೆ ಎಂದು ಆರ್.ಎಸ್.ಎಸ್. ಪ್ರಧಾನ ಕಾರ್ಯದರ್ಶಿ ಅಥವಾ ಸರ ಕಾರ್ಯವಾಹ ಪ್ರೋ ರಾಜೇಂದ್ರ ಸಿಂಗ್ ಹೇಳಿದ್ದಾರೆ. 'ಹಿಂದೂರಾಷ್ಟ್ರ' ದ ಮುಂದಿನ ಮಾರ್ಗದರ್ಶಕರು ಯಾರೆಂಬುದು ಸಾವಿರ-ಸಾವಿರ ಆರ್.ಎಸ್.ಎಸ್. ಸ್ವಯಂಸೇವಕರಿಗಷ್ಟೇ ಅಲ್ಲ, ಹೆಚ್ಚಿನ ಮುಖಂಡರೂ ನಿರ್ಧರಿಸುವಂತಿಲ್ಲ. ಅಷ್ಟೇ ಅಲ್ಲ, ಪ್ರಸ್ತುತ ಸರಸಂಘಚಾಲಕರಿರುವವರೆಗೆ ಅವರೆಲ್ಲಾ ಕೂಡಾ ಇತರ ಆರ್‌ಎಸ್‌ಎಸ್ ಪರ, ವಿರೋಧಿ ಜನಗಳಂತೆ ಊಹಿಸಿಕೊಳ್ಳಬೇಕಷ್ಟೆ. 'ಹಿಂದೂರಾಷ್ಟ್ರ' ಹೀಗಿರುತ್ತದೆ ಸ್ವಾಮಿ!

ಭಗತ್‌ಸಿಂಗ್ ದೃಷ್ಟಿಯಲ್ಲಿ ಧರ್ಮ-ಮತ್ತು ಸ್ವಾತಂತ್ರ್ಯ ಹೋರಾಟ

ಬಿಜೆಪಿ ವಿಹೆಚ್‌ಪಿಯವರು ತಾವು ವಿಶಾಲ ಜನಸ್ತೋಮದ ಪ್ರತಿನಿಧಿಗಳು ಎಂದು ಸಾಬೀತುಪಡಿಸಿಕೊಳ್ಳಲು ರವೀಂದ್ರನಾಥ್ ಠಾಗೋರ್, ಮಹಾತ್ಮಾಗಾಂಧಿ, ಭಗತ್‌ಸಿಂಗ್, ಬಿ.ಆರ್. ಅಂಬೇಡ್ಕರ್ ಎಲ್ಲರ ಪರಂಪರೆಯೇ ತಮ್ಮ ಪರಂಪರೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಇತಿಹಾಸದ ಬಗ್ಗೆ ಸ್ವಲ್ಪವಾದರೂ ಜ್ಞಾನವಿರುವವರಿಗೆ ಇದು ಶುದ್ಧ ವಂಚನೆ ಎಂದು ತಿಳಿಯದಿರುವುದಿಲ್ಲ.

ಈ ಹಿನ್ನಲೆಯಲ್ಲಿ ಹುತಾತ್ಮ ಭಗತ್‌ಸಿಂಗ್ ಕೋಮುವಾದವನ್ನು ಎದುರಿಸಬೇಕಾಗಿ ಬಂದಿತ್ತೇ? ಬಂದಿದ್ದರೆ ಆ ಬಗ್ಗೆ ಅವರ ನಿಲುವೇನು? ಈ ಬಗ್ಗೆ ನಮ್ಮ ಓದುಗರಿಗೆ ಆಸಕ್ತಿಯಿರುವುದು ಸಹಜ. ಹೌದು ಭಗತ್‌ಸಿಂಗ್ ಹಾಗೂ ಅವರ ಸಂಗಾತಿಗಳು ಕೂಡಾ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳುತ್ತಿದ್ದಾಗ ಈ ಸಮಸ್ಯೆಯನ್ನು ಎದುರಿಸಬೇಕಾಗಿ ಬಂತು. 1920 ರ ದಶಕದ ಅಂತ್ಯದ ವೇಳೆಗೆ ಗಾಂಧೀಜಿ ನೇತೃತ್ವದ ಅಸಹಕಾರ ಆಂದೋಳನವನ್ನು ವಾಪಸು ಪಡೆದಾಗ ದೇಶದಲ್ಲೆಲ್ಲಾ ಉಂಟಾದ ಕೋಮುದಂಗೆಗಳು ಅವರನ್ನು ತಟ್ಟಿದವು 1928ರ ಏಪ್ರಿಲ್‌ನಲ್ಲಿ ಪ್ರಕಟವಾದ ಭಾರತೀಯ ನೌಜವಾನ್ ಸಭಾದ ಘೋಷಣಾ ಪತ್ರದಲ್ಲಿ ಭಗತ್‌ಸಿಂಗ್ ಅವರ ಸಂಗಾತಿಗಳು ಇಂತಹ ಕೋಮುವಾದವನ್ನು ತಿರಸ್ಕರಿಸಿದರು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಅವಧಿಯಲ್ಲಿ ಪಂಜಾಬಿನಲ್ಲಿ ಯುವ ಕ್ರಾಂತಿಕಾರಿಗಳ ಪತ್ರಿಕೆಯಾದ 'ಕಿರ್‌ತಿ' ಯಲ್ಲಿ ಪ್ರಕಟವಾದ ಲೇಖನಗಳಲ್ಲಿ ಭಗತ್‌ಸಿಂಗ್ ಹಾಗೂ ಅವರ ಸಂಗಾತಿಗಳು ಧರ್ಮದ ಬಗ್ಗೆ, ಕೋಮುವಾದದ ಬಗ್ಗೆ ಹೇಗೆ ಯೋಚಿಸುತ್ತಿದ್ದರು ಎಂದು ಕಾಣುತ್ತದೆ. ಅಂತಹ ಒಂದು ಲೇಖನದ ಕೆಲ ಅಂಶಗಳು ಇಲ್ಲಿದೆ.

ಧರ್ಮವನ್ನು ಮನೆಯಲ್ಲೇ ಇಟ್ಟರೂ ಜನಗಳ ಹೃದಯದಲ್ಲಿ ಭೇದ ಭಾವ ಹೆಚ್ಚುವುದಿಲ್ಲವೇ? ದೇಶ ಪೂರ್ಣ ಸ್ವಾತಂತ್ರ್ಯದಗುರಿ ಮುಟ್ಟುವಷ್ಟರಲ್ಲಿ ಅದರಿಂದ ಯಾವುದೇ ದುಷ್ಪರಿಣಾಮ ಉಂಟಾಗುವುದಿಲ್ಲವೇ? ಈ ಬಗ್ಗೆಯೂ ನಾವು ಯೋಚಿಸಬೇಕಾಗಿದೆ. ಈಗ ಪೂರ್ಣ ಸ್ವಾತಂತ್ರ್ಯದ ಉಪಾಸಕರು ಧರ್ಮ ಎಂದರೆ ಮಾನಸಿಕ ಗುಲಾಮಿಕೆ ಎನ್ನುತ್ತಾರೆ. ಏಕೆಂದರೆ ದೇವರು ಸರ್ವಶಕ್ತಿವಂತ ಮಾನವ ಏನೂ ಅಲ್ಲ, ಮಣ್ಣಿನ ಗೊಂಬೆ ಎಂದು ನಮ್ಮ ಮಕ್ಕಳಿಗೆ ಹೇಳಿದರೆ ಅದು ಅವರನ್ನು ನಿಶ್ಯಕ್ತರನ್ನಾಗಿ ಮಾಡುತ್ತದೆ. ಆತ್ಮವಿಶ್ವಾಸವನ್ನು ನಾಶಮಾಡುತ್ತದೆ. ಇರಲಿ. ಈ ಬಗ್ಗೆ ಚರ್ಚೆ ಬೇಡವೆಂದರೂ ಕೂಡಾ ಧರ್ಮ ನಮ್ಮ ಹಾದಿಯಲ್ಲಿ ಒಂದು ಅಡ್ಡಿ ಎಂಬುದು ಕಂಡು ಬರುತ್ತದೆ. ಉದಾಹರಣೆಗೆ ತಗೊಳ್ಳಿ- ಎಲ್ಲರೂ ಸಮಾನರು- ಬಂಡವಾಳಶಾಹಿಯ ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯದ ಭೇದ ಭಾವ ಇರಬಾರದು ಎಂದು ನಾವು ಬಯಸುತ್ತೇವೆ. ಆದರೆ ಸನಾತನ ಧರ್ಮ ಇಂತಹ ಭೇದಭಾವ ಇರಬೇಕು ಎನ್ನುತ್ತದೆ. ಇಂತಹ ಧರ್ಮದ ವಿರುದ್ಧ ಏನೂ ಹೇಳಬಾರದು ಎಂದು ಮನೆಯಲ್ಲಿ ಸುಮ್ಮನೆ ಕೂರಲು ಸಾಧ್ಯವೇ? ಕೆಲವರೆನ್ನುತ್ತಾರೆ- ಇವನ್ನೆಲ್ಲಾ ಸುಧಾರಿಸಬಹುದು ಎಂದು. ಬಹಳ ಒಳ್ಳೆಯದು. ಅಸ್ಪೃಶ್ಯತೆಯನ್ನು ಸ್ವಾಮಿ ದಯಾನಂದರು ಹೋಗಲಾಡಿಸಿದರು. ಆದರೆ ಅವರು ನಾಲ್ಕು ವರ್ಣಗಳ ಆಚೆಗೆ ಹೋಗಲಿಲ್ಲ. ಭೇದಭಾವ ಉಳಿದೇ ಉಳಿಯಿತು. ಗುರುದ್ವಾರದಲ್ಲಿ "ರಾಜ್‌ಕರೇಗಾ ಖಾಲಸಾ" (ಖಾಲಿಸಾದ ರಾಜ್ಯಭಾರ ಇರುತ್ತದೆ) ಎಂದು ಹಾಡುವ ಸಿಖ್ ಹೊರಗೆ ಬಂದು ಪಂಚಾಯತೀ ರಾಜ್ಯದ ಮಾತಾಡಿದರೆ ಅದಕ್ಕೇನು ಅರ್ಥವಿರುತ್ತದೆ? ಇಸ್ಲಾಮ್‌ನಲ್ಲಿ ನಂಬಿಕೆಯಿಲ್ಲದ ಕಾಫರರನ್ನು ಖಡ್ಗಕ್ಕೆ ಆಹುತಿ ನೀಡಿ ಎಂದು ಇತ್ತ ಐಕ್ಯತೆಯ ಘೋಷಣೆ ಕೂಗಿದರೆ ಅದರ ಪರಿಣಾಮವೇನಾಗುತ್ತದೆ? ನಿಜ ನಮಗೆ ಗೊತ್ತು- ವೇದ, ಕುರಾನ್‌ಗಳ ದೊಡ್ಡ-ದೊಡ್ಡ ಮಂತ್ರಗಳನ್ನು ಹೇಳಿ ಎಳೆದಾಟ ನಡೆಸಬಹುದು. ಆದರೆ ನಮ್ಮ ಮುಂದಿರುವ ಪ್ರಶ್ನೆ ಈ ಎಲ್ಲಾ ಜಗಳದಿಂದಲೇ ಮುಕ್ತವಾಗಬಾರದು ಏಕೆ?...........

ಧರ್ಮದ ವಿರುದ್ಧ ಯೋಚಿಸಲೇ ಬೇಕಾಗುತ್ತದೆ. ಆಗ ಧರ್ಮದ ಪರವಿರುವವರು ಎನ್ನುತ್ತಾರೆ- ಜಗತ್ತಿನಲ್ಲಿ ಅಂಧಕಾರ ಕವಿಯುತ್ತದೆ, ಪಾಪ ಹೆಚ್ಚುತ್ತದೆ. ಒಳ್ಳೆಯದು ಈ ಬಗ್ಗೆಯೇ ವಿಚಾರ ಮಾಡೋಣ.

ರಷ್ಯಾದ ಮಹಾತ್ಮ ಟಾಲ್‌ಸ್ಟಾಯ್ ಧರ್ಮದ ಬಗ್ಗೆ ಚರ್ಚೆ ಮಾಡುತ್ತಾ ಧರ್ಮದ ಮೂರು ಅಂಶಗಳನ್ನು ವಿವರಿಸಿದ್ದಾರೆ.

1. ಧರ್ಮದ ಸಾರಭೂತ ಅಂಶ. ಅಂದರೆ ಸತ್ಯ ಹೇಳುವುದು, ಕಳ್ಳತನ ಮಾಡದಿರುವುದು, ಬಡವರಿಗೆ ಸಹಾಯ, ಪ್ರೀತಿ ಇತ್ಯಾದಿ.
2. ಧರ್ಮದ ತತ್ವಶಾಸ್ತ್ರ ಅಂದರೆ ಹುಟ್ಟು-ಸಾವು, ಪುನರ್ಜನ್ಮ, ಜಗತ್ತಿನ ರಚನೆ ಇತ್ಯಾದಿ ದರ್ಶನಶಾಸ್ತ್ರ. ಇಲ್ಲಿ ಮನುಷ್ಯ ತನಗೆ ಇಷ್ಟಬಂದ

ಪುಟ 6ನೋಡಿ

ಬಿಜೆಪಿಯೊಂದಿಗೆ ಸ್ಪರ್ಧೆಗಿಳಿದ ಕಾಂಗ್ರೈ ಸರಕಾರ

'ಹಿಂದುತ್ವ'ಶಕ್ತಿಗಳು 'ಅಯೋಧ್ಯಾಕಾಂಡ' ಆರಂಭಿಸಿ ಆರು ತಿಂಗಳುಗಳು ಮುಗಿದಿವೆ. ಈ ನಡುವೆ ಈ ಕಾಂಡಕ್ಕೆ ಅವಕಾಶ ಮಾಡಿಕೊಟ್ಟು ಬೇಜವಾಬ್ದಾರಿತನ ತೋರಿದ ಕಾಂಗ್ರೆಸ್(ಐ) ತನ್ನ ಬೇಜವಾಬ್ದಾರಿತನವನ್ನು ಸರಿಪಡಿಸಿಕೊಳ್ಳಲಾದರೂ ಏನಾದರೂ ಮಾಡಿದೆಯೇ? ಎಂದು ಪಟ್ಟಿ ಮಾಡಿದ್ದರೆ ಇನ್ನಷ್ಟು 'ಹಿಂದುತ್ವ' ಶಕ್ತಿಗಳ ತುಷ್ಟೀಕರಣವಲ್ಲದೆ ಮತ್ತೇನೂ ಕಾಣುವುದಿಲ್ಲ. ಸಹಜವಾಗಿಯೇ ಡಿಸೆಂಬರ್ 6 ರ ಕರಾಳಘಟನೆ ನಡೆದು ಸರಿಯಾಗಿ ಆರು ತಿಂಗಳು ಪೂರ್ತಿಯಾಗುವಾಗ ಆ ಪಕ್ಷಕ್ಕೆ ತೋಚಿದ್ದು 'ಸೋಮಯಜ್ಞ' ನಡೆಸುವ ಯೋಚನೆ ಮಾತ್ರ. ಜೂನ್ 6 ರಂದು ಮತ್ತೊಬ್ಬ ಕುಖ್ಯಾತ ಠಕ್ಕ ಸನ್ಯಾಸಿ ಚಂದ್ರಸ್ವಾಮಿ ನೇತೃತ್ವದಲ್ಲಿ ನಡೆದ ಈ "ಯಜ್ಞ"ಕ್ಕೂ ತನಗೂ ಸಂಬಂಧವಿಲ್ಲ ಎಂದು ಈಗ ಕಾಂಗ್ರೆಸ್(ಐ) ಹೇಳುತ್ತಿದ್ದರೂ ಅದನ್ನು ಯಾರೂ ನಂಬಲು ಸಿದ್ಧರಿಲ್ಲ. ಆ 'ಯಜ್ಞ' ಎಬ್ಬಿಸಿದ ಹೊಗೆ, ಧೂಳಿನಿಂದ ಕಾಂಗ್ರೆಸ್(ಐ) ಚಾರಿತ್ರ್ಯ ಮತ್ತಷ್ಟು ಕಲುಷಿತಗೊಂಡಿದೆ. ಚಂದ್ರಸ್ವಾಮಿ ಈಗ ರಾಮ್‌ಲಲ್ಲಾ ಮೂರ್ತಿಯಿರುವಲ್ಲೇ ದೇವಸ್ಥಾನ ಕಟ್ಟಬೇಕು ಎಂದು ನರಸಿಂಹರಾವ್ ಅಪೇಕ್ಷೆಸಿ ದನಿ ನೀಡಿದ್ದಾರೋ ಎಂಬ ಸಂಶಯ ಕಾಂಗ್ರೆಸ್(ಐ) ಜನಗಳಲ್ಲಿ ಬಂದಂತಿದೆ. ಪ್ರಧಾನ ಮಂತ್ರಿಗಳು ಈ ಬಗ್ಗೆ ಸ್ಪಷ್ಟಪಡಿಸಬೇಕೆಂದು ಹಲವರು ಒತ್ತಾಯಿಸಿದ್ದಾರೆ. ಆದರೆ ಮೌನೀಬಾಬರ ಮೌನ ಸಾಗಿಯೇ ಇದೆ.

ನರಸಿಂಹರಾವ್ ಸರಕಾರ ಗುರಿ ಜಾತ್ಯಾತೀತತೆಯನ್ನು ರಕ್ಷಿಸುವುದಲ್ಲ, ವಿವಾದಗ್ರಸ್ತ ಸ್ಥಳದಲ್ಲಿ ದೇವಸ್ಥಾನ ಕಟ್ಟುವ ಕೆಲಸವ ಬಿಜೆಪಿ ಮತ್ತವರ ಸಹಯೋಗಿಗಳ ಕೈಯಿಂದ ಕಿತ್ತುಕೊಂಡು ತಾ ಮಾಡುವುದು ಎಂಬುದನ್ನು 'ಸೋಮಯಜ್ಞ' ಸಾಬೀತುಪಡಿ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜೀತ್‌ರ ಹೇಳಿದ್ದಾರೆ. ಸರಕಾರದ, ಆಡಳಿತ ಆಶ್ರಯದಲ್ಲಿ ನಡೆ ಯಜ್ಞ ಕಾಂಗ್ರೆಸ್(ಐ) ವಿ.ಹೆಚ್.ಪಿ.ಯ ನಿಲುವನ್ನೇ ತಳೆಯ ಎಂಬುದನ್ನು ತೋರಿಸಿಕೊಟ್ಟಿದೆ ಎಂದು ಟೀಕಿಸಿದ ಅವ ಕುತಂತ್ರದ ವಿರುದ್ಧ ಎಡ ಮತ್ತು ಜಾತ್ಯಾತೀತ ಶಕ್ತಿಗಳು ಟಿಸಬೇಕು, ನ್ಯಾಯಾಂಗ ತೀರ್ಪಿನ ಮೂಲಕ ಅಯೋಧ್ಯಾ ಸ್ಯೆಯನ್ನು ಪರಿಹರಿಸುವಂತೆ ಸರಕಾರದ ಮೇಲೆ ಒತ್ತಡ ತರ ಎಂದು ಕರೆನೀಡಿದ್ದಾರೆ.

"ನೀರ ಮೇಲಿನ ಗುಳ್ಳೆ ನಿಜವೆ?, ಆಗುಳ್ಳೆ ಒಡೆಯಲೇಬೇಕಾಗುತ್ತದೆ". ಪ್ರಪಂಚದ ಅನೇಕ ದೇಶಗಳು ಇದನ್ನು ಅನುಭವಿಸಿವೆ. ಪಾತಕಲಿಯಲು ಹೆಣಗುತ್ತಿವೆ. ಆದರೆ ನಮ್ಮ ದೇಶ ಅದೇ ಉದಾರೀಕರಣ ಮುಕ್ತವ್ಯಾಪಾರದ ಹೆಸರಿನಲ್ಲಿ ಮತ್ತದೇ ನೀರ ಮೇಲಿನ ಗುಳ್ಳೆಗಳ ಮೊರೆಹೋಗತೊಡಗಿದೆ. ರೂಪಾಯಿ ಪೂರ್ಣಪರಿವರ್ತನೆ ಮಾಡಿ ವಿದೇಶಿಕಂಪನಿಗಳಿಗೆ ನಮ್ಮ ದೇಶಗವನ್ನು ತೆರೆದಿಟ್ಟು ಆರ್ಥಿಕ ಬೆಳೆವಣಿಗೆ ಇಂದು ಆದೀತು ನಾಳೆ ಆಗಬಹುದು ಎಂದು ಕಾಯುವ ಮೂರ್ಖತನದ ಬಗ್ಗೆ ಒಂದು ಅರ್ಥ ಶಾಸ್ತ್ರೀಯ ವಿಶ್ಲೇಷಣೆ.

"ನೀರ ಮೇಲಿನ ಗುಳ ನಿಜವಲ್ಲೊ"

ಸ್ವಾತಂತ್ರ್ಯ ಬಂದು ಮೂರು ದಶಕಗಳ ನಂತರ ಪ್ರಾರಂಭವಾದ ಈ ಆರ್ಥಿಕ ಸುಧಾರಣೆಗಳು ಕಳೆದ ಮಾರ್ಚ್‌ನಲ್ಲಿ ಆಚರಣೆಗೆಗ ಬಂದ ರೂಪಾಯಿಯ ಪೂರ್ಣ ಪರಿವರ್ತನಶೀಲತೆಯಲ್ಲಿ ಒಂದು ಬಹುಮುಖ್ಯ ಘಟ್ಟ ತಲುಪಿದೆ. ಹಿಂದಿನ ನೀತಿಗಳು ಆಮೂಲಾಗ್ರವಾಗಿ ಬದಲಾಗಿರುವುದಂತೂ ಈಗ ಸ್ಪಷ್ಟವಾಗಿ ಗೋಚರಿಸುತ್ತಿದೆ.

ಎಂಬತ್ತರ ದಶಕದಲ್ಲಿ ಆರಂಭಗೊಂಡ ಈ ಸುಧಾರಣೆಗಳಿಗೆ ಎರಡು ಮುಖ್ಯ ಕಾರಣಗಳನ್ನು ನೀಡಲಾಗಿತ್ತು. ಒಂದನೇಯದಾಗಿ ನಾವು ಹಿಂದೆ ವಸಾಹತುಶಾಹಿಯ ಆಡಳಿತಕ್ಕೆ ಒಳಪಟ್ಟವರು. ಆದ್ದರಿಂದ ಜಾಗತಿಕ ಆರ್ಥಿಕದಿಂದ ನಾವು ಬೇರ್ಪಡುವ ಸಾಧ್ಯತೆ ಹೆಚ್ಚು. ಈ ದೌರ್ಬಲ್ಯವನ್ನು ಆಮದನ್ನು ಕಡಿತಗೊಳಿಸಿ ದೇಶದ ರಾಜಧಾನಿ ಬಂಡವಾಳವನ್ನು ಸ್ಥಳಾಂತರಿಸುವುದರಿಂದ ಬಗ್ಗುಬಡಿಯಬಹುದೆಂದು ಸೂಚಿಸಲಾಯಿತು. ಈ ಸ್ವತಂತ್ರ ಆರ್ಥಿಕ ಬೆಳವಣಿಗೆಗೆ ಅವಕಾಶವೇ ಇಲ್ಲದಿದ್ದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕೇನು ಅರ್ಥ? ಎರಡನೇಯದಾಗಿ ದೇಶೀ ಬಂಡವಾಳವನ್ನೇ ಶಿಸ್ತಿಗೊಳಪಡಿಸಿ ಅದರ ಅಸೀಮಿತ ಕಾರ್ನ್ನಹುಟ್ಟು ಹಾಕಬಹುದಾದ ಅಸಮಾನತೆಯಂತಹ ದುಷ್ಪರಿಣಾಮಗಳನ್ನು ತಡೆಯುವುದು.

ಈಗಿನ ವಾದ ಸರಣಿ

ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಪ್ರಭಾವದಿಂದಾಗಿ ಈಗಿನ ವಾದಸರಣಿ ಸ್ವಲ್ಪ ಬದಲಾಗಿದೆ. ಅದರ ಪ್ರಕಾರ ಪರಾವಲಂಬನೆಯೊಂದೇ ಸದ್ಯದ ಜಾಗತಿಕ ಪರಿಸ್ಥಿತಿಯಲ್ಲಿ ಬೆಳವಣಿಗೆಗೆ ಇರುವ ದಾರಿ. ಈ ಪರಾವಲಂಬನೆಯನ್ನು ಪರಾವಲಂಬನೆ ಎನ್ನುವ ಬದಲು ಅಂತರ್-ಅವಲಂಬನೆ ಎಂದು ಕರೆಯಲಾಗುತ್ತಿದೆ. ಇಂತಹ ಅಂತರ್-ಅವಲಂಬನೆಯ ಮೂಲಕ ಮಾರುಕಟ್ಟೆ ವ್ಯವಸ್ಥೆಯನ್ನು ನಮ್ಮ ಬೆಳವಣಿಗೆಗೆ ಬಳಸಿಕೊಳ್ಳುವುದು ಎಂಬುದು ಸುಧಾರಣೆಗಳಿಗೆ ಸರ್ಕಾರ ನೀಡುವ ಒಂದು ಸಮರ್ಥನೆ. ದೇಶೀ ಆರ್ಥಿಕತೆಯನ್ನು ಅಸಮಾನತೆಯನ್ನು ತೊಡೆದುಹಾಕಿ ದೇಶದ ಅಭಿವೃದ್ಧಿ ಸಾಧಿಸಲು ದೇಶೀ ಶಕ್ತಿಗಳಿಗೇ ಮೀಸಲಿರಿಸಿದರೆ ಅವರಿಂದ ಬೆಳವಣಿಗೆಯ ಅವಕಾಶಗಳನ್ನು ಕಳೆದುಕೊಂಡು ಅಭಿವೃದ್ಧಿ ಕುಂಠಿತವಾಗುತ್ತದೆ. ಜಾಗತಿಕವಾಗಿ ಪ್ರಮುಖವಾಗಿರುವ ಆರ್ಥಿಕ ವ್ಯವಸ್ಥೆಗೆ ಜೋತು ಬಿದ್ದು ಖಾಸಗಿ ಹೂಡಿಕೆದಾರರ ಮುಕ್ತ ವ್ಯವಹಾರಕ್ಕೆ ಅವಕಾಶ ನೀಡಿದರೆ ಅದು ಬೆಳವಣಿಗೆಗೆ ಒತ್ತು ನೀಡುತ್ತದೆ ಎಂಬುದು ಈ ವಾದ.

ಆದರೆ ವಾಸ್ತವವೇನು?

ಭಾರತದ ಸ್ವಾತಂತ್ರ್ಯೋತ್ತರ ಬೆಳವಣಿಗೆಯನ್ನು ನೋಡಿದರೆ ವಾಸ್ತವ ಬೇರೆಯಾಗಿರುವುದು ಗೊತ್ತಾಗುತ್ತದೆ. ಭಾರತದ ಆರ್ಥಿಕತೆಯಲ್ಲಿ ಸರ್ಕಾರದ ಹಸ್ತಕ್ಷೇಪವಿದ್ದಾಗಿಯೂ, ಅದರಲ್ಲೂ ಖಾಸಗಿಯವರ ಲಾಭದ ಮೇಲೆ ಮಿತಿಗಳು ಹೇರಲ್ಪಟ್ಟಿದ್ದಾಗಿಯೂ ಖಾಸಗಿ ಪ್ರಯತ್ನಗಳಿಗೆ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರ ಇಲ್ಲದೇ ಇರಲಿಲ್ಲ. ಇದಲ್ಲದೇ ದೇಶೀ ಆರ್ಥಿಕತೆಯನ್ನ ದೇಶೀ ಬಂಡವಾಳಕ್ಕಾಗಿ ಸರ್ಕಾರ ರಕ್ಷಿಸುತ್ತ ಬಂತು. ಅಲ್ಲದೇ ಈ ದೇಶೀ ಬಂಡವಾಳದ ಅವಕಾಶವನ್ನು ಹಿಗ್ಗಿಸಲು ಸರ್ಕಾರ ಪ್ರಯತ್ನಿಸುತ್ತಾ ಬಂದಿದೆ. ಈ ಕಾರ್ಯಕ್ಕೆ ಸಾರ್ವಜನಿಕ ಹಣವನ್ನು ಸರ್ಕಾರ ಖರ್ಚುಮಾಡಿದೆ. ಇಂತಹ ಅವಕಾಶಗಳನ್ನು ಬಳಸಿಕೊಳ್ಳಲು ಖಾಸಗಿಯವರಿಗೆ ಹಣಕಾಸಿನ ನೆರವನ್ನೂ ನೀಡಲಾಗಿದೆ. ಖಾಸಗಿ ಕ್ಷೇತ್ರ ತುಂಬಲಾರದ ಮುಖ್ಯ ರಚನಾತ್ಮಕ ಬಂಧಗಳನ್ನು ಸರ್ಕಾರ ತುಂಬಿದೆ.

ಇಂತಹ ಬೆಳವಣಿಗೆಯ ಹಾದಿಯಿಂದ ಆದ ಬೆಳವಣಿಗೆಯ ರೂಪ ನಿಜಕ್ಕೂ ಸಂಕೀರ್ಣವಾದುದು. ಕೃಷಿ ಕ್ಷೇತ್ರದಲ್ಲಿ ಒಟ್ಟು ಉತ್ಪಾದನೆಯ ಬೆಳವಣಿಗೆ ಶೇ. 3 ರ ಗತಿಯಲ್ಲಿ ಆದರೂ ತಲಾ ಉತ್ಪಾದನೆ ಒಂದೇ ಮಟ್ಟದಲ್ಲಿದೆ. 1951-52 ರಿಂದ 19 91-92 ರ ಅವಧಿಯಲ್ಲಿ ದೇಶದ ಒಟ್ಟು ಉತ್ಪಾದನೆಯ ಶೇ. 28 ರಷ್ಟು ಮಾತ್ರ ಕೃಷಿಯಿಂದ ಬಂದಿದೆ. ಇದು ಕೃಷಿ ಕ್ಷೇತ್ರಕ್ಕೆ ಸರ್ಕಾರದ ಸಂಪೂರ್ಣ ಬೆಂಬಲವಿದ್ದಾಗಿಯೂ ಆಗಿರುವ ಬೆಳವಣಿಗೆ. ಈ ಅವಧಿಯನ್ನು ಎರಡಾಗಿ ವಿಭಾಗಿಸಬಹುದು. ಮೊದಲನೆಯದು ಯೋಜನೆಗಳ ಪ್ರಾರಂಭದಿಂದ ಒಂದೂವರೆ ದಶಕಗಳು. ಎರಡನೇಯದು ಎಂಬತ್ತರ ದಶಕ. ಗಮನಿಸಬೇಕಾದ ಅಂಶವೆಂದರೆ ಈ ಎರಡೂ ಅವಧಿಗಳಲ್ಲಿ ಸರ್ಕಾರೀ ವೆಚ್ಚದಿಂದಾಗಿ ಬೆಳವಣಿಗೆ ಪ್ರೇರೇಪಣೆಗೆ ದೊರೆಯಿತು. ಎರಡೂ ಅವಧಿಯಲ್ಲಿ ಕೈಗಾರಿಕಾ ಬೆಳವಣಿಗೆ ಮುಖ್ಯವಾಗಿತ್ತು ಮತ್ತು ಎರಡನೇ ಅವಧಿಯಲ್ಲಿ ಸೇವೆಗಳಿಂದ ಬಂದ ಆದಾಯವೂ ಮುಖ್ಯವಾಗಿತ್ತು. ಈ ಎರಡು ಅವಧಿಗಳ ಬೆಳವಣಿಗೆ ಲಕ್ಷಣಗಳಿಗೆ ಕೋಷ್ಟಕ ನೋಡಿ.

ಯೋಜನೆಯ ಮೊದಲ ಒಂದೂವರೆ ದಶಕ	ಎಂಬತ್ತರ ದಶಕ
1. ಬಂಡವಾಳ ಕ್ರೋಢೀಕರಣಗೊಳ್ಳಲು ಸರ್ಕಾರಿ ಖರ್ಚಿನ ಬಹುಪಾಲು ವ್ಯಯವಾಯಿತು. ಒಟ್ಟು ಬಂಡವಾಳ ಕೂಡುವಿಕೆ ವಾರ್ಷಿಕ ಶೇ. 13.5 ರ ದರದಲ್ಲಿ ಆಯಿತು. ಸರ್ಕಾರ ಖಾಸಗಿ ಕ್ಷೇತ್ರದ ಬೇಡಿಕೆಗೆ ನೇರ (ಬಂಡವಾಳಕೂಡುವಿಕೆಯಿಂದ) ಮತ್ತು ಪರೋಕ್ಷವಾಗಿ (ಆದಾಯ ಸೃಷ್ಟಿಯಿಂದ) ಕಾರಣವಾಯಿತು.	ಸರಕಾರದ ಚಾಲ್ತಿ ಖರ್ಚಿಗೆ ಬೆಳವಣಿಗೆ ಕಾರಣವಾಯಿತು. ಒಟ್ಟು ಬಂಡವಾಳ ಕೂಡುವಿಕೆ ವಾರ್ಷಿಕ ಶೇ. 6 ಕ್ಕೂ ಕಡಿಮೆ ದರದಲ್ಲಿ ಆಯಿತು. ಖಾಸಗಿ ಕ್ಷೇತ್ರದ ಬೇಡಿಕೆಗೆ ಸರ್ಕಾರ ಪರೋಕ್ಷವಾಗಿ ಕಾರಣವಾಯಿತು.
2. ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಸರ್ಕಾರ ನೇರ ಕರಗಳನ್ನು ಹೇರಿ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ವಿಫಲವಾಯಿತು ಎಪ್ಪತ್ತರ ದಶಕದಲ್ಲಿ ಕರ ರಿಯಾಯಿತಿಗಳನ್ನು ಬೇರೆ ನೀಡಿದ್ದರಿಂದ ಖೋತಾ ಹಣಕಾಸಿನ ಮೇಲೂ ಅವಲಂಬಿಸಬೇಕಾಯಿತು	
3. ಆಮದಿನ ಮೇಲೆ ಹಲವು ನಿಬಂಧಗಳಿದ್ದುದರಿಂದ ಆಮದು ಕಡಿಮೆ ಪ್ರಮಾಣದಲ್ಲಿತ್ತು.	ಆಮದಿನ ಮೇಲಿನ ನಿಬಂಧನೆಗಳನ್ನು ಸರ್ಕಾರ ಕಡಿಮೆ ಮಾಡಿದ್ದರಿಂದ ಆಮದು ಹೆಚ್ಚಾಯಿತು. ಈ ಆಮದನ್ನು ಸರ್ಕಾರ ಬೆಂಬಲಿಸಬೇಕಾದ್ದರಿಂದ ಅದು ಅಂತರಾಷ್ಟ್ರೀಯ ವಾಣಿಜ್ಯ ಮಾರುಕಟ್ಟೆಯಲ್ಲಿ ಸಾಲ ಪಡೆಯಬೇಕಾಯಿತು.
4.	ಎಲ್ಲ ತರಹದ ಹತೋಟಿಗಳನ್ನು ತೆಗೆದು ಹಾಕಲಾಯಿತು. (ಸಾಮರ್ಥ್ಯ ಸೃಷ್ಟಿ, ಉತ್ಪಾದನೆ ಮತ್ತು ಬೆಲೆಗಳು)

ಈ ಎರಡು ಅವಧಿಯಲ್ಲಿನ ಬೆಳವಣಿಗೆಗಳಲ್ಲಿ ಇಷ್ಟು ಭಿನ್ನತೆ ಇರಲು ಆಂತರಿಕ ಮತ್ತು ಬಾಹ್ಯ ಕಾರಣಗಳಿದ್ದವು.

ಆಂತರಿಕ ಕಾರಣಗಳು

ಭೂ ಸಂಬಂಧದಲ್ಲಿ ರಚನಾತ್ಮಕ ಬದಲಾವಣೆ ತರದೇ ಇದ್ದುದರಿಂದ ಜಮೀನುದಾರಿ ಮತ್ತು ಜಮೀನಿನ ಉದ್ಯಮಗಳಲ್ಲಿ ಮೇಲಿನ ಏಕಸ್ವಾಮ್ಯ ಮುಂದುವರೆದಿತ್ತು. ಇದು ಉದ್ಯಮಗಳಲ್ಲಿ ಹಣ ಹೂಡಿಕೆಯ ನಿರ್ಧರಿಸುತ್ತಿತ್ತು. ಇದರಿಂದಾಗಿ ಸರ್ಕಾರ ಮೊದಲ ಅವಧಿಯಲ್ಲಿನ ಬೆಳವಣಿಗೆಯ ವೇಗವನ್ನು ಉಳಿಸಿಕೊಂಡು ಬರುವುದು ಸಾಧ್ಯವಾಗಲಿಲ್ಲ. ಇದು ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನು ಹಿಗ್ಗಿಸುವಲ್ಲಿ ವಿದೇಶೀ ವಿನಿಮಯ ಗಳಿಸಿ ಹಣದುಬ್ಬರವಿಲ್ಲದ ಉತ್ಪಾದನೆ ಸಾಧಿಸಿ ಮುಂದೆ ಔದ್ಯಮೀಕರಣವನ್ನು ಮುನ್ನಡೆಸುವಲ್ಲಿ ತಡೆ ಒಡ್ಡಿತು.

ಜಮೀನುದಾರರ ಮತ್ತು ಪ್ರಭಾವೀ ಬಂಡವಾಳಿಗರ ಹಿತಾಸಕ್ತಿಯನ್ನು ಕಾಯುತ್ತಿದ್ದ ಈ ಬೆಳವಣಿಗೆಯನ್ನು ಅವರೇ ಬದಲಿಸುವುದು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯನ್ನು ಅಂದರೆ ಇರುವ ವರ್ಗ ಸಂಬಂಧವನ್ನು ಬದಲಿಸದ ಒಂದು ಪರ್ಯಾಯ ವ್ಯವಸ್ಥೆಯ ಅವಕಾಶ ಅವರಿಗೆ ಬೇಕಾಯಿತು.

ಖೋತಾ ಹಣಕಾಸಿನಿಂದ ಹೆಚ್ಚಿನ ಬೆಳವಣಿಗೆ ದರ ಉಳಿಸಿಕೊಳ್ಳಲು ವಿಫಲವಾದ ಪ್ರಭುತ್ವ ಈ ಅವಧಿಯಲ್ಲಿ ಇನ್ನೊಂದು ತೊಡಕನ್ನು ಕಂಡಿತು. ಅದು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಹಣಕಾಸು ಅದರ ಕೈಗೆ ಸಿಗದೇ ಇದ್ದದ್ದು. ಇನ್ನೂ ಹಣದುಬ್ಬರ ಹೆಚ್ಚಿಸಿ ತನ್ಮೂಲಕ ಬೆಳವಣಿಗೆ ಸಾಧಿಸ ಹೊರಟರೆ ಅದು ರಾಜಕೀಯವಾಗಿ ದುಷ್ಪರಿಣಾಮ ಬೀರುತ್ತಿತ್ತು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಿಪುಲವಾಗಿ ಇದ್ದ ಮಿಗುತಾಯವನ್ನು ಲಭ್ಯಗೊಳಿಸಿಕೊಳ್ಳಲು ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಮಾರ್ಗದಿಂದ ಮಾತ್ರ ಇದು ಸಾಧ್ಯವಾಗಿತ್ತು.

ಬಾಹ್ಯ ಕಾರಣಗಳು

ಎಪ್ಪತ್ತರ ದಶಕದಲ್ಲಿ ಅಭಿವೃದ್ಧಿಶೀಲ ದೇಶಗಳು ತಮ್ಮ ವ್ಯಾಪಾರ ಬಾಕಿ ತೀರಿಸಲು ಐ.ಎಂ.ಎಫ್.ನ ಸುತ್ತಾ ತಿರುಗತೊಡಗಿದ್ದವು. ಐ.ಎಂ.ಎಫ್. ಈ ದೇಶಗಳ ಬಜೆಟ್ ಖೋತಾಗಳ ಕಡೆಗೆ ಗಮನ ಕೊಡಲಿಲ್ಲ. ಆದರೆ ಅದರ ಗಮನ ಇದ್ದುದು ಈ ದೇಶಗಳ ಆಮದು ನಿರ್ಬಂಧನೆ ಆಮದಿಗೆ ಬದಲಿಯಾಗಿ ಮಾಡುವ ಉತ್ಪಾದನೆಗಳ ಕಡೆಗೆ. ಇವುಗಳಲ್ಲಿ ಬದಲಾವಣೆ ತರುವುದರಿಂದಲ್ಲೇ ಈ ದೇಶಗಳ ಆರ್ಥಿಕಗಳ ಸ್ಥಿರೀಕರಣ ಸಾಧ್ಯ ಎನ್ನತೊಡಗಿತು. ಐ.ಎಂ.ಎಫ್. ಈ ದೇಶಗಳ ಹಣಗಳ ಬೆಲೆಯೂ ಹೆಚ್ಚಾಗಿದೆ. ಆದ್ದರಿಂದ ಅವುಗಳ ಅಪಮೌಲ್ಯೀಕರಣ ರಫ್ತನ್ನು ಹೆಚ್ಚಿಸಿ ಈ ಆರ್ಥಿಕಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ ಎಂಬುದು ಐ.ಎಂ.ಎಫ್.ನ ವಾದ ಸರಣಿ.

ಯುದ್ಧಾ ನಂತರ ಬೆಳವಣಿಗೆಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ದೊಡ್ಡ ಔದ್ಯಮಿಕ ಬಂಡವಾಳ ಪ್ರಬಲವಾಗಿತ್ತು. ಈ ಪರತ್ತುಗಳ ಒತ್ತು ಈ ಔದ್ಯಮಿಕ ಬಂಡವಾಳದ ಆಸಕ್ತಿಯನ್ನು ಕಾಯುತ್ತಿತ್ತು. ಉದಾರೀಕರಣ ಮಾರುಕಟ್ಟೆಗಳನ್ನು ತೆರೆಯಿತು. ಹಿಂದಾದರೆ ಈ ಮಾರುಕಟ್ಟೆಗಳನ್ನು ಪ್ರವೇಶಿಸಬೇಕಾದರೆ ಆಯಾ ದೇಶಗಳ ನಿಬಂಧನೆಗಳನ್ನು ಮುರಿಯಬೇಕಾಗುತ್ತಿತ್ತು. ಈಗ ಇಂತಹ ತೊಂದರೆಗಳು ವಿರಳವಾದವು.

ಉದಾರೀಕರಣ

ಮೊದಲನೇ ತೈಲ ಬಿಕ್ಕಟ್ಟು ಈ ಪರಿಸ್ಥಿತಿಯನ್ನು ಪೂರ್ಣ ಬದಲಿಸಿತು. ಈ ಬದಲಾದ ಪರಿಸ್ಥಿತಿಯಲ್ಲಿ ತೈಲ ಉ ದಿಸುವ ದೇಶಗಳ ಚಾಲ್ತಿ ಖಾತೆ ಅ ಮಿತ ಮಿಗುತಾಯ ತ್ರೋರಿದ್ದರೆ ಅಭಿ ಹೊಂದಿದ ದೇಶಗಳಲ್ಲಿ ಸ್ವಲ್ಪ ಮಿಗುತಾ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ಖಾತೆಗಳಲ್ಲಿ ಖೋತಾ ಕಂಡುಬಂತು. ತೈಲದ ಮಿಗುತಾಯದ ಹಣ ಅಂ ಷ್ಟ್ರೀಯ ಬ್ಯಾಂಕಿಂಗ್ ವ್ಯವಸ್ಥೆಯೊಳ ಬಂದದ್ದರಿಂದ ಈ ವ್ಯವಸ್ಥೆ ಅತ್ಯಂತ ಪ್ರ ವಾಯಿತು. ಇಂತಹ ಬ್ಯಾಂಕಿಂಗ್ ವ ಅಭಿವೃದ್ಧಿ ಹೊಂದಿದ ದೇಶಗಳ ಹಿಡಿ ಲ್ಲಿತ್ತು.

ಈಗ ಎರಡೂ ಪಂಗಡ ಗಳ ಆಸಕ್ತಿಗಳು ಒಂದುಗೂಡಿದವು. ವೃದ್ಧಿ ಹೊಂದಿದ ದೇಶಗಳು ಸಾಲ ಬಯಸಿದವು. ಅಭಿವೃದ್ಧಿಶೀಲ ದೇಶ ಸಾಲ ಪಡೆಯಬಯಸಿದವು ಈ ತಿಯಲ್ಲಿ ಆಮದಿನ ಮೇಲಿನ ನಿಬಂ ಗಳು ಅರ್ಥಹೀನವಾದವು. ಸರ್ಕಾರ ದೊಡ್ಡ ಖೋತಾಗಳನ್ನು ತಮ್ಮ ಬಜ ನಲ್ಲಿ ತೋರಿದರೂ ಆಮದನ್ನು ಅಂ ಷ್ಟ್ರೀಯ ಹಣಕಾಸಿನ ನೆರವಿನಿಂದ ಮಾ ದ್ದರಿಂದ ಚಾಲ್ತಿ ಖಾತೆಯ ಖೋತಾಕ್ಕೆ ಯಿರದ್ದರಿಂದ ಹಣದುಬ್ಬರ ಹೆಚ್ಚಾಗಲಿ

ಇಂತಹ ಪರಿಸ್ಥಿತಿಯ ಪರಿಣಾ ಈಗ ಇತಿಹಾಸ. 1970 ರಿಂದ ಹಿಡಿ 1980 ರ ದಶಕ ಮತ್ತು ಆನಂತರದಲ್ಲಿ ವೃದ್ಧಿಶೀಲ ದೇಶಗಳು ಒಂದಾದ ಮೇ ಒಂದರಂತೆ ಉದಾರೀಕರಣದ ಪ್ರಯೋ ದಲ್ಲಿ ತೊಡಗಿದವು. ಇಂತಹ ಉದಾ ಕರಣದಿಂದ ಅಂತರ್ರಾಷ್ಟ್ರೀಯ ಬಂಡ ಳದ ಬಳಕೆ ಮಾಡಬಯಸಿದವು. ಈ ಬೆಳವಣಿಗೆಗೆ ಎರಡು ಅನುಕೂ ಕಾರಣಗಳಿದ್ದವು. ಆಂತರಿಕ ಮಾರು ಗಳನ್ನು ಬೆಳೆಸಿ ಅಮದು ಕಡಿತ ಮ ವುದು ರಾಜಕೀಯವಾಗಿ ಸರಿಯಾದ ಯಾಗಿರಲಿಲ್ಲ. ಆದರೆ ಈ ಸರ್ಕಾರ ದೊಡ್ಡ ಬಜೆಟ್ ಖೋತಾಗಳನ್ನು ಅಂ ಷ್ಟ್ರೀಯ ಸಾಲಗಳಿಂದ ಮುಚ್ಚಿ ಹಾಕಬ ಗಿದ್ದವು. ಉದಾರೀಕರಣದ ದುಷ್ಪರಿಣಾ ಗಳು ಇದರಿಂದ ಹೊರಗೆ ಬರದೇ ಇ ನಿಜವಲ್ಲಿ ಉದಾರೀಕರಣದ ನಂತರ ಹ



1976 ರ ಅಬು ಅಬ್ರಹಾಂರವರ ಒಂದು ವ್ಯಂಗ ಚಿತ್ರ. ಹಣಕಾಸು ಮಂತ್ರಿ ಸಿ. ಸುಬ್ರಮಣ್ಯಂ ಪ್ರಧಾನಿ ಇಂದಿರಾ ಗಾಂಧಿಯವರ ಹಸ್ತ ನೋಡಿ ರಾಶಿ ಹೇಳುತ್ತಿದ್ದಾರೆ. ಐ.ಎಂ.ಎಫ್. ಸಾಲದ ಸುಗ್ಗಿಯ ಬಗ್ಗೆ

ಅಭಿವೃದ್ಧಿಶೀಲ ದೇಶಗಳು ಗಣನೀಯ ಬೆಳವಣಿಗೆ ತೋರಿದವು.

ಸಾಲದ ವಿಷವೃತ್ತ

ಆದರೆ ಈ ಗುಳ್ಳೆ ಒಡಯಲೇ ಬೇಕಾಗಿತ್ತು. ಸಾಲ ಮರುಪಾವತಿಯ ಸಮಯ ಬಂದಾಗ ಈ ಹಲವು ದೇಶಗಳಲ್ಲಿ ಆ ಸಾಮರ್ಥ್ಯ ಇರಲಿಲ್ಲ. ಸಾಲ ಮರುಪಾವತಿಗೆ ಅವು ಮತ್ತೆ ಸಾಲ ಪಡೆಯಬೇಕಾಗಿ ಬಂತು. ಎಂಬತ್ತರ ದಶಕದಲ್ಲಿ ತೈಲದ ಬೆಲೆಯೂ ಕುಸಿದು ಅಂತರ್ರಾಷ್ಟ್ರೀಯ ಬ್ಯಾಂಕುಗಳಲ್ಲಿನ ಠೇವಣಿಯ ಮೊತ್ತ ಕಡಿಮೆಯಾಗತೊಡಗಿತು. ಈಗ ಈ ಬ್ಯಾಂಕುಗಳಿಗೆ ಅಭಿವೃದ್ಧಿಶೀಲ ದೇಶಗಳ ಸರ್ಕಾರಗಳನ್ನು ತಮ್ಮ ಶಿಸ್ತಿಗೆ ಒಳಪಡಿಸುವುದರ ಅವಶ್ಯಕತೆ ಕಂಡು ಬಂತು. ಇಲ್ಲವಾದರೆ ಅವರ ಹಣ ಮುಳುಗಿ ಹೋಗುವ ಸಾಧ್ಯತೆಯಿತ್ತು. ಈ ಕೆಲಸಕ್ಕೆ ಐ.ಎಂ. ಎಫ್. (ಅಂತರ್ರಾಷ್ಟ್ರೀಯ ಹಣಕಾಸು ನಿಧಿ) ಮುಂದೆ ಬಂತು. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಈ ಸಾಲದ ಬಿಕ್ಕಟ್ಟು ಒಂದು ವಿಷವರ್ತುಲವಾಗಿ ಪರಿಣಮಿಸಿತು. ಈಗ ಆಂತರಿಕ ನಿಬಂಧನೆಗಳನ್ನು ಹೇರಿ ಈ ಉದಾರೀಕರಣದಿಂದ ಹಿಂದೆ ಸರಿಯುವ ಸಾಧ್ಯತೆಗಳೇ ಇರಲಿಲ್ಲ. ರಾಜಕೀಯವಾಗಿಯೂ ಸಹ ಈ ಉದಾರೀಕರಣದ ಲಾಭ ಪಡೆದ ಶಕ್ತಿಗಳಿದ್ದವು. ಅವು ಈ ನೀತಿಯನ್ನು ಮುಂದುವರಿಸಲೇಬೇಕೆಂಬ ಒತ್ತಡವನ್ನು ಸರ್ಕಾರದ ಮೇಲೆ ತಂದವು. ಹಾಗಾಗಿ ರಾಜಕೀಯವಾಗಿಯೂ ಉದ್ಧಾರೀಕರಣದಿಂದ ಹಿಂದೆ ಸರಿಯುವ ಸಾಧ್ಯತೆಯೇ ಇರಲಿಲ್ಲ.

ನಮ್ಮ ದೇಶದಲ್ಲಿ.......

ಭಾರತವು 1990-91ರ ವಿದೇಶೀ ವಿನಿಮಯ ಬಿಕ್ಕಟ್ಟಿಗೆ ಇದೇ ದಾರಿಯಲ್ಲಿ ನಡೆದು ಬಂತು ಎಂಬುದು ಸ್ಪಷ್ಟ. ಈ ಬಿಕ್ಕಟ್ಟನ್ನು ಪರಿಹರಿಸಲು ಭಾರತ ಆಮದನ್ನು ತೀವ್ರವಾಗಿ ಕಡಿತ ಮಾಡಿತು. ನಂತರ ಐ.ಎಂ.ಎಫ್.ನಿಂದ ಸಾಲಕ್ಕಾಗಿ ಮಾತುಕತೆ. ಈ ಐ.ಎಂ.ಎಫ್.ನ ಷರತ್ತುಗಳ ಪಾಲನೆ. ಮೊದಲು ಸ್ಥಿರೀಕರಣಕ್ಕಾಗಿ ಹಲವು ಕ್ರಮಗಳು ಇದು ವ್ಯಾಪಾರ ಬಾಕಿಯನ್ನು ಒಂದು ಸ್ವೀಕರಾರ್ಹ ಮಟ್ಟಕ್ಕೆ ತರಲು. ಆಮೇಲೆ ರಚನಾತ್ಮಕ ಹೊಂದಾಣಿಕೆ- ಇದು ಆಮದನ್ನು ಹೆಚ್ಚಿಸಿ ನಮ್ಮ ದೇಶೀ ಉದ್ಯಮಗಳನ್ನು ಕಡೆಗಣಿಸಿ ವಿದೇಶೀ ಹಣಹೂಡಿಕೆಗೆ ಒತ್ತು ನೀಡುವಂತದ್ದು. ಇಂತಹ ವಿದೇಶೀ ಬಂಡವಾಳ ಹೂಡಿಕೆಯಿಂದ ನಮ್ಮ ಉತ್ಪನ್ನಗಳ ಗುಣಮಟ್ಟ ಹೆಚ್ಚಿ ಅದು ರಫ್ತನ್ನು ಹೆಚ್ಚಿಸಿ ಈ ರಫ್ತು ನಮ್ಮ ಆರ್ಥಿಕವನ್ನೇ ಸುಧಾರಿಸುತ್ತದೆ. ಇಲ್ಲಿಯವರೆಗೆ ಸರ್ಕಾರೀ ವೆಚ್ಚ ಏನನ್ನು ಮಾಡುತ್ತಿತ್ತೊ ಅದನ್ನು ರಫ್ತಿನಿಂದ ಬಂದ ಮಿಗುತಾಯ ಮಾಡುತ್ತದೆ ಎಂಬುದೇ ಈ ಕ್ರಮಗಳ ಸಮರ್ಥನೆಯ ವಾದ ಸರಣಿ.

ಇಲ್ಲಿ ಕೆಲವು ಪ್ರಶ್ನೆಗಳು ಏಳುತ್ತವೆ. ಈ ಸ್ಥಿರೀಕರಣದ ಕ್ರಮಗಳು ಹಣದುಬ್ಬರದ ಕಡಿತವನ್ನು ಹೇಗೆ ಸಾಧಿಸುತ್ತವೇ? ವ್ಯಾಪಾರ ಬಾಕಿಯ ಪರಿಸ್ಥಿತಿ ಸುಧಾರಿಸುವಲ್ಲಿ ಹೇಗೆ ಸಹಾಯ ಮಾಡುತ್ತವೆ? ಕಳೆದ ಎರಡು ವರ್ಷಗಳ ಅನುಭವವೇನು?

1991ರ ಜುಲೈನಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ಕೃಷಿ ಮತ್ತು ಔದ್ಯಮಿಕ ಉತ್ಪಾದನೆಗಳ ಪರಿಷ್ಕೃತ ಅಂದಾಜುಗಳನ್ನು ತಯಾರಿಸಿ ಅವುಗಳನ್ನೇ ಬಳಸಿಕೊಳ್ಳುತ್ತಿದೆ. ಈ ಪರಿಷ್ಕೃತ ಅಂದಾಜುಗಳು ಹಿಂದಿನ ವರ್ಷದ ಉತ್ಪಾದನೆಯನ್ನು ಇಳಿಸಿ (ಶೇ. 2.5ರಷ್ಟು) ಅದೇ ಅಂಕೆಯನ್ನು ಪ್ರಸಕ್ತ ವರ್ಷಕ್ಕೆ ಏರಿಸಿಬಿಡುತ್ತದೆ. (ಶೇ. 3.7 ರಷ್ಟಕ್ಕೆ) ಇದು ಆಮದಿನ ಉದಾರೀಕರಣದಿಂದ ಸಾಧ್ಯವಾಯಿತು ಎನ್ನುತ್ತದೆ ಸರ್ಕಾರ. ಆದರೆ ಈ ಸಮರ್ಥನೆ ಹಲವು ಸಂದೇಹಗಳಿಗೆ ಎಡೆಮಾಡಿಕೊಡುತ್ತದೆ.

1. ಔದ್ಯಮಿಕ ಬೆಳವಣಿಗೆ ಬಂಡವಾಳ ಉತ್ಪನ್ನಗಳಲ್ಲಿ ಕಾಣಿಸಿಕೊಂಡಿದೆ (ಶೇ. 16.9 ರಿಂದ 8.8 ರಷ್ಟಿದೆ.) ಮತ್ತು ಇತರ ಮಧ್ಯಮ ಉತ್ಪನ್ನಗಳಲ್ಲೂ ಸಹ (ಶೇ. 0.6 ರಿಂದ ಶೇ. 7.2. ರಷ್ಟಕ್ಕೆ) ಆದರೆ ಆಮದು ಈ ಉತ್ಪನ್ನಗಳ ಬೆಳವಣಿಗೆಯನ್ನೇ ಕುಂಠಿತಗೊಳಿಸಬೇಕಲ್ಲವೇ?

2. ಎಲೆಕ್ಟ್ರಾನಿಕ್ ಮತ್ತು ಆಟೋಮೋಬೈಲ್ ಉದ್ಯಮಗಳು ತೀವ್ರ ಹಿಂಜರಿತ ಅನುಭವಿಸುತ್ತಿವೆ. ಇದು ಸರ್ಕಾರಿ ಅಂಕಿ ಸಂಖ್ಯೆಗಳಲ್ಲಿ ಕಾಣಸಿಗುವುದಿಲ್ಲ.

3. ಆಮದು ಬೆಳವಣಿಗೆಗೆ ಸಹಾಯ ಮಾಡಿದೆಯೆಂಬ ಮಾತಿನಲ್ಲೂ ಹುರುಳಿಲ್ಲ. ರಸಗೊಬ್ಬರದಂತಹ ಮತ್ತು ರಫ್ತು ಸಂಬಂಧಿತ ಆಮದನ್ನು ಬಿಟ್ಟರೆ ಬೇರಾವುದೇ ವಸ್ತುಗಳ ಆಮದು ಡಾಲರುಗಳ ಲೆಕ್ಕದಲ್ಲಿ ತೀವ್ರವಾಗಿ ಏರಿಲ್ಲ.

4. ಎಂಬತ್ತರ ದಶಕದಲ್ಲಿ ಸರ್ಕಾರೀ ವೆಚ್ಚದಿಂದ ಔದ್ಯಮಿಕ ಬೆಳವಣಿಗೆಗೆ ಪ್ರಚೋದನೆ ಸಿಕ್ಕಿ ಅದರ ಪರಿಣಾಮಗಳು ಈಗಲೂ ಕಾಣುತ್ತವೆ.

5. ರೂಪಾಯಿಯ ಅಪಮೌಲ್ಯೀಕರಣ ಮತ್ತು ಉದಾರೀಕರಣ ರಫ್ತನ್ನು ತೀವ್ರವಾಗಿ ಹೆಚ್ಚಿಸಲು ಸಾಧ್ಯವಾಗಿಲ್ಲ. ಯಾಕೆಂದರೆ 'ಸೋವಿಯತ್' ರಷ್ಯ ಛಿದ್ರವಾದ ಮೇಲೆ ಆ ರಾಷ್ಟ್ರಕ್ಕೆ ನಮ್ಮ ದೇಶದ ರಫ್ತು ತೀವ್ರವಾಗಿ ಕಡಿಮೆಯಾಯಿತು.

ಈಗ ಸರ್ಕಾರ ಇನ್ನೊಂದು ವಾದವನ್ನು ಮುಂದಿಡಬಹುದು. 'ಕೃಷಿ ಉತ್ಪನ್ನ ಹೆಚ್ಚಿದೆ' ಎಂಬುದೇ ಆ ವಾದ. 1991-92 ರಲ್ಲಿ ಕೃಷಿ ಉತ್ಪನ್ನದಲ್ಲಿ ಶೇ. 2.8 ರಷ್ಟು ಇಳಿತ ಉಂಟಾಗಿದ್ದು ಸರ್ಕಾರ ಹೇಳುವಂತೆ 1992-93 ರಲ್ಲಿ ಅದು ಶೇ. 5 ರಷ್ಟು ಏರಿರುವ ಸಂಭವವಿಲ್ಲ. ಯಾಕೆಂದರೆ ಮಳೆ 1992-93 ರಲ್ಲಿ ಅಂತಹ ಉತ್ತಮವಾಗೇನೂ ಆಗಿಲ್ಲ. ಸ್ವಲ್ಪ ಅಕ್ರಮ ದಾಸ್ತಾನುಗಳು ಹೊರಬಂದಿರಬಹುದಷ್ಟೇ.

ಸರ್ಕಾರದ ಉದ್ದೇಶಗಳು ಸಫಲವಾಗಿವೆಯೇ?

ಸ್ಥಿರೀಕರಣ ಮರಿಚಿಕೆಯಾಗೇ ಉಳಿದಿದೆ. ಆದರೆ ಇತರ ದುಷ್ಪರಿಣಾಮಗಳಂತೂ ಕಾಣತೊಡಗಿವೆ.

1. ದೇಶದ ಉದ್ಯಮ ಕ್ಷೇತ್ರದಲ್ಲಿ ಕೇಂದ್ರೀಕರಣ ಹೆಚ್ಚಾಗತೊಡಗಿದೆ. ಎಮ್.ಆರ್.ಟಿ.ಪಿ. (ಏಕಸ್ವಾಮ್ಯ ವ್ಯಾಪಾರದ ಮೇಲೆ ನಿಬಂಧನೆ ಹೇರುವ ಕಾನೂನು) ಯಂತಹ ಕಾನುಗಳನ್ನು ಸಡಿಲುಗೊಳಿಸಲಾಗಿದೆ.

2. ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸಿನ ನೆರವಿನಲ್ಲಿ ತೀವ್ರ ಅಡಚಣೆ ಉಂಟುಮಾಡಲಾಗಿದೆ. ಇವುಗಳಿಗೆ ದೊರೆಯುತ್ತಿದ್ದ ಸುಲಭ ಸಾಲ, ಸುಲಭ ಬಡ್ಡಿದರ ಈಗಿಲ್ಲ.


ಇದರ ಪರಿಣಾಮವಾಗಿ ದೇಶೀ ಉದ್ಯಮಗಳು ನರಳುತ್ತಿವೆ. ವಿದೇಶೀ ಬಂಡವಾಳ ಹರಿದು ಬಂದು ತೊಡಗಿದಂತೆ ಲಾಭವೇ ಎಲ್ಲಕ್ಕೂ ಮುಖ್ಯವಾಗತೊಡಗುತ್ತದೆ.

ಆಮದಿನ ಮೇಲಿನ ನಿರ್ಭಂಧಗಳು ಇಲ್ಲವಾದ್ದರಿಂದ ವ್ಯಾಪಾರ ಬಾಕಿ ಹೆಚ್ಚುವ ಸಾಧ್ಯತೆ ಹೆಚ್ಚು. ಇದಲ್ಲದೆ ರೂಪಾಯಿಯ ಪೂರ್ಣ ಪರಿವರ್ತನಾಶೀಲತೆ ದಿನ ನಿತ್ಯ ರೂಪಾಯಿಯ ಅಪಮೌಲ್ಯೀಕರಣ ಮಾಡುತ್ತದೆ. ಇದಕ್ಕೆ ಉತ್ತರವಾಗಿ ಸರ್ಕಾರ ರಫ್ತನ್ನು ಹೆಚ್ಚಿಸುವ ಮಾತನ್ನಾಡುತ್ತಿದೆ. ಕೃಷಿ ಉತ್ಪನ್ನಗಳ ರಫ್ತಿಗೆ ಒತ್ತು ಬೀಳುತ್ತಿದ್ದಂತೆ ಆಹಾರ ಧಾನ್ಯಗಳನ್ನು ಬೆಳೆಯುವುದು ಕಡಿಮೆಯಾಗುತ್ತದೆ. ನಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಕೃಷಿ ಇರುವುದಿಲ್ಲ. ಅದು ರಫ್ತಿಗೆ ತಕ್ಕಂತೆ ಇರುತ್ತದೆ.

ರಫ್ತಿಗೆ ಒತ್ತು ನೀಡಲು ರೂಪಾಯಿಯ ಅಪಮೌಲ್ಯೀಕರಣವನ್ನು ಮತ್ತೆ ಮಾಡಬಹುದು. ಇದರಿಂದ ರಫ್ತಿನ ರೂಪಾಯಿಯ ಬೆಲೆ ಹೆಚ್ಚಿ ಸ್ವಲ್ಪ ಮಟ್ಟಿಗೆ ರಫ್ತು ಹೆಚ್ಚಬಹುದು. ಆದರೆ ಆಂತರಿಕವಾಗಿ ನಮ್ಮ ದೇಶದ ದುಡಿವ ಜನರ ಬವಣೆ ಹೆಚ್ಚುತ್ತದೆ. ಬೆಲೆಗಳು ತೀವ್ರವಾಗಿ ಏರುವುದರಿಂದ ಜೀವನ ಕಷ್ಟಕರವಾಗುತ್ತದೆ.

ಅರ್ಥ ಮಂತ್ರಿಗಳಿಂದ ಮೊಸಳೆಕಣ್ಣೀರು

ಕೇಂದ್ರ ಹಣಕಾಸು ಸಚಿವ ಮನಮೋಹನ್‌ಸಿಂಗರು ಮೊನ್ನೆ ಮೊನ್ನೆ ಬೆಂಗಳೂರಿಗೆ ಬಂದು ಬ್ಯಾಂಕ್ ಅಧಿಕಾರಿಗಳಿಗೆ ಆದ್ಯತೆಯ ವಲಯಕ್ಕೆ ಹೆಚ್ಚು ಸಾಲ ನೀಡಲು ಹೇಳಿದರು. ಉದಾರೀಕರಣ, ನರಸಿಂಹಮ್ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಈ ಮಂತ್ರಿಗಳು ಈ ಮಾತನ್ನಾಡುವುದನ್ನು ಕೇಳಿದರೆ ನಗು ಬರುತ್ತದೆ. ಬ್ಯಾಂಕುಗಳು ಲಾಭ ಮಾಡಬೇಕು ಎಂದರೆ ಅವುಗಳು ಬಡವರಿಗೆ ಸಾಲ ಕೊಡಬಾರದು ಎಂದೇ ಅರ್ಥ. ಇಂದಿನ ಹಣಕಾಸು ಮಾರುಕಟ್ಟೆಯಲ್ಲಿ ಬಂಡವಾಳದ ಬೆಲೆ ಬಹಳ ಹೆಚ್ಚಿರುವಾಗ ಕಡಿಮೆ ದರದಲ್ಲಿ ಬಡವರಿಗೆ ಸಾಲ ನೀಡಿದರೆ ಅದರಿಂದ ಬ್ಯಾಂಕುಗಳಿಗೆ ಹಾನಿಯಾಗುತ್ತದೆ ಹೊರತು ಲಾಭವಲ್ಲ. ಹೀಗಿರುವಾಗ ಜನರ ಮೆಚ್ಚುಗೆಗಳಿಸಲು ಹಣಕಾಸು ಮೇಲಿನ ಮಾತನ್ನಾಡಿದ್ದಾರೆ ಹೊರತು ಮಂತ್ರಿಗಳು ನಿಜವಾದ ಕಾಳಜಿಯಿಂದಿಲ್ಲ ಎಂಬುದು ಸ್ಪಷ್ಟ. ಉದಾರೀಕರಣ ಖಾಸಗೀಕರಣದ ಜೊತೆಗೆ ಆದ್ಯತೆಯ ವಲಯವೆನ್ನಿಸಿಕೊಂಡಿರುವ ಕೃಷಿ, ಸಣ್ಣ ವ್ಯಾಪಾರ, ಸಣ್ಣ ಕೈಗಾರಿಕೆ ಇವುಗಳಿಗೆ ತೀವ್ರವಾಗಿ ಬಡಿಯಲಿದೆ. ಹಣಕಾಸಿನ ಬರ.



ನರಸಿಂಹರಾವ್ ಸರಕಾರದ 24ನೇ ತಿಂಗಳಲ್ಲಿ

ದೊಡ್ಡ ಮೀನು ಸಣ್ಣ ಮೀನನ್ನು ನುಂಗುವ ಕಾಲ

ಉದಾರೀಕರಣ ಹೊಸ ಆರ್ಥಿಕ ನೀತಿಗಳ ಕಾಲಕ್ಕೆ ಮೇಲಿನ ಅರ್ಥವೂ ಇದೆಯೆಂಬುದು ಗೊತ್ತೆ? ಸಣ್ಣ ಕೈಗಾರಿಕೆಗಳು ನಮ್ಮಲ್ಲಿ ಪಂಚವಾರ್ಷಿಕ ಯೋಜನೆಗಳು ಬಂದಾಗಿನಿಂದ ಆದ್ಯತೆಯ ಕ್ಷೇತ್ರಕ್ಕೆ ಸೇರಿದವು. ಅದಕ್ಕೆ ಕಾರಣವಿಲ್ಲದೆ ಇಲ್ಲ. ನಮ್ಮಲ್ಲಿನ ಬಂಡವಾಳ ಕೂಡುವಿಕೆಗೆ ತಕ್ಕಂತವು ಈ ಸಣ್ಣ ಮತ್ತು ಗುಡಿ ಕೈಗಾರಿಕೆಗಳು. ನಮ್ಮ ಆರ್ಥಿಕದಲ್ಲಿ ನಮ್ಮ ರಫ್ತು ಉದ್ಯೋಗ ಸೃಷ್ಟಿ ಇತ್ಯಾದಿಗಳಲ್ಲಿ ಬಹಳ ಮುಖ್ಯ ಸ್ಥಾನವಿದೆ ಈ ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ. ಈ ವಲಯ ಸರ್ಕಾರದಿಂದ ರಕ್ಷಣೆ ಪಡೆದಿತ್ತು. ಈಗ ಬಂದೊಂದಾಗಿ ರಿಯಾಯ್ತಿ ಅನುಕೂಲಗಳನ್ನು ತೆಗೆಯಲಾಗುತ್ತಿದೆ. ಇತ್ತೀಚಿನ ಸುದ್ದಿಯಂತೆ ಸರ್ಕಾರ ಸಣ್ಣ ಕೈಗಾರಿಕೆಗಳಿಗಿನ ಮಿಸಲಾತಿಯನ್ನು ತೆಗೆಯಲಿದೆಯಂತೆ. ಈ ಮಿಸಲಾತಿ ಏನೆಂದರೆ ಕೆಲವು ವಸ್ತುಗಳನ್ನು ಸಣ್ಣ ಕೈಗಾರಿಕೆಗಳು ಮಾತ್ರ ಉತ್ಪಾದಿಸಬಹುದು. ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳು ಈ ವಸ್ತುಗಳನ್ನು ಉತ್ಪಾದಿಸುವಂತಿಲ್ಲ. ಈಗ ಈ ಮೀಸಲಾತಿ ಹೋಗಲಿದೆ. ಅಂದರೆ ಸಣ್ಣ ಕೈಗಾರಿಕೆಗಳು ದೊಡ್ಡವುಗಳ ಜೊತೆ ಸ್ಪರ್ಧಿಸಬೇಕು. ಇದರರ್ಥ ಸಣ್ಣ ಕೈಗಾರಿಕೆಗಳು ಮುಚ್ಚುತ್ತವೆ. ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ನುಂಗಿದಂತೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಕ್ರಮದ ಆಲೋಚನೆ ಯಾಕೆ ಗೊತ್ತೆ?

ಬಹುರಾಷ್ಟ್ರೀಯ ಕಂಪೆನಿಗಳನ್ನು ದೇಶದೊಳಕ್ಕೆ ಆಹ್ವಾನಿಸಲು ಅವುಗಳಿಗೆ ನೀಡುವ ಕಾಣಿಕೆ!!

ಹರ್ಷದ್ ಮೆಹ್ತನ ಹೇಳಿಕೆಯಿಂದ ಆಳುವ ಪಕ್ಷಕ್ಕೆ ನಡುಕ?

ಒಂದು ಕೋಟಿ ರೂಪಾಯಿಯಷ್ಟು ಹಣವನ್ನು ರಾಜಕೀಯ ಕಾರಣಗಳಿಗಾಗಿ ಹಂಚಿದ್ದೇನೆ. ಅದರ ವಿವರಗಳನ್ನು ನೀಡುತ್ತೇನೆ ಆದರೆ ನನಗೆ ರಾಜಕೀಯ ಕಿರುಕುಳದಿಂದ ರಕ್ಷಣೆ ನೀಡಬೇಕು ಎಂದು ಹೇಳಿದ ಹರ್ಷದ್ ಮೆಹ್ತನ ಮಾತುಗಳು ಆಳುವ ಪಕ್ಷದಲ್ಲಿ ನಡುಕ ಹುಟ್ಟಿಸಿದಂತೆ ಕಾಣುತ್ತದೆ.

'ಹರ್ಷದ್ ಮೆಹ್ತ ಬೆದರಿಕೆಗಳ ಪ್ರವೀಣ'. ಭಾರತೀಯ ಸ್ಟೇಟ್ ಬ್ಯಾಂಕ್‌ನ ಅಧಿಕಾರಿಗಳನ್ನೂ ಆತ ಈ ಬೆದರಿಕೆಗಳಿಂದಲೇ ಕುಣಿಸಿದ ಎಂದೆಲ್ಲ ಮಾತುಗಳೂ ಬರುತ್ತಿವೆ. ಈ ನಡುವೆ ಲಂಡನ್‌ಗೆ ಹೋಗಿರುವ ಹರ್ಷದ್ ವಕೀಲರಾದ ಜೇಠ್ಮಲಾನಿ ವಾಪಸ್ಸಾದ ನಂತರ ಹರ್ಷದ್ ಗುಟ್ಟುಗಳನ್ನು ಹೊರಗೆಡವುತ್ತಾನೆ ಎಂಬ ನಿರೀಕ್ಷೆ ಇತ್ತು. ಈಗ ಅದಾಗುವುದಿಲ್ಲ ಯಾಕೆಂದರೆ ಜೇಠ್ಮಲಾನಿಯ ವಾಪಸ್ಸಾತಿ ಮುಂದೆ ಹೋಗಿದೆ.

ಸಂಸದೀಯ ಸಮಿತಿಯೇ ವಿಚಾರಣೆ ನಡೆಸುತ್ತಿದ್ದರೂ ಹಗರಣದ ಬಹಳ ಸಂಗತಿಗಳು ಹೊರಬರದೇ ಹಾಗೆ ಮುಚ್ಚಿಹೋಗುತ್ತವೇನೊ ಎಂಬ ಸಂದೇಹ ಎಲ್ಲರನ್ನು ಕಾಡತೊಡಗಿದೆ ಅಲ್ಲವೇ?

ವರದಿ ತಯಾರಿಸುತ್ತಿರುವ ಸಂಸದೀಯ ಸಮಿತಿ

ಸಂಸದೀಯ ಸಮಿತಿ ಈಗ ವರದಿಯ ಕರಡನ್ನು ಸಿದ್ಧಪಡಿಸುತ್ತಿದೆ. ಈ ಕರಡು ರಚನೆಗೆ ಉಪಸಮಿತಿಯೊಂದನ್ನು ನೇಮಿಸಲಾಗಿದ್ದು ಅದರಲ್ಲಿ ಇತರ ಸಂಸದೀಯರ ಜೊತೆಗೆ ಸಮಿತಿಯ ಅಧ್ಯಕ್ಷ ರಾಮ್ ನಿವಾಸ್ ಮಿರ್ಧಾ, ಜನತಾದಳದ ರಬಿರಾಯ್ ಹಾಗೂ ಸಿಪಿಎಂನ ದೀಪೇನ್ ಘೋಷ್ ಸಹ ಇದ್ದಾರೆ.

ಈಗಿರುವಂತೆ ಸಮಿತಿ ಇನ್ನೊಂದು ಸಾರಿ ಅವಧಿ ವಿಸ್ತರಣೆ ಕೇಳುವ ಲಕ್ಷಣಗಳಿಲ್ಲ. ಅಂದರೆ ಲೋಕಸಭೆಯ ಮುಂಗಾರು ಅಧಿವೇಶನದಲ್ಲಿ ಸಮಿತಿ ವರದಿ ಸಲ್ಲಿಸಬಹುದು.

ಹಗರಣದಲ್ಲಿ ಮುಳುಗಿದ ಹಣದ ಬೆನ್ನಟ್ಟಿ ಹೋಗಲು ಸಂಸದೀಯ ಸಮಿತಿಯ ಸೂಚನೆ

ಶೇರು ಹಗರಣದಲ್ಲಿ ಕಳೆದು ಹೋಗಿರುವ ಐದು ಸಾವಿರ ಕೋಟಿ ರೂಪಾಯಿಗಳನ್ನು ಪತ್ತೆ ಹಚ್ಚುವಂತೆ ವಿಚಾರಣೆ ನಡೆಸುತ್ತಿರುವ ಸಂಸದೀಯ ಸಮಿತಿ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

ಶೇರು ಹಗರಣ

ಭಾರತೀಯ ರಿಸರ್ವ್ ಬ್ಯಾಂಕ್ ಸಿಬಿಐ. ಮತ್ತು ಆದಾಯ ತೆರಿಗೆ ಅಧಿಕಾರಿಗಳ ಒಂದು ತಂಡವನ್ನು ರಚಿಸಿ ಈ ಹಣದ ತನಿಖೆ ನಡೆಸಬೇಕೆಂದು ಅದು ಹೇಳಿದೆ.

ಇಂತಹ ತನಿಖೆ ನಡೆದರೆ ಅದು ಯಾವ ಯಾವ ಮಹನೀಯರ ಮನೆಯ ಬಾಗಿಲಿಗೆ ಹೋಗುತ್ತದೋ ಅಲ್ಲವೇ?

ಶೇರು ಮಾರುಕಟ್ಟೆ ಅಂಡರ್ ರೈಟರ್ಸ್ ಹಗರಣ

ಉದಾರೀಕರಣದ ದುಷ್ಪರಿಣಾಮಗಳೆಲ ಘನೀಭವಿಸಿದ್ದಂತೆ ಸಾವಿರಾರು ಕೋಟಿ ರೂಪಾಯಿಯ ಹಗರಣ ಆಯಿತು. ಅದರ ವಿಚಾರಣೆ ನಡೆದೇ ಇದೆ.

ಆದರೆ ಈ ಹಗರಣ ಸ್ವಲ್ಪ ಬೇರೆ ರೀತಿಯದು. ಶೇರು ಮಾರುಕಟ್ಟೆ ಉದಾರೀಕೃತಗೊಂಡು ಶೇರು ನೀಡುವಿಕೆ ಉದಾರಗೊಂಡ ಮೇಲೆ ಸಣ್ಣ ಪುಟ್ಟ ಕಂಪೆನಿಗಳೆಲ್ಲ ಸಾರ್ವಜನಿಕರಿಂದ ಶೇರುಗಳ ಮೂಲಕ ಹಣ ಎತ್ತತೊಡಗಿದವು. ಹಲವು ಕಂಪೆನಿಗಳು ತಮ್ಮ ಶೇರುಗಳ ಬೆಲೆಯನ್ನು ಏರಿಸಿ ಸಾರ್ವಜನಿಕ ಹಣ ತೊಡಗಿದವು.

ಕಂಪೆನಿಗಳು ಈ ಶೇರು ಮಾರಾಟ ಮಾಡಲು ಅಂಡರ್ ರೈಟರ್ಸ್‌ಗಳನ್ನು ನೇಮಿಸಿಕೊಳ್ಳುತ್ತವೆ. ಈವು ಈ ಕಂಪನಿಗಳ ಶಕ್ತಿ ದೌರ್ಬಲ್ಯಗಳ ನಿಜರೂಪ ತಿಳಿಸಿ ಈ ಶೇರುಗಳನ್ನು ಮಾರಾಟ ಮಾಡಬೇಕು. ಮಾರಾಟವಾಗದೇ ಉಳಿದ ಶೇರುಗಳನ್ನು ಅಂಡರ್‌ರೈಟರ್ಸ್ ಕೊಳ್ಳಬೇಕು. ಹೀಗೆ ಶೇರು ಮಾರಾಟ ಮಾಡಿದಕ್ಕೆ ಇವರಿಗೆ ದೊಡ್ಡ ಮೊತ್ತದ ಕಮಿಷನ್ ದೊರೆಯುತ್ತದೆ. ಮಾರಾಟ ಮಾಡದೇ ಇದ್ದರೆ ಹಾನಿಯಾಗುತ್ತದೆ. ಇರಲಿ.

ಈಗ ಆಗಿರುವುದು ಇಂತಹ ಅಂಡರ್‌ರೈಟರ್ಸ್‌ಗಳಿಂದ 524 ಕೋಟಿ ರೂಪಾಯಿಗಳು ಬಾಕಿ. ಕಾರಣ?

ಈ ಅಂಡರ್ ರೈಟರ್ಸ್ ಶೇರುಗಳ ಬೆಲೆಗಳನ್ನು ಸಿಕ್ಕಾಪಟ್ಟೆ ಏರಿಸಿ (ಅಂದರೆ ಪ್ರಿಮಿಯಮ್ ಸೇರಿಸಿ) ಮಾರಲು ಹವಣಿಸಿದರು. ಹಣವಿಲ್ಲದೆ ಜನ ಖರೀದಿಸಲಿಲ್ಲ. ಈ ಬಾಕಿ ಯಾರು ತೀರಿಸಬೇಕು?

ಇದು ಉದಾರೀಕರಣದ ಪ್ರಸಾದವಲ್ಲವೆ?

.........ಮೃತ್ಯು ಸನ್ನಾಹ ಬೆನ್ನ ಹಿಂದೆ ಬಲ್ಲೆಯೇನೋ

ಪೇಟೆಂಟ್ ಕಾನುನೂಗಳ ಬಗೆಗಿನ ರಾಷ್ಟ್ರೀಯ ಕಾರ್ಯಕಾರಿ ಜಂಟಿ ಸಂಚಾಲಕರಾದ ಶ್ರೀ ದಿನೇಶ್ ಅಡ್ರೊಲ್ ಸರ್ಕಾರ ಡಂಕೆಲ್ ಕರಡಿನ ಬಗ್ಗೆ ತಳೆಯುತ್ತಿರುವ ಧೋರಣೆ ಮತ್ತು ಅದರಿಂದಾಗಬಹುದಾದ ದುಷ್ಪರಿಣಾಗಳ ಬಗೆಗೆ ಬರೆದ ಲೇಖನದ ಸಂಗ್ರಹ ಇದು

ಡಂಕೆಲ್ ಪ್ರಸ್ತಾವಗಳ ಪರಿಣಾಮಗಳ ಬಗೆಗೆ ಸರ್ಕಾರ ಗಂಭೀರ ಗಮನ ನೀಡುತ್ತಿಲ್ಲ. ಈ ಪ್ರಸ್ತಾವಗಳಿಂದ ಬರಬಹುದಾದ ಆಪತ್ತುಗಳನ್ನು ಬದಿಗೊತ್ತಿ ಮಾತನಾಡಲಾಗುತ್ತದೆ. ಈ ವಿಷಯದ ಮೇಲಿನ ಚರ್ಚೆಗಳು ತಮ್ಮ ಹರಿತ ಕಳೆದುಕೊಳ್ಳುವಂತೆ ಮಾಡಲಾಗುತ್ತಿದೆ.

ಬೌದ್ಧಿಕ ಆಸ್ತಿ ಹಕ್ಕುಗಳ ಬಗೆಗಿನ ಚರ್ಚೆಗಳು ಸಂಕುಚಿತವಾಗುತ್ತಿವೆ. ಇವುಗಳಲ್ಲಿ ಔಷಧಿಗಳ ಬಗೆಗಿನದು ಬಹಳ ಮುಖ್ಯವಾದದ್ದು. ಜೀವ ಉಳಿಸುವ ಅಥವಾ ಅಳಿಸುವ ಶಕ್ತಿಯುಳ್ಳ ಈ ಔಷಧಿಗಳ ವಿಷಯ ಬಂದಾಗ ಗಂಭೀರವಾಗಿ ವಿಚಾರ ಮಾಡುವುದು ಅವಶ್ಯಕ.

ಈಗ ಪ್ರಸ್ತಾಪಗಳ ಪರವಾಗಿರುವಂತೆ ಕಾಣುವ ಸರ್ಕಾರ ಹೇಳುತ್ತದೆ. "ಭಾರತದ ಜನರು ಬಳಸುವ ಔಷಧಿಗಳಲ್ಲಿ ಬಹು ಸಣ್ಣ ಪ್ರಮಾಣದವುಗಳ ಬೆಲೆ ಹೆಚ್ಚುತ್ತವೆ. ಬಹುತೇಕ ಔಷಧಿಗಳು ಪೇಟೆಂಟ್‌ನ ಹೊರಗಿವೆ ಆದ್ದರಿಂದ ಈ ಪ್ರಸ್ತಾಪಗಳನ್ನು ಒಪ್ಪಿಕೊಳ್ಳುವುದರಿಂದ ನಮಗೆ ತೊಂದರೆಯಿಲ್ಲ!" ಎಂದು.

ಆದರೆ ಜಾಗತಿಕವಾಗಿ ಔಷಧಿಗಳಿಗೆ ಎರಡು ವಿಶೇಷ ಗುಣಗಳಿವೆ 1. ಹೊಸ ಔಷಧಿಗಳಿಗೆ ಪ್ರಾಮುಖ್ಯತೆ ಬಹಳವಿದ್ದು ಅವುಗಳು ಪ್ರಭಾವಶಾಲಿಯಾಗಿರುತ್ತವೆ.

2. ಉತ್ಪನ್ನ ಪೇಟೆಂಟ್‌ನ ಅವಧಿ ಮುಗಿದರೆ ಅದು ಔಷಧಿಯ ಬೆಲೆಯನ್ನು ಕನಿಷ್ಠ ಪ್ರಮಾಣದಲ್ಲಿ ಮಾತ್ರ ಇಳಿಸುತ್ತದೆ.

ಒಂದು ಅಧ್ಯಯನದ ಪ್ರಕಾರ ಇಂದು ಭಾರತದಲ್ಲಿ ಲಭ್ಯವಿರುವ ಔಷಧಿಗಳ ಶೇ. 44 ರಷ್ಟು ಅಮೇರಿಕದಲ್ಲಿ ಪೇಟೆಂಟ್ ಆಗಿವೆ. ಔಷಧಿಗಳಲ್ಲಿ ಬೇರೆ ಬೇರೆ ವರ್ಗಗಳಿರುತ್ತವೆ. ಭಾರತದಲ್ಲಿ ಇಂದು ಮಾರಾಟವಾಗುವ ಅಲ್ಸರ್ ನಿರೋಧಕ ಔಷಧಿಗಳ ಶೇ. 99 ರಷ್ಟು, ಬೇಕ್ಟೀರಿಯಾ ನಿರೋಧಕ ಔಷಧಿಗಳ ಶೇ. 98 ರಷ್ಟು ಹೀಗೆ ಅಮೇರಿಕದಲ್ಲಿ ಇವು ಪೇಟೆಂಟ್ ಆಗಿವೆ.

ಸರ್ಕಾರ ಇನ್ನೊಂದು ವಾದ ಮುಂದಿಡುತ್ತದೆ. ಒಂದು ಪೇಟೆಂಟ್ ಕೆಲವು ವರ್ಷಗಳವರೆಗೆ ಮಾತ್ರವಿರುತ್ತದೆ. ಆದ್ದರಿಂದ ಈ ಅವಧಿ ಮುಗಿದ ಕೂಡಲೇ ಔಷಧಿಯ ಬೆಲೆ ಇಳಿಯುತ್ತದೆ ಎಂದು. ಆದರೆ ವಾಸ್ತವದಲ್ಲಿ ಈ ಪೇಟೆಂಟ್ ಅವಧಿ ಮುಗಿದ ಮೇಲೂ ಅಲ್ಪಸ್ವಲ್ಪ ವ್ಯತ್ಯಾಸ ಮಾಡಿದ ಈ ಔಷಧಿಯನ್ನೇ ಮತ್ತೆ ಪೇಟೆಂಟ್ ಮಾಡಬಹುದು. ಹಾಗೆ ಮಾಡಲಾಗುತ್ತಿದೆ ಕೂಡಾ.

ಉತ್ಪನ್ನ ಪೇಟೆಂಟ್‌ಗಳು ಬಂದರೆ ಅವುಗಳ ಬೆಲೆ ಏನಾಗುತ್ತದೆ ಎಂಬುದಕ್ಕೆ ಕೆಳಗಿನ ಉದಾಹರಣೆಗಳನ್ನು ನೋಡಿ. ಅರ್ಜೆಂಟೈನಾ ಮತ್ತು ಚಿಲಿ ದೇಶಗಳಲ್ಲಿ ಇದು ಬಂದಂದಿನಿಂದ ಬೆಲೆಗಳು ಶೇ. 300ರಷ್ಟು ಏರಿದವು.


ನಮ್ಮ ದೇಶದಲ್ಲಿನ 1970 ರ ಪೇಟೆಂಟ್ ಕಾಯಿದೆ ವಿಧಾನ ಪೇಟೆಂಟ್ ಮಾತ್ರ ನೀಡುತ್ತದೆ. ಆದ್ದರಿಂದ ವಿದೇಶಗಳಲ್ಲಿ ಒಂದು ಔಷಧಿ ಬಂದರೆ ಅದನ್ನು ನಾಲ್ಕೈದು ವರ್ಷಗಳಲ್ಲಿ ಬೇರೆ ವಿಧಾನದಿಂದ ಉತ್ಪಾದಿಸಿ ಮಾರಲು ನಮ್ಮ ಕಂಪೆನಿಗಳು ಶಕ್ತವಾಗಿವೆ. ಉತ್ಪನ್ನ ಪೇಟೆಂಟ್ ಬಂದರೆ ಇದು ಸಾಧ್ಯವಾಗುವುದಿಲ್ಲ.

ಸರ್ಕಾರ ವಿದೇಶೀ ಕಂಪೆನಿಗಳಿಗೆ ಭಾರತದಲ್ಲೇ ಉತ್ಪನ್ನ ಮಾಡುವಂತೆ ಹೇಳಿ ದೇಶದ ಹಿತಾಸಕ್ತಿ ಕಾಯಬಹುದು ಎನ್ನುತ್ತದೆ. ಆದರೆ ವಾಸ್ತವದಲ್ಲಿ ಇದು ಸಾಧ್ಯವಾಗುವುದಿಲ್ಲ. ಯಾಕೆಂದರೆ ಪಾರ್ಮುಲೇಷನ್ ಹಂತದಿಂದ ಮಾತ್ರ ಅವರು ಭಾರತದಲ್ಲಿ ಉತ್ಪಾದಿಸ ತೊಡಗುತ್ತಾರೆ. ಮೂಲ ಗುಟ್ಟುಗಳನ್ನು ಬಿಟ್ಟುಕೊಡುವುದಿಲ್ಲ.

ಕೃಷಿ ಬೆಲೆಗಳ ತಳಿ ಉತ್ಪಾದನೆಗಳಲ್ಲೂ ಹೀಗೇ ಆಗುತ್ತವೆ. ತಳಿ ಉತ್ಪಾದನೆ ಹಕ್ಕುಗಳು ಒಬ್ಬರ ಪೇಟೆಂಟ್ ಆದರೆ ಅದು ಅವರಿಗೆ ಏಕಸ್ವಾಮ್ಯ ನೀಡುತ್ತದೆ. ದೊಡ್ಡ ಪ್ರಮಾಣದಲ್ಲಿ ಬಿತ್ತನೆ ಬೀಜ ಉತ್ಪಾದಿಸಲು ಈ ಪೇಟೆಂಟ್‌ದಾರನ ಅನುಮತಿ ಪಡೆಯಬೇಕಾಗುತ್ತದೆ. ಹೀಗಾದಾಗ ಬೀಜದ ಬೆಲೆಗಳು ವಿಪರೀತ ಏರುತ್ತವೆ. ಅಮೇರಿಕದಲ್ಲೇ ಇಂತಹ ಪೇಟೆಂಟ್ ವ್ಯವಸ್ಥೆ ಬಂದಾಗ ಬೀಜಗಳ ಬೆಲೆ ದ್ವಿಗುಣವಾಯಿತು.

ಈ ಎಲ್ಲ ವಿಷಯಗಳ ಬಗೆಗೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡದೆ ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಾಲಯ ಡಂಕೆಲ್ ಮಾತುಕತೆಯಲ್ಲಿ ಭಾರತದ ಸ್ಥಾನವನ್ನೂ ದುರ್ಬಲಗೊಳಿಸುತ್ತದೆ.

ಜೀವರಕ್ಷಕ ಔಷಧಿಗಳ ಬೆಲೆಗಳೇ ಗಗನಕ್ಕೇರಿದರೆ ರೋಗಿಗಳಿಗೆ ಸಾವೇ ಗತಿಯಾಗುತ್ತದೆ.



ಸಾಕು ಮಾಡಿ ನಿಮ್ಮ ಕಚ್ಚಾಟ

ಕೇರಳ ಕಾಂಗ್ರೆಗೆ ಇ.ಎಂ.ಎಸ್. ಕರೆ

ಸಾಕು ನಿಮ್ಮ ಕಚ್ಚಾಟ; ಕೋಮುವಾದವನ್ನು ಅದರಲ್ಲೂ ವಿಶೇಷವಾಗಿ ಬಹುಸಂಖ್ಯಾತ ಕೋಮುವಾದವನ್ನು ಎದುರಿಸಿ ಹೋರಾಡಲಿಕ್ಕಾದರೂ ಒಗ್ಗಟ್ಟಿನಿಂದಿರಿ.

ಇದು ದೇಶದ ಆಳುವ ಕಾಂಗ್ರೆಸ್ (ಐ) ಪಕ್ಷಕ್ಕೆ ಮಾಡಿಕೊಂಡಿರುವ ಕಳಕಳಿಯ ಮನವಿಯಾಗಿದೆ. ಮನವಿ ಮಾಡಿರುವವರು ಹಿರಿಯ ಮಾರ್ಕ್ಸ್‌ವಾದಿ ಚಿಂತಕ ಇ.ಎಂ.ಎಸ್. ನಂಬೂದರಿಪ್ಪಾಡ್. .ತಿರುವನಂತಪುರ ಜಿಲ್ಲಾ ಕಾಂಗ್ರೆಸ್ (ಐ) ಸಮಿತಿ ನೆಹರೂ ಪುಣ್ಯತಿಥಿ ಅಂಗವಾಗಿ ಮೇ 27 ರಂದು ಏರ್ಪಡಿಸಿದ್ದ 'ಜಾತ್ಯತೀತತೆ ಸವಾಲುಗಳು' ವಿಚಾರಗೋಷ್ಠಿಯಲ್ಲಿ ಮಾತನಾಡುತ್ತಿದ್ದರು.

ಜನರ ಮಧ್ಯೆ ಹೋಗಿ ಕೋಮುವಾದದ ವಿರುದ್ಧ ಪ್ರಚಾರ ಮಾಡಿ ಹೋರಾಡುವುದು ಕಾಂಗ್ರೆಸಿಗರು ತಮ್ಮ ದಿವಂಗತ ನಾಯಕನಿಗೆ ಸಲ್ಲಿಸುವ ಶ್ರದ್ಧಾಂಜಲಿ ಆಗುತ್ತದೆ. ಈ ಕಾರ್ಯದಲ್ಲಿ ಕಾಂಗ್ರೆಸಿಗರು ಇದುವರೆಗೆ ವಿಫಲರಾಗಿದ್ದಾರೆ ಎಂದು ಸಿಪಿಐ(ಎಂ)ನ ಮಾಜಿ ಪ್ರಧಾನ ಕಾರ್ಯದರ್ಶಿ ವಿಶ್ಲೇಷಿಸಿದರು.

ಕೋಮುವಾದ ವಿರೋಧಿ ಆಂದೋಲನದಲ್ಲಿ ಸಿಪಿಐ(ಎಂ) ಸಹಕಾರ ನೀಡುತ್ತದೆ ಎಂದು ಅವರು ಘೋಷಿಸಿದರು. ಜಂಟಿ ಹೋರಾಟಕ್ಕೆ ಕಾಂಗ್ರೆ ವಿರೋಧಿಯಾಗಿದೆ ಎಂದು ಟೀಕಿಸಿದರು.

ಕೋಮುವಾದದ ವಿರುದ್ಧ ಜನರನ್ನು ಅಣಿನೆರೆಸಲು ನಿಮ್ಮ ಪಕ್ಷ ಸ್ವತಂತ್ರವಾಗಿ ಇದುವರೆಗೆ ಏನನ್ನೂ ಮಾಡಿಲ್ಲ. ಕೋಮುವಾದ ವಿರುದ್ಧ ನಿಮ್ಮ ರಾಜ್ಯ ಸಮಾವೇಶ ಕೂಡ ವಿವಿಧ ಬಣಗಳ ಕಚ್ಚಾಟದಲ್ಲಿ ಅಂತ್ಯಗೊಂಡಿತು ಎಂದು ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆ ಕಾರ್ಯಕರ್ತರು ಮತ್ತು ನಾಯಕರಿಗೆ ಇ. ಎಂ.ಎಸ್. ನೇರವಾಗಿ ಹೇಳಿದರು.

ಕೇರಳದವರಿಗೆ ವಿದ್ಯುತ್ ಮಂಡಳಿ 'ಶಾಕ್'

ಕೇರಳದ ಕಾಂಗ್ರೆಸ್(ಐ) ನೇತೃತ್ವದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ (ಯುಡಿಎಫ್) ಸರಕಾರ ಜೂನ್ ಒಂದರಿಂದ ಜಾರಿಗೆ ಬರುವಂತೆ ವಿದ್ಯುಚ್ಛಕ್ತಿ ದರಗಳನ್ನು ಏರಿಸಿದೆ. ಯೂನಿಟ್ ಒಂದರ ಮೂರು ಪೈಸೆಯ ಸಾಮಾನ್ಯ ಏರಿಕೆಯನ್ನು ಮಾಡಲಾಗಿದೆ. ಪ್ರಸಕ್ತ ಯು.ಡಿ.ಎಫ್. ಸರಕಾರ ವಿದ್ಯುಚ್ಛಕ್ತಿ ದರಗಳನ್ನು ಎರಡನೇ ಸಲ ಹೆಚ್ಚಿಸುತ್ತಿರುವುದಾಗಿದೆ.

ಐ.ಎಂ.ಎಫ್.-ವಿಶ್ವಬ್ಯಾಂಕ್ ಷರತ್ತು

ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ಮತ್ತು ವಿಶ್ವಬ್ಯಾಂಕಿನ ಷರತ್ತುಗಳಿಗೆ ಮಣಿದು ಎಲ್ಲಾ ರಾಜ್ಯಗಳ ವಿದ್ಯುಚ್ಛಕ್ತಿ ಮಂಡಳಿಗಳು ವಿದ್ಯುತ್ ದರವನ್ನು ಏರಿಸುತ್ತಿವೆ. ಕೇರಳದಲ್ಲಿಯೂ ಈಗ ಐ.ಎಂ.ಎಫ್. ವಿಶ್ವಬ್ಯಾಂಕಿನ ಕರಾಳ ಷರತ್ತಿನ ಅನುಭವ ಆಗುತ್ತಿದೆ.

ಕಣ್ಣೂರಿನಲ್ಲಿ ಪೊಲೀಸ್ ರಾಜ್ಯ

ಕಣ್ಣೂರಿನಲ್ಲಿ ಪೊಲೀಸರು ನಡೆಸುತ್ತಿರುವ ದೌರ್ಜನ್ಯವನ್ನು ನಿಲ್ಲಿಸುವಂತೆ ಕೇರಳದ ಎಡ-ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್.) ರಾಜ್ಯ ಸರಕಾರವನ್ನು ಒತ್ತಾಯಪಡಿಸಿದೆ.

ಕಾಂಗ್ರೆಸ್(ಐ) ಕಾರ್ಯಕರ್ತರ ದುವರ್ತನೆ ಹಾಗೂ ಸಿಪಿಐ(ಎಂ) ಮೇಲೆ ನಡೆಯುತ್ತಿರುವ ಆಕ್ರಮಣಗಳನ್ನು ಮೌನ ಪ್ರೇಕ್ಷಕರಾಗಿ ನೋಡುತ್ತಿದ್ದ ಪೊಲೀಸರು ಈಗ ನೇರವಾಗಿ ಸಿಪಿಐ(ಎಂ) ಕಾರ್ಯಕರ್ತರು ಮತ್ತು ಅವರ ಕುಟುಂಬಗಳಿಗೆ ಹಿಂಸೆ ನೀಡಲು ಆರಂಭಿಸಿದ್ದಾರೆ.

ಪೊಲೀಸರು ಕಾಂಗ್ರೆ ದುಷ್ಕೃತ್ಯಗಳ ಜತೆ ಶಾಮೀಲಾಗಿರುವ ಬಗ್ಗೆ 'ಐಕ್ಯರಂಗ' ಕಳೆದ ಸಂಚಿಕೆಯಲ್ಲಿ ವಿವರಗಳು ಪ್ರಕಟವಾಗಿದ್ದವು.

ಗೃಹಖಾತೆಯನ್ನು ನೋಡಿಕೊಳ್ಳುತ್ತಿರುವ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರ ಗಮನಕ್ಕೆ ಬಾರದೆ ಪೊಲೀಸರ ಈ ದುಷ್ಕೃತ್ಯಗಳು ನಡೆಯಲು ಸಾಧ್ಯವಿಲ್ಲ ಎಂದು ಎಡರಂಗ ಸಮಿತಿ ಹೇಳಿದೆ.

ಸಿಪಿಐ(ಎಂ) ಮೇಲೆ ನಡೆದ ಆಕ್ರಮಣಗಳ ಸಂಬಂಧದಲ್ಲಿ ಪೊಲೀಸರು ಕಾಂಗ್ರೆಸ್ (ಐ) ವಿರುದ್ಧ ಯಾವ ಕೇಸನ್ನು ದಾಖಲಿಸಿಲ್ಲ. ಇದೀಗ ಪೊಲೀಸರು ಕಾನೂನುಗಳನ್ನು ಉಲ್ಲಂಘಿಸಿ, ಅನೇಕ ಬಾರಿ ಅಪವೇಳೆಯಲ್ಲಿ ಕೂಡಾದ, ಸಿಪಿಐ(ಎಂ) ಕಾರ್ಯಕರ್ತರ ಮನೆಗಳ ಮೇಲೆ ದಾಳಿ ಮಾಡುತ್ತಿದ್ದಾರೆ.

ದಾಳಿಗಳ ವೇಳೆ ಪಕ್ಷದ ಕಾರ್ಯಕರ್ತರ ಕುಟುಂಬಗಳ ಸದಸ್ಯರಿಗೆ ಕೂಡ ಕಿರುಕುಳ ಹಿಂಸೆ ಕೊಡುತ್ತಿದ್ದಾರೆ. ಕಣ್ಣೂರು ಪಟ್ಟಣ ಮತ್ತು ಹತ್ತಿರದ ಗ್ರಾಮಗಳಲ್ಲಿ 2,000 ಕ್ಕೂ ಹೆಚ್ಚು ದಾಳಿಗಳನ್ನು ಮಾಡಲಾಗಿದೆ. ಸಂಜೆ ಆರು ಗಂಟೆ ಮೇಲೆ ರಸ್ತೆಯಲ್ಲಿ ಓಡಾಡುವ ಪ್ರತಿಯೊಬ್ಬರನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ ಅವರು ಕಾನ್ಪುರ ಪಟ್ಟಣದಲ್ಲಿ ಪೊಲೀಸ್ ರಾಜ್ಯವನ್ನೇ ಸ್ಥಾಪಿಸಿದ್ದಾರೆ.

ತ್ರಿಪುರಾದಲ್ಲಿ ದುಷ್ಕೃತ್ಯಗಳು

ತ್ರಿಪುರಾದ ಸದರ್ ಉಪವಿಭಾಗದ ರಾಜ್ ಚಂದ್ರೈ ಎಂಬಲ್ಲಿ ಕೆಲವು ಸಶಸ್ತ್ರ ಬುಡಕಟ್ಟು ಉಗ್ರಗಾಮಿಗಳು ತ್ರಿಪುರಾ ರಾಜ್ಯ ರೈಫಲ್ಸ್ (ಟಿಎಸ್‌ಆರ್)ನ ಒಂದು ಕಾರಿನ ಚಾಲಕನನ್ನು ಇತ್ತೀಚೆಗೆ ಕೊಂದು ಹಾಕಿದರು. ಅಲ್ಲದೆ ಮೂರು ಜನರನ್ನು ಗಾಯಗೊಳಿಸಿದರು. ಅನಂತರ ಇನ್ನೊಬ್ಬ ಗಾಯಾಳು ಮೃತಪಟ್ಟನು. ಭದ್ರತಾ ಪಡೆಯಿಂದ ಶಸ್ತ್ರಾಸ್ತ್ರಗಳನ್ನು ದೋಚುವುದು ಈ ದಾಳಿಯ ಮುಖ್ಯ ಉದ್ದೇಶವಾಗಿತ್ತು. ಒಂದು ಎಸ್.ಎಲ್.ಆರ್. ಮತ್ತು ಮೂರು ರೈಫಲ್‌ಗಳನ್ನು ದೋಚಲಾಗಿದೆ.

ಅವಿವೇಕಿ ಜವಾನರು

ಈ ದಾಳಿ ಹಾಗೂ ಹತ್ಯೆಯ ನಂತರ ಅದಕ್ಕಿಂತಲೂ ಆಘಾತಕರವಾದ ಘಟನಾವಳಿಗಳು ನಡೆದವು. ಟಿ.ಎಸ್.ಆರ್.ನ ಕೆಲವು ಮಂದಿ ಜವಾನರು ದಾಂಧಲೆ ನಡೆಸಿ ಬುಡಕಟ್ಟು ಗ್ರಾಮಸ್ಥರ ಹಲವಾರು ಮನೆಗಳನ್ನು ಸುಟ್ಟುಹಾಕಿದರು. ಮನೆಯಲ್ಲಿದ್ದ ಎಲ್ಲವೂ ಸುಟ್ಟುಹೋಗಿ ಜನರು ನಿರ್ಗತಿಕರಾಗಿದ್ದಾರೆ. ಇದಾದ ಮೇಲೆ ತ್ರಿಪುರಾ ಉಪಜಾತಿ ಜುಬಾ ಸಮಿತಿಯ (ಟಿ.ಯು.ಜೆ.ಎಸ್.) ದುಷ್ಕರ್ಮಿಗಳು ಹತ್ತಿರದ ಹಳ್ಳಿಯಲ್ಲಿ ಬುಡಕಟ್ಟೇತರ ಜನರಿಗೆ ಸೇರಿದ ಮೂರು ಮನೆಗಳಿಗೆ ಕೊಳ್ಳಿಯಿಟ್ಟರು.

ಈ ಎಲ್ಲಾ ಹೇಯ ಕೃತ್ಯಗಳನ್ನು ಸ್ಥಾಪಿತ ಹಿತಾಸಕ್ತಿಗಳು ಎಡರಂಗ ಸರಕಾರದ ವಿರುದ್ಧ ಚಳವಳಿ ನಡೆಸಲು ಬಳಸಿಕೊಂಡಿವೆ. ಆದರೆ ಅವುಗಳ ಪ್ರಯತ್ನ ವಿಫಲಗೊಂಡವು. ಯಾಕೆಂದರೆ ತೊಂದರೆಗೊಳಗಾದವರಿಗೆ ನೆರವು ನೀಡಲು ನೆರೆಹೊರೆ ಹಳ್ಳಿಗಳ ನೂರಾರು ಜನರು ಧಾವಿಸಿದರು.

ಟಿ.ಎಸ್.ಆರ್. ಜವಾನರು ಮತ್ತು ಮುಗ್ಧ ಜನರ ಹತ್ಯೆ ನಡೆದಿರುವುದನ್ನು ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಮಂಡಳಿ ಕಟುವಾಗಿ ಖಂಡಿಸಿದೆ. ಬುಡಕಟ್ಟು ಹಾಗೂ ಬುಡಕಟ್ಟೇತರ ಜನರ ಮನೆಗಳನ್ನು ನಾಶಮಾಡಿರುವುದನ್ನು ಅದು ಖಂಡಿಸಿದೆ. ಜನಾಂಗೀಯ ಘರ್ಷಣೆಯನ್ನು ಸೃಷ್ಟಿಸಲು ಪ್ರಯತ್ನ ನಡೆಸುವ ವೈರಿ ಶಕ್ತಿಗಳ ಬಗ್ಗೆ ಎಚ್ಚರದಿಂದಿರುವಂತೆ ಅದು ಜನರಿಗೆ ಕರೆ ನೀಡಿದೆ.

ಹತಾಶರ ಪಿತೂರಿ

ಎಡರಂಗ ಅಧಿಕಾರಕ್ಕೆ ಬಂದಂದಿನಿಂದ ಜನರ ತೀರ್ಪನ್ನು ಒಪ್ಪಿಕೊಳ್ಳಲು ಪ್ರತಿಗಾಮಿ ಶಕ್ತಿಗಳು ವಿಶೇಷವಾಗಿ ಕಾಂಗ್ರೆ ಟಿಯುಜೆಎಸ್.ನ ಒಂದು ವಿಭಾಗ ಸಿದ್ಧವಿಲ್ಲ. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಹಾಳು ಮಾಡಲಿಕ್ಕಾಗಿ ಅವುಗಳು ಕಳೆದ ಕೆಲ ದಿನಗಳಿಂದ ವಿವಿಧ ಹೀನ ಕೃತ್ಯಗಳನ್ನು ನಡೆಸತೊಡಗಿವೆ.

-- ವಿಶ್ವ

ಲಲ್ಲೂ ಕೃತಜ್ಞತೆ

ಬಿಹಾರ ರಾಜ್ಯ ವಿಧಾನ ಸಭೆ ಮತ್ತು ಪಾಟ್ನಾ ಲೋಕಸಭಾ ಸ್ಥಾನಕ್ಕೆ ನಡೆದ ಉಪ ಚುನಾವಣೆಗಳಲ್ಲಿ ಜನತಾದಳಕ್ಕೆ ಬೆಂಬಲ ನೀಡಿದ್ದಕ್ಕಾಗಿ ಬಿಹಾರ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್ ಸಿಪಿಐ(ಎಂ)ಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಅವರು ಈ ಸಂಬಂಧ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜೀತ್‌ರಿಗೆ ಒಂದು ಪತ್ರ ಬರೆದಿದ್ದಾರೆ.

ತೆಂಗಿನ ನಾರು ಕಾರ್ಮಿಕರ ಜಂಟಿ ಹೋರಾಟ

ಕೇರಳದ ಸುಮಾರು 10,000 ಕ್ಕೂ ಹೆಚ್ಚು ತೆಂಗಿನ ನಾರು ಕಾರ್ಮಿಕರಿಗೆ ಇತ್ತೀಚೆಗೆ ರಾಜ್ಯ ಸರಕಾರದ ಸಚಿವಾಲಯದ ಎದರು ಧರಣಿ ಸತ್ಯಾಗ್ರಹ ನಡೆಸಿದರು. ಅದಕ್ಕೆ ಮುನ್ನ ಅವರು ನಗರದಲ್ಲಿ ಮೆರವಣಿಗೆ ನಡೆಸಿದರು.

ಸಿಐಟಿಯು,ಎಐಟಿಯುಸಿ, ಯುಟಿಯುಸಿ ಇತ್ಯಾದಿಗಳು ಅವರಿಗೆ ಜಂಟಿ ನೇತೃತ್ವ ನೀಡಿದ್ದವು. ರಾಜ್ಯದ ಪ್ರತಿಪಕ್ಷ ನಾಯಕ ವಿ.ಎಸ್. ಅಚ್ಯುತಾನಂದನ್ ಧರಣಿ ಉದ್ಘಾಟಿಸಿದರು.

ಮುಂಬರುವ ಹೋರಾಟಗಳಿಂದ ದೇಶದ ಭವಿಷ್ಯ ನಿರ್ಧಾರ

-- ಡಾ ಎಂ.ಕೆ. ಫಂದೆ

ಸೆಪ್ಟೆಂಬರ್ 9ರ ಕರೆ ಕೇವಲ ಕಾರ್ಮಿಕ ವರ್ಗಕ್ಕಲ್ಲ. ಇತರ ಹಲವು ಜನ ವಿಭಾಗಗಳಿಗೂ ಕೂಡಾ. ಕಾರ್ಮಿಕರು, ರೈತರು, ಕೃಷಿಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಭಾಗವಹಿಸುವ ಒಂದು ವಿಶಾಲ ವೇದಿಕೆ ಮೂಡಿಬರುತ್ತಿದೆ. ಹೊಸ ಪ್ರಜಾಪ್ರಭುತ್ವವಾದಿ ವಿಭಾಗಗಳು, ಆಂದೋಲನ ಸೇರುತ್ತಿವೆ. ಕೆಲವು ಸಂಪಾದಕರೂ ಆಂದೋಲನ ಸೇರಬಯಸುತ್ತಿದ್ದಾರೆ. ದುಡಿಯುವ ಜನ ದೊಡ್ಡ-ದೊಡ್ಡ ಹೋರಾಟಗಳನ್ನು ನಡೆಸಬೇಕಾಗಿದೆ. ಈ ಹೋರಾಟಗಳ ವಿಜಯ ನಮ್ಮ ದೇಶದ ಭವಿಷ್ಯವನ್ನು ನಿರ್ಧರಿಸಲಿದೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಫಂದೆ ಹೇಳಿದ್ದಾರೆ. ಅವರು ಬೆಂಗಳೂರಿನಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರು ಹಾಗೂ ಇತರ ಸಿಐಟಿಯು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಬಹುರಾಷ್ಟ್ರೀಯ ಕಂಪೆನಿಗಳು ಭಾರತಕ್ಕೆ ಬರಲು ಹಿಂಜರಿಯುತ್ತಿವೆಯೇಕೆ ಗೊತ್ತೆ? ಕೇಂದ್ರ ಹಣಕಾಸು ಮಂತ್ರಿಗಳು ಸಿಐಟಿಯು ಮುಖಂಡರಿಗೆ ಒಂದು ವಿಷಯ ಹೇಳಿದರು. ಬಹುರಾಷ್ಟ್ರೀಯ ಕಂಪೆನಿಗಳಿಗೆ ನಮ್ಮ ಚಳುವಳಿಯ ಬಗ್ಗೆಯೂ ಗೊತ್ತಿದೆಯಂತೆ. ನಮ್ಮ ಹಕ್ಕುಗಳನ್ನು ಮೊಟಕುಮಾಡಲು ಅವರು ಸರಕಾರದ ಮೇಲೆ ಒತ್ತಡ ತರುತ್ತಿದ್ದಾರೆ ಎಂದು ಕಾಂ. ಫಂದೆ ಹೇಳಿದರು. ಪ್ರಧಾನಮಂತ್ರಿ ನರಸಿಂಹರಾಯರು ಇಂಟಕ್ ಸಭೆಯಲ್ಲಿ ಭಾಷಣ ಮಾಡುತ್ತಾ ಎಕ್ಸಿಟ್ ಪಾಲಿಸಿ ಎಂಬುದೇ ಇಲ್ಲ ಎಂದರು. ಆದರೆ ಇಂಟಕ್ ಈ 'ಇಲ್ಲದ' ಎಕ್ಸಿಟ್ ಪಾಲಿಸಿಯನ್ನು ವಿರೋಧಿಸುತ್ತಿದೆ ಏಕೆ? ಇಂಟಕ್ ಕೂಡಾ ಪ್ರಧಾನಿಗಳ ಮಾತನ್ನು ನಂಬುವುದಿಲ್ಲ ಎಂದು ವ್ಯಂಗ್ಯವಾಗಿ ನುಡಿದರು. ಆದ್ದರಿಂದ ಈ ನೀತಿಗಳ ವಿರುದ್ಧ ನಮ್ಮ ಪ್ರಚಾರ-ಪ್ರಕ್ಷೋಭೆಗಳನ್ನು ತೀವ್ರಗೊಳಿಸಬೇಕು, ನಮ್ಮ ಆಂದೋಲನವನ್ನು ಬಲಗೊಳಿಸಬೇಕು ಎಂದರು.

ಆಗಸ್ಟ್ 19 ರಂದು ಲಕ್ಷಾಂತರ ರೈತರು, ಕಾರ್ಮಿಕರು ಬಂಧನಕ್ಕೊಳಗಾಗುತ್ತಾರೆ. ಸೆಪ್ಟೆಂಬರ್ 9 ರಂದು ಮುಷ್ಕರದ ಜೊತೆಗೆ ರೈಲ್ ರೋಕೋ, ರಾಸ್ತಾ ರೋಕೋ ಕೂಡಾ ನಡೆಯುತ್ತದೆ. ಸೆಪ್ಟೆಂಬರ್ 9 ರಜಾದಿನವೆಂದು ಪರಿಗಣಿಸದೆ ಅದನ್ನು ಕಾರ್ಯಾಚರಣೆಯ ದಿನವನ್ನಾಗಿ ಮಾಡಬೇಕು ಎಂದು ಕರೆ ನೀಡಿದರು. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಭುವನೇಶ್ವರದಲ್ಲಿ ನಡೆದ ಸಿಐಟಿಯು ಕಾರ್ಯಕಾರಿ ಸಮಿತಿಯ ಸಭೆಯ ನಿರ್ಣಯಗಳನ್ನು ಪ್ರಸ್ತಾಪಿಸಿದರು.

ಎಲ್ಲಾ ಸಾಮೂಹಿಕ ಸಂಘಟನೆಗಳ ರಾಜ್ಯಮಟ್ಟದ ಸಮಾವೇಶಗಳನ್ನು ಜಾಥಾಗಳನ್ನು ನಡೆಸಲು ನಿರ್ಧರಿಸಿದ್ದೇವೆ. ಹೊಸ ಆರ್ಥಿಕ ನೀತಿ ಹಾಗೂ ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ವೇದಿಕೆಯಲ್ಲಿ ಸಿಐಟಿಯು ಸಕ್ರಿಯವಾಗಿದೆ ಇಡೀ ದೃಶ್ಯವೇ ಈ ಆಂದೋಲನದಿಂದ ಬದಲಾಗಬೇಕು ನಾವು ಹಳ್ಳಿಗಳನ್ನು ತಲುಪಬೇಕು ಎಂದರು.

ಸಿಐಟಿಯು ಎಲ್ಲಾ ಸಾಮೂಹಿಕ ಸಂಘಟನೆಗಳಿಗೆ ನೇತೃತ್ವ ನೀಡುವ ಜವಾಬ್ದಾರಿವಹಿಸಿಕೊಂಡಿದೆ. ಆದ್ದರಿಂದ ನಮ್ಮ ದೌರ್ಬಲ್ಯಗಳನ್ನು ನಿವಾರಿಸಿಕೊಂಡು ನಮ್ಮ ಸಂಘಟನಾ ಶಕ್ತಿಯನ್ನು ಹೆಚ್ಚಿಸಿಕೊಂಡು ಈ ಕಾರ್ಯಾಚರಣೆಗೆ ಸಿದ್ಧತೆ ನಡೆಸಬೇಕು ಎಂದು ಡಾ. ಫಂದೆ ಹೇಳಿದರು. ಸಿಐಟಿಯು ಕಾರ್ಮಿಕರಂಗದಲ್ಲಿ ನೇತಾರನಾಗಿ ಮೂಡಿಬಂದಿದೆ ಎನ್ನುತ್ತಾ ಇದಕ್ಕೆ ಒಂದು ಉದಾಹರಣೆ ನೀಡಿದರು. ಇತ್ತೀಚೆಗೆ ಭಾರತ ಸರಕಾರ ನಡೆಸಿದ ವಿಚಾರ ಸಂಕಿರಣಕ್ಕೆ ಸಿಐಟಿಯುಯನ್ನು ಮಾತ್ರ ಆಹ್ವಾನಿಸಲಾಯಿತು.

ಉಕ್ಕು ಉದ್ದಿಮೆಯ ಎಲ್ಲಾ ಸಂಘಗಳು ಖಾಸಗೀಕರಣದ ವಿರುದ್ಧ ಮುಷ್ಕರದಲ್ಲಿ ಭಾಗವಹಿಸಲು ನಿರ್ಧರಿಸಿವೆ. ಬಿ.ಎಂ.ಎಸ್. ಸಂಘಗಳು ಪರಸ್ಪರ ವಿರೋಧಿ ನಿಲುವು ತಳೆಯುತ್ತಿವೆ. ಸಾರ್ವಜನಿಕ ಅಭಿಪ್ರಾಯದ ಒತ್ತಡದಿಂದ ಬಿಎಂಎಸ್. ಕೂಡಾ ನಮ್ಮ ಹೋರಾಟದಲ್ಲಿ ಭಾಗವಹಿಸದೇಕಾಗಿ ಬಂದಿದೆ ಎಂದು ಈಗಿನ ಸನ್ನಿವೇಶದ ಕೆಲವು ಕುತೂಹಲಕಾರಿ ಅಂಶಗಳನ್ನು ಡಾ. ಫಂದೆ ವಿವರಿಸಿದರು. ಬಿಜೆಪಿ ಎಂ.ಪಿ. ವಿರೇನ್ ಶಹಾರ ಮುಕುಂದ್ ಐರನ್ ಅಂಡ್ ಸ್ಟೀಲ್ ಕಂಪೆನಿ ಸಾರ್ವಜನಿಕ ವಲಯದ ಇಸ್ಕೋ ಉಕ್ಕು ಕಂಪೆನಿಯನ್ನು ವಹಿಸಿಕೊಳ್ಳುವುದನ್ನು ಇತರ ಕಾರ್ಮಿಕ ಸಂಘಗಳೊಂದಿಗೆ ಉಕ್ಕು ಉದ್ದಿಮೆಯಲ್ಲಿರುವ ಬಿ.ಎಂ.ಎಸ್. ಸಂಘವೂ ವಿರೋಧಿಸುವುದರತ್ತ ಫಂದೆ ಗಮನ ಸೆಳೆದರು.

ಸಾರ್ವಜನಿಕ ವಲಯದಲ್ಲಿ ವೇತನ ಮಾತುಕತೆಗಳು

ಈ ಬಗ್ಗೆ ಮಾತನಾಡುತ್ತಾ ಡಾ. ಫಂದೆ ಸರಕಾರ ಹೇರಿದ ಶರತ್ತುಗಳಡಿ ಮಾತುಕತೆಗಳು ನಡೆಯುತ್ತಿವೆ ಎಂದರು. ಇದರಿಂದ ತೊಂದರೆಗಳುಂಟಾಗಿವೆ. ಇದು ನಾಲ್ಕನೇ ಮಾತುಕತೆ. ಹಿಂದಿನ ಮೂರು ಮಾತುಕತೆಗಳಲ್ಲೂ ಸರಕಾರದ ನೀತಿಗಳನ್ನು ಸೋಲಿಸಿದೆ ಆದರೆ ಹೋರಾಟವಿಲ್ಲದೆ ಏನನ್ನು ಸಾಧ್ಯವಿಲ್ಲ. ಕೇವಲ ಮೇಜಿನ ಆಚೆ-ಈಚೆ ಕೂತು ಮಾತುಕತೆಗಳಿಂದಷ್ಟೆ ನಮ್ಮ ಬೇಡಿಕೆಗಳು ಈಡೇರುವುದಿಲ್ಲ ಎಂದರು. ಮಾತುಗಳಲ್ಲಿನ ತೊಂದರೆಗಳ ಬಗ್ಗೆ ಮಾತನಾಡುತ್ತಾ ಆಡಳಿತ ಮಂಡಳಿ ವೇತನ ಹೆಚ್ಚಳಕ್ಕೂ ಉತ್ಪಾದನೆ ಹೆಚ್ಚಳಕ್ಕೂ ತಳಕು ಹಾಕುತ್ತದೆ ಇಂಟಕ್ ಕೂಡಾ ಇದನ್ನು ವಿರೋಧಿಸಿದರೂ ಬಿ.ಇ.ಎಲ್.ನಲ್ಲಿ ಎ. ಐ.ಟಿ.ಯು.ಸಿ. ಇದರ ಪರವಾಗಿದೆ. ನಾವು ಉತ್ಪಾದನೆಯ ಗುರಿಗಳನ್ನು ಸ್ವೀಕರಿಸುತ್ತೇವೆ. ಅನಗತ್ಯ ವೆಚ್ಚ ತಗ್ಗಿಸುವುದನ್ನು ಬೆಂಬಲಿಸುತ್ತೇವೆ. ಅದನ್ನು ಈಡೇರಿಸುತ್ತೇವೆ. ಆದರೆ ವೇತನವನ್ನು ಉತ್ಪಾದಕತೆಯೊಂದಿಗೆ ಜೋಡಿಸುವುದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಉತ್ಪಾದನೆಯ ಮೇಲೆ ಕಾರ್ಮಿಕ ವರ್ಗದ ಹತೋಟಿಯಿಲ್ಲ. ಅದನ್ನು ಕಾರ್ಮಿಕ ವರ್ಗದ ನಿಯಂತ್ರಿಸುವಂತಾದರೆ ಮಾತ್ರ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯ ಎಂದರು. ಸಿಪಿಎಸ್‌ಟಿಯು ಸಂಘಗಳು ಒಂದು ಸಮಾನ ನಿಲುವು ತಳೆಯಬೇಕು. ಜುಲೈ 16-17 ರಂದು ಸಿಪಿಎಸ್.ಟಿಯು ಸೇರಿ ಹೋರಾಟದ ಕಾರ್ಯಕ್ರಮವನ್ನು ರೂಪಿಸಲಿದೆ. ಸಾರ್ವಜನಿಕ ವಲಯದ ಮೇಲೆ ಹೊಸ ಆರ್ಥಿಕ ನೀತಿಯ ಪ್ರಭಾವದ ಬಗ್ಗೆ ಒಂದು ವಿಚಾರ ಸಂಕಿರಣ ನಡೆಯಲಿದ್ದು ಉಪ ಜನರಲ್ ಮ್ಯಾನೇಜರ್ ಹುದ್ದೆಯವರೆಗಿನ ವ್ಯಕ್ತಿಗಳು ಇದರಲ್ಲಿ ಪಾಲ್ಗೊಳ್ಳುವ ಸಂಭವವಿದೆ ಎಂದು ಡಾ. ಫಂದೆ ತಿಳಿಸಿದರು.

ಸರಕಾರ ಪೆನ್ಷನ್ ಮಸೂದೆಯ ಬಗ್ಗೆ ಮಾತನಾಡುತ್ತಾ ಸಿಐಟಿಯುವಿನ ನಿಲುವನ್ನು ಡಾ. ಫಂಧೆ ಪುನರುಚ್ಚರಿಸಿದರು. ಸರಕಾರದ ಯೋಜನೆಯನ್ನು ಬೆಂಬಲಿಸಿದ ಎಐಟಿಯುಸಿ ಬೇರೆ ಬೇರೆ ಉದ್ದಿಮೆಗಳಲ್ಲಿ ಬೇರೆ ಬೇರೆ ನಿಲುವು ತಳೆದಿರುವಂತಿದೆ ಎನ್ನುತ್ತಾ ಎ.ಐ.ಟಿ.ಯು.ಸಿಗೆ ಸೇರಿದ ಸುದ್ದಿ ಪತ್ರಿಕೆಗಳ ನೌಕರರ ಒಕ್ಕೂಟ, ಉಕ್ಕು ಮತ್ತು ಕಲ್ಲಿದ್ದಲು ಉದ್ದಿಮೆಗಳಲ್ಲಿ ಎಐಟಿಯುಸಿ ಸಂಘಗಳು ಇದನ್ನು ವಿರೋಧಿಸಿವೆ ಎಂದರು. ಪೆನ್ಶನ್ ಯೋಜನೆಯ ಬಗ್ಗೆ ಸಿಐಟಿಯು ಕಿರು ಹೊತ್ತಿಗೆಯ ಸಾವಿರಾರು ಪ್ರತಿಗಳು ಮಾರಾಟವಾಗಿವೆ. ಈ ಯೋಜನೆಯ ವಿರುದ್ಧ ಒಂದು ಲಕ್ಷ ಮಂದಿ ಮತ ಪ್ರದರ್ಶನ ಮಾಡಿದ ಮೇಲೆ 'ಟೈಂಸ್ ಆಫ್ ಇಂಡಿಯಾ'ದಲ್ಲಿ ಈಗ ಜನಜನಿತವಾಗಿರುವ ಕಾರ್ಟೂನ್ ಪ್ರಕಟವಾಯಿತು ಎಂದು ಡಾ. ಫಂದೆ ತಿಳಿಸಿದರು.

ರೋಗಗ್ರಸ್ತತೆಯ ಬಗ್ಗೆ ರಾಷ್ಟ್ರೀಯ ಸಮಾವೇಶ

ಕೇವಲ ಮಾತುಕತೆ ನಡೆಯುತ್ತಿರುವ ಘಟಕಗಳ ಬಗ್ಗೆಯಷ್ಟೇ ಗಮನ ಹರಿಸುವುದು ಸರಿಯಲ್ಲ. ರೋಗಗ್ರಸ್ತ ಘಟಕಗಳ ಬಗ್ಗೆಯೂ ನಾವು ಗಮನಹರಿಸಬೇಕು. ಸಿಪಿಎಸ್‌ಟಿಯು (ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ) ಈ ಬಗ್ಗೆ ಹೋರಾಡಬೇಕು ಎಂದ ಡಾ. ಫಂದೆ ಸಿಐಟಿಯು ಕಾರ್ಯಕಾರಿ ಸಮಿತಿಯ ಇತ್ತೀಚಿನ ಸಭೆ, ರೋಗಗ್ರಸ್ತತೆಯ ಬಗ್ಗೆ ಅಖಿಲ ಭಾರತ ಸಮಾವೇಶ ನಡೆಸಲು ನಿರ್ಧರಿಸಿದೆ ಎಂದರು. 1988 ರಲ್ಲಿ 3.2 ಲಕ್ಷ ಕಾರ್ಮಿಕರು ಈ ರೋಗಗ್ರಸ್ತ ಘಟಕಗಳಲ್ಲಿ ಕಷ್ಟಪಡುತ್ತಿದ್ದರು. ಕಾರ್ಮಿಕ ಸಂಘಗಳು ಅವರ ಹಿತಾಸಕ್ತಿಗಳನ್ನು ಕಾಪಾಡಲು ಕೂಡಾ ಮುಂದೆ ಬರಬೇಕು ಎಂದರು.

ಭಗತ್ ಸಿಂಗ್ ದೃಷ್ಟಿಯಲ್ಲಿ............

ಪುಟ 3ರಿಂದ

ಂತೆ ಯೋಚಿಸುವ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾನೆ.

3.ಧರ್ಮದ ಕರ್ಮಕಾಂಡ. ಪೂಜೆ-ಪುನಸ್ಕಾರದ ಆಚರಣೆಗಳು ಪದ್ಧತಿಗಳು ಇತ್ಯಾದಿ.

ಮೇಲೆ ಹೇಳಿದ ಎರಡನೇ ಮತ್ತು ಮೂರನೇ ಅಂಶಗಳೊಂದಿಗೆ ಮೂಢನಂಬಿಕೆಯನ್ನು ಸೇರಿಸಿ ಅದನ್ನು ಧರ್ಮ ಎನ್ನುವುದಾದರೆ ಅಂತಹ ಧರ್ಮ ನಮಗೆ ಬೇಕಿಲ್ಲ. ಆದರೆ ಮೊದಲನೇ ಮತ್ತು ಎರಡನೇ ಅಂಶದೊಂದಿಗೆ ಸ್ವತಂತ್ರ ವಿಚಾರಗಳನ್ನು ಸೇರಿಸಿ ಧರ್ಮ ಆಗುವುದಾದರೆ, ಅದಕ್ಕೆ ನಮ್ಮ ಸ್ವಾಗತವಿದೆ.

ಆದರೆ ಧರ್ಮದ ಹೆಸರಲ್ಲಿ ಪ್ರತ್ಯೇಕತೆ, ಊಟ-ತಿಂಡಿಗಳಲ್ಲಿ ಭೇದಭಾವ ಹೋಗಲೇಬೇಕು. ಅಸ್ಪೃಶ್ಯ ಎಂಬ ಪದವನ್ನೇ ಮೂಲೋತ್ಪಾಟನೆ ಮಾಡಬೇಕು.

ನಮ್ಮ ಸಂಕುಚಿತ ಬುದ್ಧಿ ಬಿಟ್ಟು ಒಂದಾಗುವವರೆಗೆ ನಮ್ಮಲ್ಲಿ ನಿಜವಾದ ಐಕ್ಯತೆ ಬರದು. ಆದ್ದರಿಂದ ಮೇಲೆ ಹೇಳಿದ ರೀತಿಯಲ್ಲಿ ನಡೆದರೆ ಸ್ವಾತಂತ್ರ್ಯದ ಗುರಿಯತ್ತ ಸಾಗುತ್ತಿದ್ದೇವೆ. ನಮಗೆ-ಸ್ವಾತಂತ್ರ್ಯ ಎಂದರೆ ಬ್ರಿಟಿಶರ ಅಂಕುಶದಿಂದ ಬಿಡುಗಡೆಯಷ್ಟೇ ಅಲ್ಲ. ಜನ ಪರಸ್ಪರ ಕಲೆತು ಬದುಕಿದರೆ, ಮಾನಸಿಕ ಗುಲಾಮಿಕೆಯಿಂದ ಸ್ವತಂತ್ರವಾದರೆ ಆಗ ಮಾತ್ರವೇ ಅದು ಪೂರ್ಣ ಸ್ವಾತಂತ್ರ್ಯವಾಗುತ್ತದೆ.

ಕೃಪೆ: 'ಕಿರ್‌ತಿ', ಮೇ, *1928*

ಕೆಂಬೋಡಿಯದಲ್ಲಿ ಚುನಾವಣೆ ನಂತರವೂ ಅನಿಶ್ಚತತೆ

ಶರತ್ ಚಂದ್ರ

ಜರ್ಮನ್ ನಾಗರಿಕತ್ವ ಕೊಡದೇಕೆಂದು ತುರ್ಕಿ ಸರ್ಕಾರ ಒತ್ತಾಯಿಸಿದೆ.

- ಕೆಂಬೋಡಿಯಾದಲ್ಲಿ ಚುನಾವಣೆ ಫಲಿತಾಂಶದ ಪ್ರಕಾರ ಆಳುತ್ತಿದ್ದ ಸಿಪಿಪಿ ಪಕ್ಷಕ್ಕೆ 52 ಸೀಟುಗಳೂ ಹಾಗೂ ರಾಜಸತ್ತೆ-ಪರ FUNCINPEC ಪಕ್ಷಕ್ಕೆ 57 ಸೀಟುಗಳು ದೊರಕಿದೆ. ಸಿಪಿಪಿ ನಾಲ್ಕು ಪ್ರಾಂತ್ಯಗಳಲ್ಲಿ ಚುನಾವಣಾ ಅಕ್ರಮಗಳ ಬಗ್ಗೆ ದೂರು. ವಿಶ್ವಸಂಸ್ಥೆಯಿಂದ ಮರುಚುನಾವಣೆ ಮಾಡಲು ನಿರಾಕರಣೆ. ಸಮ್ಮಿಶ್ರ ಸರ್ಕಾರ ರಚಿಸುವುದರ ಬಗ್ಗೆ ತೀವ್ರ ಅನಿಶ್ಚತತೆ.
- ಜರ್ಮನಿಯಲ್ಲಿ ಟರ್ಕಿಷ್ ಮನೆಯೊಂದರ ಮೇಲೆ ಬಾಂಬ್ ದಾಳಿಯಲ್ಲಿ 5 ಜನರ ಕೊಲೆ. ದೇಶಾದಾದ್ಯಂತ ಈ ನವ-ನಾಜಿ ಹಿಂಸಾಚಾರದ ವಿರುದ್ಧ ತೀವ್ರ ಪ್ರತಿಭಟನೆ. ಜರ್ಮನಿಯಲ್ಲಿ ವಿದೇಶಿಯರಿಗೆ ಆಶ್ರಯ ಕೊಡುವ ಉದಾರ ಕಾನೂನು ಬದಲಾವಣೆ.
- ದಕ್ಷಿಣಾ ಆಫ್ರಿಕಾದಲ್ಲಿ 1994 ರ ಎಪ್ರಿಲ್ ಕೊನೆಯ ಒಳಗೆ ವರ್ಣಭೇದ ರಹಿತ ಚುನಾವಣೆ ನಡೆಯದೇಕು ಎಂದು ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ಎ.ಎನ್.ಸಿ.) ಏಕಪಕ್ಷೀಯವಾಗಿ ಘೋಷಿಸಿದೆ. ಎ.ಎನ್.ಸಿ. ಕೊಟ್ಟ ರಿಯಾಯಿತಿಯಿಂದ ಮಾತುಕತೆಗಳಲ್ಲಿ ಉತ್ತಮ ಪ್ರಗತಿ.

ಕೆಂಬೋಡಿಯಾದಲ್ಲಿ ಚುನಾವಣೆ ನಡೆದು ಫಲಿತಾಂಶ ಬಂದಿದ್ದರೂ ರಾಜಕೀಯ ಅನಿಶ್ಚತತೆ ಮುಂದುವರೆದಿದೆ. ಆಳುತ್ತಿದ್ದ ಎಡಪಂಥೀಯ ಕೆಂಬೋಡಿಯನ್ ಪೀಪಲ್ಸ್ ಪಾರ್ಟಿ ಸಿಪಿಪಿ ಸ್ವಲ್ಪದರಲ್ಲೇ ಬಹುಮತ ಕಳೆದುಕೊಂಡಿದೆ. 120 ಸದಸ್ಯರ ಸಂವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಸಿಪಿಪಿ 52 ಸೀಟುಗಳಿಸಿದೆ. ಪ್ರಮುಖ ವಿರೋಧ ಪಕ್ಷ ರಾಜಸತ್ತೆಯ-ಪರವಾದ *FUNCINPEC* (ಫ್ರೆಂಚ್‌ನಲ್ಲಿ ಸಹಕಾರಿ ಸ್ವತಂತ್ರ ಅಲಿಪ್ತ ಶಾಂತಿಯುತ ಕೆಂಬೋಡಿಯಾಕ್ಕಾಗಿ ರಾಷ್ಟ್ರೀಯ ಐಕ್ಯತಾ ರಂಗ) ಪಕ್ಷ 57 ಸೀಟುಗಳಿಸಿ ಬಹುಮತಗಳಿಸಿದೆ.

ಆದರೆ ಕೆಂಬೋಡಿಯನ್ ಪೀಪಲ್ಸ್ ಪಾರ್ಟಿ ರಾಜಧಾನಿ ಹಾಗೂ ಸುತ್ತಮುತ್ತಲಿನ ಮೂರು ಪ್ರಾಂತ್ಯಗಳಲ್ಲಿ ಹಲವಾರು ಚುನಾವಣಾ ಅಕ್ರಮಗಳು ನಡೆದಿದೆ ಎಂದು ದೂರಿದೆ. ಕಳವಾದ ಮತ ಪತ್ರಗಳು ಒಡೆದ ಮತ ಪೆಟ್ಟಿಗೆಗಳು, ಚುನಾವಣಾ ಅಧಿಕಾರಿಗಳು ಮಧ್ಯಪ್ರವೇಶ ಇತ್ಯಾದಿ ತೀವ್ರ ತರದ ಅಕ್ರಮಗಳ ಬಗ್ಗೆ ಚುನಾವಣೆ ನಡೆಸಿದ ವಿಶ್ವಸಂಸ್ಥೆ ಅಧಿಕಾರಿಗಳಿಗೆ ದೂರು ನೀಡಲಾಯಿತು. ಆದರೆ ವಿಶ್ವಸಂಸ್ಥೆ ಅಧಿಕಾರಿಗಳು ಮರುಚುನಾವಣೆ ನಡೆಸಲು ನಿರಾಕರಿಸಿದ್ದಾರೆ.

ವಿಶ್ವಸಂಸ್ಥೆ ಅಧಿಕಾರಿಗಳು ಬಿಡುಗಡೆ ಮಾಡಿದ ಫಲಿತಾಂಶದ ಪ್ರಕಾರ ಸಿಪಿಪಿ ಶೇಕಡಾ 38 ಹಾಗೂ *FUNCINPEC* ಶೇಕಡಾ 45 ಮತಗಳಿಸಿದೆಯಂತೆ. ಚುನಾವಣೆಗೆ ಪ್ರಾತಿನಿಧಿಕ ಪದ್ಧತಿ ಅನುಸರಿಸಲಾಗಿದೆ.

ಇದು ಸಂವಿಧಾನ ಸಭೆಯಾದ್ದರಿಂದ ಯಾವ ಪಕ್ಷಕ್ಕೆ ಮೂರನೇ ಎರಡು ಬಹುಮತ ದೊರಯದ್ದರಿಂದ ಎರಡೂ ಪಕ್ಷಗಳೂ ಸಂವಿಧಾನ ರಚನೆಯಲ್ಲಿ ಸಹಕರಿಸಬೇಕಾಗುತ್ತದೆ. ಮೂರನೇ ಎರಡು ಬಹುಮತವಿಲ್ಲದೆ ಯಾವುದೇ ವಿಧಿ ಅಂಗೀಕರಿಸುವಂತಿಲ್ಲ.

ಈ ಹಿನ್ನಲೆಯಲ್ಲಿ ಮಾಜಿ ರಾಜಕುಮಾರ ಹಾಗೂ *FUNCINPEC* ಪಕ್ಷದ ಅನಧಿಕೃತ ನಾಯಕ ನೆರೊದಂ ಸಿಹನೌಕ್ ಮಿಶ್ರ ಸರಕಾರ ನಡೆಸುವ ಸೂಚನೆ ನೀಡಿದ್ದರು. ಕೆಂಬೋಡಿಯಾದಲ್ಲಿ ಪುನಃ ರಾಜಕೀಯ ಅನಿಶ್ಚತತೆ ನಿವಾರಿಸುವ ಉದ್ದೇಶದಿಂದ ಸಿಪಿಪಿ ಸಹ ಇದಕ್ಕೆ ಒಪ್ಪಿತ್ತು. ಆದರೆ *FUNCINPEC* ಅಧಿಕೃತ ನಾಯಕ ರಾಜಕುಮಾರ ನರೊದತು ರಣರಿದ್ ಇದನ್ನು ವಿರೋಧಿಸಿದ್ದಾರೆ. ಅಮೇರಿಕ ಹಾಗೂ ಕೆಂಬೋಡಿಯಾದ ವಿಶ್ವಸಂಸ್ಥೆ ಆಡಳಿತ ಸಹ ಇದನ್ನು ವಿರೋಧಿಸಿದೆ. ಇದರಿಂದಾಗಿ ರಾಜಕೀಯ ಅನಿಶ್ಚತತೆ ಮುಂದುವರೆದಿದೆ.

ಜರ್ಮನಿಯಲ್ಲಿ ಪುನಃ ನವ-ನಾಜಿ ಹಿಂಸಾಕಾಂಡ

ಜರ್ಮನಿ ಪುನಃ ನವ-ನಾಜಿ ಹಿಂಸಾಕಾಂಡಕ್ಕೆ ಬಲಿಯಾಗಿದೆ. ಪಶ್ಚಿಮ ಜರ್ಮನಿಯ ಲೋಹ ಕೈಗಾರಿಕೆಗೆ ಪ್ರಸಿದ್ಧವಾದ ಸೊಲಿಂಗೆನ್ ಎಂಬ ಪಟ್ಟಣದಲ್ಲಿ ಮುಂಜಾವಿನಲ್ಲಿ ನಡೆದ ದಾಳಿಯಲ್ಲಿ ತುರ್ಕಿ ವಲಸೆಗಾರರ ಮನೆಯೊಂದರ ಮೇಲೆ ಮಾಡಿದ ದಾಳಿಯಲ್ಲಿ ಇಬ್ಬರು ಮಹಿಳೆಯರು, ಮೂವರು ಮಕ್ಕಳು ಸತ್ತಿದ್ದಾರೆ. ಇದು ನವ-ನಾಜಿ ಬಲಪಂಥೀಯರ ಕುಕೃತ್ಯ ಹಾಗೂ ಹಿಂಸಾಕಾಂಡದ ಭಾಗ ಎಂದು ಶಂಕಿಸಲಾಗಿದೆ. ಇಬ್ಬರು ಯುವಕರನ್ನು ಬಂಧಿಸಲಾಗಿದೆ. ಬಾಂಬ್‌ದಾಳಿಯಲ್ಲಿ 14 ಜನ ಅದೇ ಕುಟುಂಬದ ಸದಸ್ಯರೂ ಇತರರೂ ಗಾಯಗೊಂಡಿದ್ದಾರೆ.

ಇಂತಹುದೇ ಇನ್ನೊಂದು ಬಾಂಬ್ ದಾಳಿ ನವೆಂಬರ್‌ನಲ್ಲಿ ತುರ್ಕಿ ಮನೆಯೊಂದರ ಮೇಲೆ ಮಾಡಲಾಗಿತ್ತು. ಕೆಲವರನ್ನು ಆ ಸಂದರ್ಭದಲ್ಲಿ ಬಂಧಿಸಿದ್ದರೂ ಯಾರೂ ಇನ್ನೂ ಶಿಕ್ಷೆಗೆ ಗುರಿಯಾಗಿಲ್ಲ. ಹಲವಾರು ದಾಳಿಗಳು ನಡೆಯುತ್ತಿವೆ. ಈ ಹಿನ್ನಲೆಯಲ್ಲಿ ಇತ್ತೀಚಿನ ಈ ನವ-ನಾಜಿ ಹಿಂಸಾಕಾಂಡ ತುರ್ಕರನ್ನು ರೊಚ್ಚಿಗೆಬ್ಬಿಸಿದೆ. ಬಾಂಬ್ ದಾಳಿಯ ದಿನ 10,000 ಜನ ದಾಳಿಗೊಳಗಾದ ಮನೆ ಬಳಿ ಸೇರಿ ಧರಣಿ ನಡೆಸಿದರು.

ಶವಸಂಸ್ಕಾರದ ದಿನವೂ ಭಾರಿ ಪ್ರದರ್ಶನಗಳು ನಡೆದಿವೆ. ಶವ ಸಂಸ್ಕಾರದಲ್ಲಿ ಭಾಗವಹಿಸಲು ಬಂದಿದ್ದ ಅಧ್ಯಕ್ಷ ಹಾಗೂ ಇಬ್ಬರು ಮಂತ್ರಿಗಳ ವಿರುದ್ಧ ಘೋಷಣೆ ಕೂಗಲಾಯಿತು.

ಆಮೇಲೆ ಜರ್ಮನಿಯಾದ್ಯಂತ ಈ ನವನಾಜಿ ಹಿಂಸಾಕಾಂಡ ಹಾಗೂ ಅದನ್ನು ತಡೆಯುವ ಸರ್ಕಾರದ ನಿಷ್ಕ್ರಿಯತೆ ವಿರುದ್ಧ ತೀವ್ರ ಪ್ರತಿಭಟನೆ ನಡೆದಿದೆ. ಇದರಲ್ಲಿ ಕುಪಿತ ತುರ್ಕರಲ್ಲದೆ ಹಲವಾರು ಟ್ರೇಡ್ ಯೂನಿಯನ್‌ಗಳು, ವಿರೋಧಪಕ್ಷಗಳು, ಚರ್ಚ್ ಗುಂಪುಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿವೆ. ದೇಶದಲ್ಲಿ ಹೆಚ್ಚುತ್ತಿರುವ ಜನಾಂಗೀಯ ಅಸಹಿಷ್ಣುತೆ, ಶಾಂತಿಪ್ರಿಯ ಜನರನ್ನು ಗಾಬರಿಗೊಳಿಸಿದೆ. ನವ-ನಾಜಿ ಗುಂಪುಗಳ ವಿರುದ್ಧ ಕಾರ್ಯಾಚರಣೆಯಲ್ಲಿ ಆಳುವ ಪಕ್ಷದ ನಿಷ್ಕ್ರಿಯತೆ ಜನರನ್ನು ಕುಪಿತಗೊಳಿಸಿದೆ. ಜರ್ಮನಿ ಐಕ್ಯಗೊಂಡಾಗಿನಿಂದ ಹೆಚ್ಚಾದ ಈ ನವ-ನಾಜಿ ಹಿಂಸಾಚಾರದ ಎರಡು ಸಾವಿನ ಘಟನೆಗಳು ನಡೆದಿವೆ. ಈ ವರ್ಷವೆ ವಿದೇಶಿಯರ ಮೇಲೆ ಮಾಡಿದ 675 ಪ್ರಕರಣಗಳು ನಡದಿವೆ.

ಇತ್ತೀಚೆಗೆ ಜರ್ಮನಿಯ ಪಾರ್ಲಿಮೆಂಟು ದೇಶದ 50 ವರ್ಷದ ಹಳೆಯದಾದ ವಲಸೆ ಕಾನೂನು ಬದಲಾಯಿಸಿತು. ವಿದೇಶಿಯರ ವಿರುದ್ಧ ನಾಜಿ ಹಿಂಸಾಕಾಂಡದ ಪಾಪ ತೊಳೆಯಲು 50 ವರ್ಷದ ಹಿಂದೆ ಈ ಉದಾರ ವಲಸೆ ಕಾನೂನು ರೂಪಿಸಲಾಗಿತ್ತು. ಇದರ ಪ್ರಕಾರ ಯಾವುದೇ ದೇಶದ, ಜನಾಂಗದ ಜನ ಜರ್ಮನಿಗೆ ಮತ್ತೆ ಬಂದು ನೆಲೆಸಬಹುದು.

ಈಗ ಬದಲಾದ ಕಾನೂನಿನ ಪ್ರಕಾರ ಯಾವುದೇ ವಿದೇಶಿಯರು ಇನ್ನು ಮೇಲೆ ವಲಸೆ ಬರುವಂತಿಲ್ಲ. ವಲಸೆಕಾರರನ್ನು ತತ್‌ಕ್ಷಣ ಅವರ ದೇಶಗಳಿಗೆ ಹಿಂದಟ್ಟಲಾಗುವುದು. ವಿದೇಶಿಯರ ವಿರುದ್ಧ ಹಿಂಸಾಚಾರದ ಮೂಲ ವಲಸೆಗಾರರು ಬರುವುದರಿಂದ ಉಂಟಾಗಬಹುದಾದ ನಿರುದ್ಯೋಗದ ಬಗ್ಗೆ ಭಯ ಆತಂಕ. ಆದ್ದರಿಂದ ವಲಸೆ ಮೇಲೆ ಬಿಗಿ ಕಾನೂನು ತಂದರೆ ಇದು ನಿಲ್ಲುವುದು ಎಂಬುದು ಬಲಪಂಥೀಯ ಸರ್ಕಾರದ ವಾದವಾಗಿತ್ತು. ಮೊದಮೊದಲು ವಿರೋಧಿಸಿದರೂ ವಿರೋಧಿ ಸೋಶಲಿಸ್ಟ್ ಪಕ್ಷ ಈ ಬದಲಾವಣೆಗೆ ಒಪ್ಪಿತ್ತು. ಇತ್ತೀಚಿಗಿನ ಹಿಂಸಾಕಾಂಡ ಸರ್ಕಾರದ ವಾದ ಎಷ್ಟು ಟೊಳ್ಳು ಎಂದು ತೋರಿಸಿದೆ. ಈ ಕಾನೂನಿನ ವಿರುದ್ಧವಾಗಿಯೂ ತೀವ್ರ ಪ್ರತಿಭಟನಾ ಪ್ರದರ್ಶನಗಳೂ ನಡೆದಿವೆ.

ಜರ್ಮನಿಯಲ್ಲಿ 18 ಲಕ್ಷ ತುರ್ಕಿಗಳು ವಾಸಿಸಿದ್ದಾರೆ. ಅವರು ಹಲವು ದಶಕಗಳಿಂದ ಕೆಲವರು ತಲೆಮಾರುಗಳಿಂದ ವಾಸಿಸಿದ್ದರೂ ಅವರಿಗೆ ಜರ್ಮನ್ ನಾಗರಿಕತ್ವ ಕೊಟ್ಟಿಲ್ಲ. 60 ರ 70 ರ ದಶಕದಲ್ಲಿ ಜರ್ಮನ್ ಪುನರ್ರಚನೆಯಲ್ಲಿ ಅವರ ಕೊಡುಗೆ ಅಪಾರ. ಜರ್ಮನರು ಮಾಡಲು ಒಪ್ಪದ ಕಷ್ಟದ ಕೆಲಸಗಳನ್ನು ಮಾಡುತ್ತಾ ಜರ್ಮನ್ ಪುನರ್ರಚನೆಗೆ ಕಾರಣರಾಗಿದ್ದಾರೆ. ಇಂತಹ ತುರ್ಕಿಯರಿಗೆ

ಎ.ಎನ್.ಸಿ. ಘೋಷಣೆ ಎಪ್ರಿಲ್ 94ರೊಳಗೆ ಚುನಾವಣೆ

ದಕ್ಷಿಣ ಆಫ್ರಿಕಾದ ಸರ್ಕಾರ ವರ್ಣಭೇದ ಕೊನೆಗೊಳ್ಳಲೂ ವಿನಾಕಾರಣ ವಿಳಂಬ ಮಾಡುತ್ತಿರುವುದರ ವಿರುದ್ಧ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಒತ್ತಡ ಹೇರಲು ಹಲವು ಕ್ರಮಗಳನ್ನು ಯೋಜಿಸಿದೆ. ಸರ್ಕಾರ ವರ್ಣಭೇದ ರಹಿತ ಚುನಾವಣೆಗಳನ್ನು ನಡೆಸುವ ದಿನಾಂಕ ನಿರ್ಧರಿಸಲು ಹಿಂಜರಿಯುತ್ತಿರುವುದರಿಂದ ಎಪ್ರಿಲ್ 94 ರೊಳಗೆ ಚುನಾವಣೆಗಳು ನಡೆಯದೇಕೆಂದು ಎ.ಎನ್.ಸಿ.ಯ ನಿರ್ಧಾರ.

ದಕ್ಷಿಣಾ ಆಫ್ರಿಕಾದ ಸರ್ಕಾರ ಹಾಗೂ ಬಲಪಂಥೀಯ ಬಿಳಿಯರ ಪಕ್ಷಗಳು ಶಕ್ತಿಗಳು ವರ್ಣಭೇದ ನಿವಾರಿಸುವ ಕೆಲಸ ವಿಳಂಬ ಮಾಡಲು ಹಲವಾರು ತಂತ್ರಗಳನ್ನು ಹೂಡುತ್ತಿವೆ. ಕಳೆದವಾರಗಳಲ್ಲಿ ಏನ್ ಆಫ್ರಿಕನ್ ಕಾಂಗ್ರೆಸ್ ಎರಡನೆಯ ಅತಿ ದೊಡ್ಡ ವರ್ಣಭೇದ-ವಿರೋಧಿ ಸಂಘಟನೆಯ ನಾಯಕರ ಬಂಧನ ಇಂತಹ ಒಂದು ಕ್ರಮ. ಅದೂ 26 ಸಂಘಟನೆಗಳ ಮಾತುಕತೆಗಳು ಆರಂಭವಾಗುವ ಹಿಂದಿನ ದಿನ ಇದು ನಡೆಯಿತು. ಆದರೂ ಎ.ಎನ್.ಸಿ.ಯ ಒತ್ತಡದಿಂದ ಮಾತುಕತೆಗಳು ಮುಂದುವರೆಯುತ್ತಿವೆ.

ಆ ಮೇಲೆ ನಡೆದ ಮಾತುಕತೆಗಳಲ್ಲಿ ಎ.ಎನ್.ಸಿ. ಕೊಟ್ಟಿರುವ ಪ್ರಮುಖ ರಿಯಾಯಿತಿ ವರ್ಣಭೇದ ತೊಡೆಯುವ ಮಧ್ಯಂತರ ಅವಧಿ ಬಗ್ಗೆ ಸಹಮತ ರೂಪಿಸಲು ನೆರವಾಗಲಿದೆ. ಹಿಂದೆ ದಕ್ಷಿಣಾ ಆಫ್ರಿಕಾದ ಸಂವಿಧಾನವನ್ನು ವರ್ಣಭೇದ-ರಹಿತ ಚುನಾವಣೆಯ ಆಧಾರದ ಮೇಲೆ ಚುನಾಯಿತ ಸಂವಿಧಾನ ಸಭೆ ರಚಿಸದೇಕೆಂದು ಎ. ಎನ್.ಸಿ. ಒತ್ತಾಯಿಸುತ್ತಿತ್ತು. ಹಾಗೂ ಚುನಾವಣೆಯವರೆಗೆ ಎಲ್ಲಾ ಪಕ್ಷಗಳ ಸರ್ಕಾರ ಆಡಳಿತ ನಡೆಸದೇಕೆಂದು ಎ.ಎನ್.ಸಿ. ನಿಲುವಾಗಿತ್ತು. ಮಧ್ಯಂತರ ಅವಧಿಗೆ ಒಂದು ತಾತ್ಕಾಲಿಕ ಸಂವಿಧಾನ 26 ಸಂಘಟನೆಗಳ ಪ್ರತಿನಿಧಿಗಳ ಚರ್ಚೆ ಆಧಾರದ ಮೇಲೆ ರೂಪಿಸಬಹುದು ಎಂಬುದು ಎ.ಎನ್.ಸಿ. ಕೊಟ್ಟಿರುವ ಪ್ರಮುಖ ರಿಯಾಯಿತಿ. ಆದರೆ ಸಂವಿಧಾನ ಚುನಾಯಿತ ಸಂವಿಧಾನ ಸಭೆ ರಚಿಸಬೇಕೆಂಬ ನಿಲುವಿನಲ್ಲಿ ಬದಲಾವಣೆ ಇಲ್ಲ.

●

ಜನಾಂಗ ದ್ವೇಷಿ ಶಕ್ತಿಗಳೇ ಭಾರತದ ವ್ಯವಹಾರಗಳಲ್ಲಿ ಮೂಗು ತೂರಿಸದೇಡಿ ಎಡಪಕ್ಷಗಳ ಎಚ್ಚರಿಕೆ

ಕಾಶ್ಮೀರ ಕುರಿತಂತೆ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಅಮೇರಿಕಾ ಉಪ ಸಹಾಯಕ ವಿದೇಶಾಂಗ ಕಾರ್ಯದರ್ಶಿ ಹಾಗೂ ಇಸ್ರೇಲಿ ವಿದೇಶಾಂಗ ಮಂತ್ರಿಯ ಹೇಳಿಕೆಗಳನ್ನು ನಾಲ್ಕು ಎಡಪಕ್ಷಗಳು ಬಲವಾಗಿ ಖಂಡಿಸಿವೆ.

ಅಮೇರಿಕಾದ ಉಪಸಹಾಯಕ ವಿದೇಶಾಂಗ ಕಾರ್ಯದರ್ಶಿ ಜಾನ್ ಮೆಲಟ್ಸ್‌ರವರು ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಬಗ್ಗೆ ನೀಡಿರುವ ಹೇಳಿಕೆ ಭಾರತದ ಆಂತರಿಕ ವ್ಯವಹಾರಗಳಲ್ಲಿ ಒಂದು ನಗ್ನ ಹಸ್ತಕ್ಷೇಪ ಎಂದು ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ., ಹಾಗೂ ಫಾರ್ವಡ್‌ಬ್ಲಾಕ್ ಮುಖಂಡರು ಖಂಡಿಸಿದ್ದಾರೆ. ಶಿಮ್ಲಾ ಒಪ್ಪಂದದ ಆಧಾರದ ಮೇಲೆ ಕಾಶ್ಮೀರ ವಿವಾದವನ್ನು ದ್ವಿಪಕ್ಷೀಯವಾಗಿ ಪರಿಹರಿಸಿಕೊಳ್ಳದೇಕೆಂದು ಅಮೇರಿಕಾದ ಅಪೇಕ್ಷೆ ಎಂದ ಅವರು ಭಯೋತ್ಪಾದಕರಿಗೆ ಪಾಕಿಸ್ತಾನದ ನೇರ ಸಹಾಯವನ್ನು ನೋಡುವ ದೃಷ್ಟಿಯಲ್ಲೇ ತಾವು ಭಾರತದ "ಮಾನವ ಹಕ್ಕುಗಳ ಉಲ್ಲಂಘನೆ"ಯನ್ನು ಕಾಣುತ್ತೇವೆ, ಅಮೇರಿಕಾ ಆಡಳಿತದ ಮಟ್ಟಿಗೆ ಇವೆರಡೂ ಒಂದೇ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ರೀತಿ 'ಮಾನವ ಹಕ್ಕು'ಗಳ ನೆಪವೊಡ್ಡಿ ಕಾಶ್ಮೀರ ಪ್ರಶ್ನೆಯ ಮೇಲೆ ಭಾರತದ ಸಾರ್ವಭೌಮತೆಗೆ ಸಂಚಕಾರ ತರುವ ಇಂತಹ ಯಾವ ಪ್ರಯತ್ನವನ್ನೂ ಭಾರತದ ಜನತೆ ಸಹಿಸುವುದಿಲ್ಲ ಎಂದು ಅಮೇರಿಕನ್ ಆಡಳಿತಕ್ಕೆ ಎಡಪಕ್ಷಗಳು ಎಚ್ಚರಿಕೆ ನೀಡಿವೆ. ವಿಶ್ವಾದ್ಯಂತ ತನ್ನ ಸಂಕುಚಿತ ಸ್ವಾರ್ಥಗಳಿಗಾಗಿ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಅತೀ ಕೆಟ್ಟ ದಾಖಲೆ ಹೊಂದಿರುವ ಅಮೇರಿಕಾಕ್ಕಂತೂ ಮಾನವ ಹಕ್ಕುಗಳ ಉಲ್ಲಂಘನೆಗಳ ಬಗ್ಗೆ ನ್ಯಾಯಪಂಚಾಯ್ತಿ ಮಾಡಲು ಏನೇನೂ ಹಕ್ಕಿಲ್ಲ ಎಂದು ಎಡಪಕ್ಷಗಳು ಹೇಳಿವೆ.

ಅತ್ತ ಇಸ್ರೇಲಿ ವಿದೇಶಾಂಗ ಮಂತ್ರಿ ಶಿಮೆನ್ ಪೆರೆಸ್‌ರವರು ತಮ್ಮ ಭಾರತ ಭೇಟಿ ಕಾಲದಲ್ಲಿ ಬಿಜೆಪಿ ಮುಖಂಡರಿಗೆ ಕಾಶ್ಮೀರ ಸಮಸ್ಯೆ ಪರಿಹಾರ ಕುರಿತಂತೆ ಸೂಚಿಸಿದರೆನ್ನಲಾದ ಪರಿಹಾರದ ಬಗ್ಗೆಯೆ ಎಡಪಕ್ಷಗಳು ತಮ್ಮ ತೀವ್ರ ಕ್ರೋಧವನ್ನು ವ್ಯಕ್ತಪಡಿಸಿವೆ. ಮುಸ್ಲಿಮೇತರರನ್ನು ದೊಡ್ಡ ಪ್ರಮಾಣದಲ್ಲಿ ಕಾಶ್ಮೀರ ಕಣಿವೆಯಲ್ಲಿ ನೆಲೆಸುವಂತೆ ಮಾಡಿ ಅಲ್ಲಿಯ ಜನಸಂಖ್ಯಾ ಸ್ವರೂಪವನ್ನು ಬದಲಾಯಿಸುವುದು ಕಾಶ್ಮೀರ ಸಮಸ್ಯೆಗೆ ಏಕೈಕ ಪರಿಹಾರ ಎಂದು ಶಿಮೆನ್ ಪೆರೆಸ್ ಅಡ್ವಾಣಿಯವರಿಗೆ ಹೇಳಿರುವುದಾಗಿ ವರದಿಯಾಗಿದೆ.

ಜನಾಂಗದ್ವೇಷಿ ಶಕ್ತಿಗಳೇ, ನಮ್ಮ ದೇಶದ ಆಂತರಿಕ ವ್ಯವಹಾರಗಳಲ್ಲಿ ಈ ರೀತಿ ಬಹಿರಂಗವಾಗಿ ಮೂಗು ತೂರಿಸುವುದನ್ನು ಭಾರತದ ಜನತೆ ಎಂದೂ ಸಹಿಸುವುದಿಲ್ಲ ಎಂದು ಎಡಪಕ್ಷಗಳು ಎಚ್ಚರಿಕೆ ನೀಡುತ್ತಾ ಈ ವಿಷಯದಲ್ಲಿ ಇಸ್ರೇಲ್ ಮತ್ತು ಬಿಜೆಪಿ ನಡುವಿನ ಸಮಾನ ಮನಸ್ಕತೆ ಅವೆರಡೂ ಹೊಂದಿರುವ ಜನಾಂಗದ್ವೇಷದ, ಧಾರ್ಮಿಕ ಅಸಹಿಷ್ಣುತೆಯ ನಿಲುವನ್ನು ಬಯಲಿಗೆ ತಂದಿದೆ ಎಂದಿವೆ.

ಇಂತಹ ಯಾವ ಸಲಹೆಗಳೂ ಕಾಶ್ಮೀರದ ಸಮಸ್ಯೆಗೆ ಪರಿಹಾರ ನೀಡಲಾರವು. ಕಾಶ್ಮೀರದಲ್ಲಿ ರಾಜಕೀಯ ಪ್ರಕ್ರಿಯೆಯನ್ನು ಮತ್ತೆ ಸ್ಥಾಪಿಸಲು ಕಾಶ್ಮೀರ ಜನಗಳಿಗೆ ಗರಿಷ್ಠ ಸ್ವಾಯತ್ತತೆ ನೀಡಲು ಆದ್ಯತೆ ನೀಡುವ ಹಲವಾರು ಕ್ರಮಗಳು ಹಾಗೂ ಒಂದು ಸುಸಂಗತವಾಗಿ ಧೋರಣೆಯಿಂದ ಮಾತ್ರವೇ ಕಾಶ್ಮೀರ ಸಮಸ್ಯೆಯ ಪರಿಹಾರ ಸಾಧ್ಯ ಎಂದು ಎಡಪಕ್ಷಗಳು ಹೇಳಿವೆ.


ಕಾಂಗ್ರೈ - ಬಿ.ಜೆ.ಪಿ. ಅನೈತಿಕ ಸಂಬಂಧದ ಮೊದಲಗರ್ಭಪಾತ

ಪುಟ 1ರಿಂದ

ಪಕ್ಷಗಳ ಜಂಟಿ ಪ್ರಯತ್ನದ ಅಂಶವೆಂದೇ ಜನ ಪರಿಗಣಿಸುತ್ತಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆ ತಿಳಿಸಿದೆ. ತನ್ನ ಪಶ್ಚಿಮಬಂಗಾಳದ ಘಟಕದ ಅಪಪ್ರಚಾರವನ್ನು ಅನುಮೋದಿಸಿ ಎಐಸಿಸಿ(ಐ) ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿದೆ, ಈ ಮೂಲಕ ಪಂಚಾಯತ್ ಚುನಾವಣೆಗಳಲ್ಲಿ ಕಾಂಗ್ರೈ ಬೆಂಬಲಿಗರು 26 ಸಿಪಿಐ(ಎಂ) ಕಾರ್ಯಕರ್ತರನ್ನು ಕೊಂದಿರುವ ಅಂಶವನ್ನು ಉದ್ದೇಶಪೂರ್ವಕವಾಗಿ ಮರೆಮಾಚುತ್ತಿದೆ.

ತನ್ನ ಕಾರ್ಯಕರ್ತರು ಸಂಯಮದಿಂದ ವರ್ತಿಸಲು ಹೇಳುವ ಬದಲು ಎಐಸಿಸಿ(ಐ) "ಸಿಪಿಐ(ಎಂ) ಭಯೋತ್ಪಾದನೆ" ಯೆಂದು ಹಳೆಯ ಬೊಬ್ಬೆ ಎಬ್ಬಿಸುತ್ತಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ಎಡರಂಗ ಸಾಮೂಹಿಕ ನೆಲೆಯನ್ನು ಕಸಿದುಕೊಳ್ಳುವಲ್ಲಿ ತಮ್ಮ ಪಕ್ಷಕ್ಕಾಗಿರುವ ಸೋಲನ್ನು ಮುಚ್ಚಿಕೊಳ್ಳುವ ಹಳೆಯ ತಂತ್ರ ಎಂದು ಪಿ.ಬಿ ಹೇಳಿದೆ.

ಹಾಬ್ರಾ ಮುನಿಸಿಪಲ್ ಚುನಾವಣೆಗಳಲ್ಲಿ ಬಿಜೆಪಿ ಪರವಾಗಿ ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಂಡ ಕಾಂಗ್ರೈ ಅಭ್ಯರ್ಥಿಗಳನ್ನು ಅಮಾನತು ಮಾಡಲಾಗಿದೆ ಎಂದು ಹೇಳುತ್ತಾ ಗಾಡ್ಗಿಳ್ ಅವರು ಕಾಂಗ್ರೆಸ್(ಐ) - ಬಿಜೆಪಿಗಳ ಅನೀತಿಯುತ ಹಾಗೂ ಆಘಾತಕಾರಿ ಶಾಮಿಲಿನ ಪ್ರಶ್ನೆಯನ್ನು ಬದಿಗೆ ತಳ್ಳಲು ಪ್ರಯತ್ನಿಸಿದ್ದಾರೆ ಎಂದು ಪಿ.ಬಿ ಆಪಾದಿಸಿದೆ. ವಿಭಿನ್ನ ಜಿಲ್ಲೆಗಳಲ್ಲಿ ಸೀಟು ಹೊಂದಾಣಿಕೆಗಳು, ಜಂಟಿಯಾಗಿ ಪ್ರಕಟಿಸಿದ ಮಾದರಿ ಮತಪತ್ರಗಳು (ಫೋಟೋ ನೋಡಿ) ಇವುಗಳ ಬಗ್ಗೆ ಗಾಡ್ಗೀಳ್‌ರವರು ಏನನ್ನುತ್ತಾರೆ ಎಂದು ಪ್ರಶ್ನಿಸಿರುವ ಪೊಲಿಟ್ ಬ್ಯೂರೋ ಕಾಂಗ್ರೆಸ್(ಐ) ಮುಖಂಡರು ಇಂತಹ ವಿನಾಶಕಾರಿ ಶಾಮಿಲು ತಂತ್ರದ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು ಎಂದಿದೆ. ಪಶ್ಚಿಮಬಂಗಾಳದ ಜನತೆ ಇಂತಹ ಸಮಯಸಾಧಕ, ನೀತಿಗೆಟ್ಟ ತಂತ್ರಗಳಿಗೆ ಸರಿಯಾದ ಉತ್ತರ ನೀಡುತ್ತಾರೆ ಎಂದು ಪಿ.ಬಿ. ಎಚ್ಚರಿಸಿದೆ.



ಇದು ಭೀರ್ ಭೂಮ್ ಜಿಲ್ಲೆಯ ಖಾರುನ್ ಗ್ರಾಮ ಪಂಚಾಯ್ತಿಯಲ್ಲಿ ಕಾಂಗ್ರೆಸ್(ಐ) ಹಾಗೂ ಬಿಜೆಪಿ ಅಭ್ಯರ್ಥಿಗಳಿಗೆ ಮತನೀಡದೇಕೆಂದು ಮನವಿ ಮಾಡುವ ಮಾದರಿ ಮತಪತ್ರ. ಹೀಗೆ ಹಲವಾರು ಜಿಲ್ಲೆಗಳಲ್ಲಿ ಜಂಟಿಯಾಗಿ ಈ ಎರಡು ಪಕ್ಷಗಳು ಮಾದರಿ ಮತಪತ್ರ ಹಂಚಿವೆ.

KRNM/BGS-405 MAG(2) PRB DECR 319-78/79

ಗುಲ್ಬರ್ಗಾದಲ್ಲಿ 'ಐಕ್ಯರಂಗ ಉತ್ಸವ'

'ಐಕ್ಯರಂಗ' ಪತ್ರಿಕೆ ಹೆಚ್ಚೆಚ್ಚು ದುಡಿಯುವ ಜನಗಳ ನಡುವೆ ಪ್ರಚಾರಗೊಳ್ಳುವಂತೆ ಮಾಡುವ 'ಐಕ್ಯರಂಗ ಉತ್ಸವ' ಗುಲ್ಬರ್ಗಾದಲ್ಲಿ ಜಿಲ್ಲೆಯಲ್ಲಿ ಜೂನ್ 6 ರಂದು ಆರಂಭವಾಯಿತು. ರಾಜ್ಯದ ಮಾಜಿ ಮಂತ್ರಿಗಳಾದ ವೈಜನಾಥ್ ಪಾಟೀಲ್ ಪತ್ರಿಕೆಯ ವಾರ್ಷಿಕ ಚಂದಾದಾರರಾಗುವುದರೊಂದಿಗೆ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗುಲ್ಬರ್ಗಾ ನಗರದಲ್ಲಿ ಡಂಕೆಲ್ ಪ್ರಸ್ತಾವಗಳು ಹಾಗೂ ಕೋಮುವಾದದ ಅಪಾಯದ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಗುಲ್ಬರ್ಗಾ ನಗರದ ವಿವಿಧ ಜನವಿಭಾಗಗಳ ಹಾಗೂ ಜಿಲ್ಲೆಯಲ್ಲಿ ಸಕ್ರಿಯರಾಗಿರುವ ದುಡಿಯುವ ಜನಗಳ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಇದರಲ್ಲಿ ಭಾಗವಹಿಸಿದ್ದರು. ಅಪೂರ್ವವೆನಿಸುವ 'ಐಕ್ಯರಂಗ'ದ ಕುರಿತು ಗೋಡೆಬರಹಗಳು ಹಾಗೂ ಪ್ರದರ್ಶನ ಈ 'ಉತ್ಸವ'ದ ವಿಶಿಷ್ಟ ಅಂಶಗಳು.

ಕೋಮುವಾದದ ಅಪಾಯದ ವಿರುದ್ಧ ಜಾತ್ಯತೀತ ಶಕ್ತಿಗಳು ಸಾಕಷ್ಟು ಪ್ರಚಾರ-ಪ್ರಕ್ಷೋಭೆ ನಡೆಸುತ್ತಿಲ್ಲ ಎಂದು ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ಮಾತನಾಡಿದ ವೈಜನಾಥ್ ಪಾಟೀಲ್ ಕಳವಳ ವ್ಯಕ್ತಪಡಿಸಿದರು. ಕೋಮುವಾದಿಗಳು ಹಿಟ್ಲರನ ಗೋಬೆಲ್ಸ್‌ನ ಸೂತ್ರವನ್ನು ಅನುಸರಿಸಿ ಸಾವಿರ ಸುಳ್ಳುಗಳನ್ನು ಹರಡುತ್ತಿದ್ದಾರೆ. ಅವನ್ನೆದುರಿಸಲು ಅದರ ಎರಡುಪಟ್ಟು ಪ್ರಯತ್ನಗಳನ್ನು ಜಾತ್ಯಾತೀತ ಶಕ್ತಿಗಳು ಮಾಡಬೇಕಾಗಿದೆ. ಆದರೆ ಜಾತ್ಯಾತೀತ ಶಕ್ತಿಗಳು 10 ಶೇ. ರಷ್ಟು ಕೂಡಾ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿಲ್ಲ ಎಂದು ಅವರು ಅಭಿಪ್ರಾಯಪಟ್ಟರು. ನರಸಿಂಹರಾವ್, ಅಡ್ವಾಣಿ ನಕಲಿಕುಸ್ತಿ ನಡೆಸಿದ್ದಾರೆ. ಈ ಸನ್ನಿವೇಶದಲ್ಲಿ ಜಾತ್ಯಾತೀತ ಶಕ್ತಿಗಳು ಸುಮ್ಮನೆ ಕುಳಿತರೆ ದೇಶದ ಸ್ವಾತಂತ್ರ್ಯ ಉಳಿಯುವುದಿಲ್ಲ ಎಂದು ಅವರು ಎಚ್ಚರಿಸಿದರು.

ಮೊದಲನೆಯದ್ದು

ಇಂತಹ ಉತ್ಸವ ನಡೆಸುವುದರಲ್ಲಿ ಗುಲ್ಬರ್ಗಾವೇ ಮೊದಲನೆಯದ್ದು ಎಂದು 'ಐಕ್ಯರಂಗ'ದ ಸಂಪಾದಕೀಯ ಮಂಡಳಿಯ ಸದಸ್ಯರಾದ ಜಿ. ಎನ್. ನಾಗರಾಜ್ ಇದೇ ಪ್ರದೇಶದಲ್ಲಿ ಆರೇಳು ಶತಮಾನಗಳ ಹಿಂದೆ ಶೋಷಣೆಯ ವಿರುದ್ಧ 350 ಕ್ಕೂ ಹೊಸ ದನಿಗಳು ಎದ್ದಿದ್ದವು, ಅವುಗಳಲ್ಲಿ ಕನಿಷ್ಠ 30 ಮಹಿಳಾ ದನಿಗಳಾಗಿದ್ದವು. ವಚನಕಾರರ ಆಂದೋಲನವನ್ನು ವಿಫಲಗೊಳಿಸಲೆತ್ನಿಸಿದ್ದ ಪಂಡಿತವರ್ಗ, ಸಾಧುಸಂತರು ಈಗ ಮತ್ತೆ ಅಂತಹುದೇ ಪ್ರಯತ್ನ ನಡೆಸುತ್ತಿರುವ ದಿನಗಳು ಬಂದಿವೆ ಅಂತರ್ರಾಷ್ಟ್ರೀಯ ಮಟ್ಟದಲ್ಲೂ ಸಮಾನತೆಯ ದನಿಗಳನ್ನು ಮಟ್ಟಹಾಕುವ ಪ್ರಯತ್ನ ನಡೆದಿವೆ. ಈ ಹಿನ್ನೆಲೆಯಲ್ಲಿ 'ಐಕ್ಯರಂಗದ ಬಗ್ಗೆ ಯೋಚಿಸಿದಾಗ ಹೆಮ್ಮೆಯೂ ಆಗುತ್ತದೆ. ವಿಷಾದವೂ ಆಗುತ್ತದೆ ಎಂದರು. ಹೆಮ್ಮೆ ಏಕೆಂದರೆ ಈ ಎರಡು ಸಂಗತಿಗಳ ಬಗ್ಗೆ 'ಐಕ್ಯರಂಗ' ಕನ್ನಡದ ಯಾವ ಪತ್ರಿಕೆಯೂ ನೀಡದ ಮಾಹಿತಿಗಳನ್ನು ನೀಡಿದೆ. ಇಂಗ್ಲೀಷ್ ಪತ್ರಿಕೆಗಳೂ ಡಂಕೆಲ್ ಪ್ರಸ್ತಾವಗಳಲ್ಲಿ ಏನೆಲ್ಲಾ ಇದೆ ಎಂಬ ಬಗ್ಗೆ ಬಾಯಿ ಬಿಡುತ್ತಿಲ್ಲ. ವಿಷಾದಕರ ಸಂಗತಿಯೆಂದರೆ 'ಐಕ್ಯರಂಗ'ದ ಈ ಪ್ರಯತ್ನ ದುಡಿಯುವ ಜನಗಳನ್ನು ತಲುಪುತ್ತಿಲ್ಲ 12-13 ನೇ ಶತಮಾನದಲ್ಲಿ ವಚನಗಳನ್ನು ಹಳ್ಳಿ-ಹಳ್ಳಿಗಳಲ್ಲಿ ಬಿತ್ತಿದವರು ಜನಸಾಮಾನ್ಯರು. ಜನಸಾಮಾನ್ಯರ ನಡುವೆ ದುಡಿಯುತ್ತಿರುವ ಕಾರ್ಯಕರ್ತರು ಈಗ ಅದನ್ನು ಮಾಡಬೇಕು ಎಂದರು. ಡಂಕೆಲ್ ಪ್ರಸ್ತಾವಗಳ ಬಗ್ಗೆ ಮಾತನಾಡುತ್ತಾ ಭಾರತದ ರೈತರನ್ನು ದಿವಾಳಿಯೆಬ್ಬಿಸಿ ವಿದೇಶೀ ಆಮದಿನ ಮೇಲೆ ಅವಲಂಬಿಸುವಂತೆ ಮಾಡುವುದು ಡಂಕೆಲ್ ಪ್ರಸ್ತಾವಗಳ ಒಳಮರ್ಮ ಎಂದರು. ಡಂಕೆಲ್ ಪ್ರಸ್ತಾವ, ಹೊಸ ಆರ್ಥಿಕ ನೀತಿ, ಅಯೋಧ್ಯಾ ಪ್ರಶ್ನೆಗಳು ಪರಸ್ಪರ ಸಂಬಂಧ ಪಟ್ಟವುಗಳು ಎಂದು ವಿವರಿಸುತ್ತಾ ದ.ರಾ. ಬೇಂದ್ರೆಯವರು ಹಾಡಿದಂತೆ 'ಕುರುಡು ಕಾಂಚಾಣ'ವನ್ನು ಕುಣಿಯಲು ಬಿಡಬೇಕೇ ಬೇಡವೇ ಎಂದು ನಿರ್ಧರಿಸಬೇಕಾದ ದಿನ ಬಂದಿದೆ ಎಂದರು.

"ಹತಾಶೆಬೇಡ"

ಕೋಮುವಾದಿಗಳು ಜನಗಳ ಮನಸ್ಸುಗಳಲ್ಲಿ ಭಾವಾತಿರೇಕ ಹುಟ್ಟಿಸಿ ಅವರನ್ನು ತಮತ್ತ ಆಕರ್ಷಿಸಿಕೊಳ್ಳಲು ಪ್ರಯತ್ನ ನಡೆಸಿದ್ದಾರೆ ಎಂದು ವಿವರಿಸಿದ ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಆರ್.ಕೆ. ಹುಡಿಗಿ ಅವರು ಕೋಮುವಾದಿಗಳ ತರ್ಕ ಬುಡವಿಲ್ಲದ್ದು ಎಂದು ಸರಳ ಉದಾಹರಣೆಗಳ ಮೂಲಕ ವಿವರಿಸಿದರು. ಕೋಮುವಾದ ಸಮಾಜ ಮುನ್ನಡೆ ಸಾಧಿಸಬೇಕೆನ್ನುವವರೆಲ್ಲರ ಸಮಾನ ವೈರಿ ಆದ್ದರಿಂದ ಈ ಎಲ್ಲಾ ಶಕ್ತಿಗಳಲ್ಲೆ ಒಗ್ಗಟ್ಟು ಬರಬೇಕು ಕೋಮುವಾದದ ವಿರುದ್ಧ ಏನೂ ಮಾಡಲು ಸಾಧ್ಯವಿಲ್ಲ ಎಂಬ ಹತಾಶೆ ಬೇಡ ಎಂದರು. ಈ ಹೋರಾಟದಲ್ಲಿ 'ಐಕ್ಯರಂಗ' ಮಾರ್ಗದರ್ಶಕ ಪತ್ರಿಕೆಯಾಗಬೇಕು ಎಂದು ಆಶಿಸಿದರು.

"ಎಲ್ಲರಿಗೂ ತಲುಪಿಸೋಣ"

ಆರಂಭದಲ್ಲಿ ಸ್ವಾಗತ ಮಾಡಿ ಕೊನೆಗೆ ಸಮಾರೋಪ ಭಾಷಣ ಮಾಡಿದ ರೈತ ಸಂಘದ ಮುಖಂಡ, ಜಿಲ್ಲಾಪರಿಷತ್ ಸದಸ್ಯ ಹಾಗೂ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಮಾರುತಿ ಮಾನ್ಪಡೆಯವರೂ ನಮ್ಮ ಸಮಾಜವನ್ನು ಬಾಧಿಸುತ್ತಿರುವ ಈ ಎರಡು ಸಮಸ್ಯೆಗಳ ಬಗ್ಗೆ ಹೇಳುತ್ತಾ 'ನಾನು ಈ ಸಮಸ್ಯೆಗಳ ಬಗ್ಗೆ ಚಂದವಾಗಿ ಮಾತಾಡುತ್ತೇನೆ ಎನ್ನುತ್ತಾರೆ ಜನ. ಅದಕ್ಕೆ ಸಹಾಯ ನೀಡಿದ್ದು 'ಐಕ್ಯರಂಗ' ಇದನ್ನು ಎಲ್ಲರಿಗೂ ತಲುಪಿಸೋಣ' ಎಂದು ಕರೆ ನೀಡಿದರು.

ಈ 'ಉತ್ಸವ'ದ ಇನ್ನೊಂದು ಮುಖ್ಯ ಅಂಶ ಎಂದರೆ ಗುಲ್ಬರ್ಗಾದ ಸಂಗಾತಿಗಳು ನಗರದ ಪ್ರಮುಖ ಸ್ಥಳಗಳಲ್ಲಿ 'ಐಕ್ಯರಂಗ'ದ ಬಗ್ಗೆ ನಡೆಸಿದ "ಗೋಡೆಬರಹ. ಸಾಮೂಹಿಕ ಸಂಘಟನೆಗಳ ಸಮ್ಮೇಳನ, ಕರೆಗಳ ಬಗ್ಗೆ ಗೋಡೆ ಬರಹಗಳ ಮೂಲಕ ಸಂದೇಶ ಸಾರುವುದು ಹೊಸದೇನೂ ಅಲ್ಲದ ನಮ್ಮ ಓದುಗರಿಗೆ 'ಐಕ್ಯರಂಗ'ದ ಬಗ್ಗೆ ಗೋಡೆಬರಹದ ಸುದ್ಧಿ ಹೊಸದಾಗಿರಬೇಕು ಬಹುಶಃ ರಾಜ್ಯದಲ್ಲಿ ಮೊತ್ತಮೊದಲಬಾರಿಗೆ ಗುಲ್ಬರ್ಗಾದ ಸಂಗಾತಿಗಳು ಇದನ್ನು ಮಾಡಿದ್ದಾರೆ. 'ದುಡಿಯುವ ಜನರ ದನಿ ಐಕ್ಯರಂಗ' 'ಕಾರ್ಮಿಕರ ದನಿ, ರೈತರ ದನಿ ಐಕ್ಯರಂಗ' "ದೇಶದ ಸಾರ್ವಭೌಮತೆಯನ್ನು ರಕ್ಷಿಸಿ ಐಕ್ಯರಂಗ ಓದಿ'' ಎಂಬಿತ್ಯಾದಿ ಘೋಷಣೆಗಳನ್ನು ಗುಲ್ಬರ್ಗಾದ ಪ್ರಮುಖ ಸ್ಥಳಗಳಲ್ಲಿ ಈಗ ನೀವು ಕಾಣಬಹುದು. ವಿಚಾರಸಂಕಿರಣದ ಆವರಣದಲ್ಲಿ ಬೆಂಗಳೂರಿನ ಸಂಗಾತಿಗಳು ಸಿದ್ಧಪಡಿಸಿದ್ದ ಪೋಸ್ಟರುಗಳ ಪ್ರದರ್ಶನವನ್ನು ನಡೆಸಲಾಯಿತು.

ಈ 'ಉತ್ಸವ'ದ ಅಂಗವಾಗಿ ಮೂರು ಗಂಟೆಗಳಲ್ಲಿ 16 ಚಂದಾಗಳನ್ನು ಮಾಡಿಸಲಾಯಿತು. ಇದನ್ನು ಬೇಗನೆ ಕನಿಷ್ಟ ನೂರಕ್ಕೇರಿಸುವ ಗುರಿಯನ್ನು ಗುಲ್ಬರ್ಗಾ ಜಿಲ್ಲೆಯ ಸಂಗಾತಿಗಳು ಹಾಕಿಕೊಂಡಿದ್ದಾರೆ ಎಂದು ಕಾಂ. ಮಾರುತಿ ಮಾನ್ಪಡೆ 'ಐಕ್ಯರಂಗ'ಕ್ಕೆ ತಿಳಿಸಿದ್ದಾರೆ.

●



ಪಿ.ಯು.ಸಿ. ಶುಲ್ಕ ಏರಿಕೆ ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಸರಕಾರ ದಿಢೀರನೆ ಪದವಿಪೂರ್ವ ತರಗತಿ ಶುಲ್ಕವನ್ನು ಶೇಕಡಾ 100 ರಷ್ಟು ಏರಿಸಿರುವುದನ್ನು ಪ್ರತಿಭಟಿಸಿ ದಿನಾಂಕ 8ನೇ ಜೂನ್ 1993 ಪಿ.ಯು.ಸಿ ಮಂಡಳಿಯೆದುರು ವಿದ್ಯಾರ್ಥಿಗಳ ಪ್ರದರ್ಶನ ನಡೆಸಲಾಯಿತು. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿ ಈ ಪ್ರದರ್ಶನ ಸಂಘಟಿಸಿತು.

ಒಂದು ಘಂಟೆ ಪಿ.ಯು.ಸಿ. ಮಂಡಳಿಯೆದುರು ಪ್ರದರ್ಶನ ನಡೆಸಿ ನಿರ್ದೇಶಕರಿಗೆ ಮನವಿ ಪತ್ರ ಅರ್ಪಿಸಲಾಯಿತು.

ಶಿಕ್ಷಣದ ವ್ಯಾಪಾರೀಕರಣ ನಿಲ್ಲಬೇಕು ಎಲ್ಲರಿಗೂ ಶಿಕ್ಷಣ ಸಿಗಬೇಕೆಂಬ ನೆಲೆಯಲ್ಲಿ ಸಾರ್ವತ್ರಿಕ ಶಿಕ್ಷಣದ ಸಂವಿಧಾನದ ಹಕ್ಕಿನ ಆಧಾರದಲ್ಲಿ ಸುಪ್ರೀಂಕೋರ್ಟ್ ಇತ್ತೀಚೆಗೆ ತೀರ್ಪನ್ನು ನೀಡಿದ್ದರೂ ಪಿಯುಸಿ ಶುಲ್ಕವನ್ನು ಸುಮಾರು ಶೇ 100ರಷ್ಟು ಏರಿಸಿರುವ ಪಿಯು ಮಂಡಳಿಯ ಕ್ರಮವು ಅತ್ಯಂತ ವಿದ್ಯಾರ್ಥಿ ವಿರೋಧಿಯಾಗಿದೆ. ಶಿಕ್ಷಣವನ್ನು ದುಬಾರಿಮಾಡಿ, ಸಮಾಜದ ಶ್ರೀಮಂತವರ್ಗಕ್ಕೆ ಅದನ್ನು ಸೀಮಿತಗೊಳಿಸುವ ಪಿಯು ಮಂಡಲಿಯ ಕ್ರಮವು ಸಂವಿಧಾನ ವಿರೋಧಿಯಾಗಿದ್ದು ಜನತೆಯ ಶಿಕ್ಷಣ ಆಶಯವನ್ನು ಹತ್ತಿಕ್ಕುವ ಮಾರಕ ನೀತಿಯಾಗಿದೆ. ಕಳೆದ ವರ್ಷವೇ ಶುಲ್ಕ ಏರಿಕೆಯ ವಿರುದ್ಧ ವಿದ್ಯಾರ್ಥಿಗಳ ಪ್ರಬಲ ವಿರೋಧವನ್ನು ಎದುರಿಸಿ ಶುಲ್ಕ ಏರಿಕೆ ಕ್ರಮವನ್ನು ಹಿಂತೆಗೆದುಕೊಂಡಿದ್ದರೂ ಈಗ ಇದ್ದಕ್ಕಿದ್ದಂತೆ ಶುಲ್ಕ ಹೆಚ್ಚಳವನ್ನು ಪ್ರಕಟಿಸಿರುವುದು ಪಿಯು ಮಂಡಳಿಯ ಜನವಿರೋಧಿ ಶ್ರೀಮಂತಪರ ಧೋರಣೆಯನ್ನು ವ್ಯಕ್ತಪಡಿಸುತ್ತದೆ. ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಸ್ವಾವಲಂಬನೆ ಅತಿಮುಖ್ಯವೆಂದು ಅದಕ್ಕಾಗಿ ಸಾರ್ವತ್ರಿಕ ಶಿಕ್ಷಣ ಮುಖ್ಯವೆಂದು ಪರಿಗಣಿಸಿದ್ದ ತಾರ್ಕಿಕತೆಗೆ ತಿಲಾಂಜಲಿ ಕೊಡುತ್ತಿರುವುದನ್ನು ಶುಲ್ಕ ಏರಿಕೆ ಕ್ರಮದಲ್ಲಿ ಕಾಣಬಹುದಾಗಿದೆ ಎಂದು ಮನವಿ ಪತ್ರ ತಿಳಿಸಿದೆ.

ಜೂನ್ 10ರೊಳಗೆ ಪಿಯುಸಿಯ ಏರಿಸಿರುವ ಶುಲ್ಕವನ್ನು ವಾಪಸ್ಸು ಪಡೆಯದಿದ್ದರೆ ಜೂನ್ 11 ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ ನೀಡಲಾಗುವುದೆಂದು ಎಸ್.ಎಫ್.ಐ. ರಾಜ್ಯ ಸಮಿತಿ ಸರಕಾರವನ್ನು ಎಚ್ಚರಿಸಿದೆ. ಪ್ರದರ್ಶನಕಾರರನ್ನು ಉದ್ದೇಶಿಸಿ ರಾಜ್ಯ ಕಾರ್ಯದರ್ಶಿ ಶಾಂತಾರಾಮ್ ನಾಯಕ್, ರಾಜ್ಯ ಸಹ ಕಾರ್ಯದರ್ಶಿ ಕೆ. ಪ್ರಕಾಶ್ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ರಾಮಕೃಷ್ಣ ನಗರ ಸಂಚಾಲಕ ಶ್ರೀನಿವಾಸ್ ಮತ್ತು ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಮುಂತಾದವರು ಮಾತನಾಡಿದರು.

ಪಿ.ಯು.ಸಿ. ಶುಲ್ಕ ಇಳಿಕೆಗಾಗಿ ಹೋರಾಟ ದೊಡ್ಡ ರೀತಿಯಲ್ಲಿ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯುವುದನ್ನು ತಡೆ ಹಿಡಿಯಬೇಕೆಂದು ಎಸ್.ಎಫ್.ಐ. ವಿನಂತಿಸಿದೆ.

●

'ಐಕ್ಯರಂಗ' ಕ್ಕೆ ಕಾಣಿಕೆ

ತುಮಕೂರಿನ ಡಿ.ವೈ.ಎಫ್.ಐ. ಮುಖಂಡರು ಹಾಗೂ ಜನವಿಜ್ಞಾನ ಆಂದೋಲನದಲ್ಲಿ ಸಕ್ರಿಯರಾಗಿರುವ ಸಂಗಾತಿ ಬಿ. ಉಮೇಶ್ ಜಿ. ರೇಖಾ ರೊಂದಿಗೆ ತಮ್ಮ ಮದುವೆಯ ಸಂತೋಷವನ್ನು 'ಐಕ್ಯರಂಗ'ದೊಂದಿಗೆ ಹಂಚಿಕೊಳ್ಳುತ್ತಾ ರೂ. 101.00 ನ್ನು ಕಾಣಿಕೆಯಾಗಿ ನೀಡಿದರು. 'ಐಕ್ಯರಂಗ' ಕೃತಜ್ಞತೆಯಿಂದ ಇದನ್ನು ಸ್ವೀಕರಿಸುತ್ತಾ ಅವರ ವೈವಾಹಿಕ ಜೀವನ ಸುಖಮಯವಾಗಿರಲಿ ಎಂದು ಹಾರ್ದಿಕವಾಗಿ ಹಾರೈಸುತ್ತಿದೆ.

ಬಾಲಕಿಯ ಅಪಹರಣ: ತುರ್ತು ಕ್ರಮಕ್ಕೆ ಡಿ.ವೈ.ಎಫ್.ಐ ಆಗ್ರಹ

ರಾಯಚೂರು ಜಿಲ್ಲೆಯ ಕೊಪ್ಪಳ-ಯಲಬರ್ಗಾ ತಾಲೂಕಿನಲ್ಲಿ ಸುಮಾರು 8 ಬಾಲಕಿಯರ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ತುರ್ತು ಕ್ರಮ ವಹಿಸಬೇಕೆಂದು ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ರಾಜ್ಯ ಸಮಿತಿ (ಡಿ.ವೈ.ಎಫ್.ಐ) ನಿಯೋಗವು ಅಡಿಷನಲ್ ಪೋಲೀಸ್ ಮಹಾ ನಿರ್ದೇಶಕರಿಗೆ ಮನವಿಯೊಂದನ್ನು ಸಲ್ಲಿಸಿದೆ.

ಕಳೆದ ಮೇ 14 ರಂದು ಕೊಪ್ಪಳ ಮಾರುಕಟ್ಟೆಯಲ್ಲಿ ಮಾಂಸ ತರಲು ಹೋಗಿದ್ದ 11 ವರ್ಷದ ಬಾಲಕಿ ಕುಮಾರ್ ದೌಲತ್ ಬೇಗಂಳನ್ನು ಭರದಿಂದ ಹೊರಟಿದ್ದ

ಕಾರೊಂದರಲ್ಲಿ (ನಂ. ಬಿ.ಎಂ.ಡಿ. 7056) ಬಂದ ದುಷ್ಕರ್ಮಿಗಳು ಯುಲಬುರ್ಗಾ ಮುಖಾಂತರ ಹೊರಬಿದ್ದಾಗ ಆ ಬಾಲಕಿ ಚಾಣಾಕ್ಷತನದಿಂದ ತಪ್ಪಿಸಿಕೊಂಡು ಯಲಬುರ್ಗಾ ನಾಗರೀಕರ ಸಹಾಯದಿಂದ ಪೋಲೀಸ್ ಠಾಣೆಗೆ ತಲುಪಿ ಉಳಿದ ಅಪಹೃತ ಬಾಲಕಿಯರನ್ನು ಉಳಿಸಬೇಕೆಂದು ಕೇಳಿಕೊಂಡಿದ್ದಳು. ಮೇಲಧಿಕಾರಿಗಳು ಠಾಣೆಯಲ್ಲಿ ಇಲ್ಲವೆಂಬ ಕಾರಣ ಮುಂದೊಡ್ಡಿ ಪೋಲೀಸರು ತುರ್ತು ಕ್ರಮ ಜರುಗಿಸಲಿಲ್ಲ. ಹೀಗಾಗಿ ಅಪಹರಣಕಾರರು ಪಾರಾಗಿದ್ದಾರೆ. ಇದುವರೆಗೂ ಅವರೇನಾದರು ಎಲ್ಲಿದ್ದಾರೆ ಎಂಬ ಬಗ್ಗೆ ಯಾವುದೇ ಮಾಹಿತಿ ಇಲ್ಲವಾಗಿದೆ.

ಸಕಾಲದಲ್ಲಿ ಕಾರ್ಯವೆಸಗದ ಪೋಲೀಸ್ ಅಧಿಕಾರಿಗಳ ವಿಳಂಬ, ನಿರ್ಲಕ್ಷ್ಯತನ ಬಗ್ಗೆ ಜನ ಬೇಸರಗೊಂಡಿದ್ದಾರೆ. ಹಿಂದೆ ನಡೆದ ಹಲವಾರು ಘಟನೆಗಳಲ್ಲೂ ಇದೇ ರೀತಿಯ ವಿಳಂಬ ಕ್ರಮ ಅನುಸರಿಸುತ್ತಾ ಬರಲಾಗಿರುವುದನ್ನು ನಾಗರಿಕರು ಡಿ.ವೈ.ಎಫ್.ಐ ಕರ್ನಾಟಕ ಪ್ರಾಂತ ರೈತ ಸಂಘ ಖಂಡಿಸಿವೆ.

ಬಾಲಕಿಯರನ್ನು ಹಾಗೂ ಅಪಹರಣಕಾರರನ್ನು ಪತ್ತೆ ಮಾಡಬೇಕು ಮತ್ತು ವಿಳಂಬ ನಿರ್ಲಕ್ಷ್ಯ ತೋರಿಸುತ್ತಿರುವ ಪೋಲೀಸ್ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಯುವ ಜನ ಫೆಡರೇಷನ್ ನಿಯೋಗವು ಪೋಲೀಸ್ ಉನ್ನತಾಧಿಕಾರಿಗಳನ್ನು ಒತ್ತಾಯಿಸಿತು.

ಈ ನಿಯೋಗದಲ್ಲಿ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಕಾರ್ಯದರ್ಶಿ ಎಸ್.ವೈ. ಗುರುಶಾಂತ್, ಯುಲಬರ್ಗಾ ತಾಲ್ಲೂಕ್ ಸಮಿತಿ ಅಧ್ಯಕ್ಷ ಮೌಲಾ ಸಾಬ್ ಬುಲ್ಡಿಯವರು ಇದ್ದರು.

ಮನವಿಯನ್ನು ಸ್ವೀಕರಿಸಿದ ಅಡಿಷನಲ್ ಡಿ.ಜಿ.ಯವರಾದ ಕೋದಂಡರಾಮಯ್ಯನವರು ತುರ್ತು ಕ್ರಮಕ್ಕೆಗೊಳ್ಳುವುದಾಗಿ ಭರವಸೆ ನೀಡಿದರು. ಅಲ್ಲದೇ ರಾಯಚೂರು ಜಿಲ್ಲಾ ಅಡಿಷನಲ್ ಪೋಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಯವರಿಗೆ ಸಂದೇಶವನ್ನು ಕಳಿಸಿ ಪ್ರಕರಣದ ಬಗ್ಗೆ ತುರ್ತು ವಿಚಾರಣೆ ನಡೆಸಿ ಸೂಕ್ತ ಕ್ರಮ ವಹಿಸಲು ಆದೇಶ ನೀಡಿದರು.

ಕಾಂ. ಮಹಾಬಲ ಶೆಟ್ಟಿ ನಿಧನ

ಸಿಪಿಐ(ಎಂ) ಪಕ್ಷದ ಸಾರಿಗೆ ಶಾಖೆಯ ಸದಸ್ಯ ಹಾಗೂ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಸದಸ್ಯರೂ ಕಾಂ. ಮಹಾಬಲ ಶೆಟ್ಟಿಯವರು ದಿನಾಂಕ ಜೂನ್ 4,1993ರ ರಾತ್ರಿ ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಅವರಿಗೆ 35 ವರ್ಷವಾಗಿತ್ತು. ಎಸ್.ಎಫ್.ಐ. ಕಾರ್ಯಕರ್ತರಾಗಿ ಬಂದ ಅವರು ಅನಂತರ ಡಿ.ವೈ.ಎಫ್.ಐ. ಹಾಗೂ ಸಾಮೂಹಿಕ ಸಂಘಟನೆಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಿದರು. ಸ್ವಲ್ಪ ಸಮಯ ಪೂರ್ಣಕಾಲಿಕ ಕಾರ್ಯಕರ್ತರೂ ಆಗಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ನೌಕರರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಮೋಟಾರ್ ಟ್ರಾನ್ಸ್‌ಪೋರ್ಟ್ ಎಂಡ್ ಎಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ ಸಹಕಾರ್ಯದರ್ಶಿಯಾಗಿದ್ದರು ಸಿಪಿಐ(ಎಂ)ನ ಹೋರಾಟ ಚಳುವಳಿಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ಅವರು ವೃದ್ಧ ತಂದೆತಾಯಿ, ಪತ್ನಿ ಹಾಗೂ ಎಳೆಯ ಪ್ರಾಯದ ಇಬ್ಬರು ಮಕ್ಕಳನ್ನು ಅಗಲಿರುವರು. ಇವರ ನಿಧನವು ಪಕ್ಷಕ್ಕೆ ದೊಡ್ಡ ನಷ್ಟವಾಗಿದೆ ಎಂದು ಪಕ್ಷದ ಮಂಗಳೂರು ನಗರ ಸಮಿತಿ ತೀವ್ರ ಸಂತಾಪ ವ್ಯಕ್ತ ಪಡಿಸಿದೆ.

[illegible] ಪ್ರಕಾಶಕ ಜಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಿಮ್ಮಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 236462. ಸಂಪಾದಕರು : ಜಿ.ರಾಮಚಂದ್ರರಾವ್